3. ಶ್ರೀ ಹೆಚ್. ವಿಶ್ವನಾಥ್ (ಅರಣ್ಯ ಮಂತ್ರಿ) ಅವರುಃ -

1956ನೇ ಸಾಲಿನ ಕಂಪನಿಗಳ ಕಾಯ್ದೆಯ 619 (ಎ) ಕಲಮಿನ ಮೇರೆಗೆ ಃ-

1992-93ನೇ ಸಾಲಿನ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತದ 15ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು ಃ- ಮಂಡಿಸಲಾಯಿತು.

ಕಾರ್ಯದರ್ಶಿಗಳ ವರದಿ

ಕಾರ್ಯದರ್ಶಿಗಳು ಃ- ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತೇನೆ.

1) ಕರ್ನಾಟಕ ಬಾಡಿಗೆ ನಿಯಂತ್ರಣ ತಿದ್ದುಪಡಿ ವಿದೇಯಕ1 994 ಅನುಬಂಧ-I

2) ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ 1994. ಅನುಬಂಧ-II

ಅಧ್ಯಕ್ಷರು ಃ- ಮಂಡಿಸಲಾಯಿತು

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು ಃ- ಈಗ 1994 - 95ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತಿನ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಅಧ್ಯಕ್ಷರು ಃ- ಈಗ 1994-95ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತಿನ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಆರ್.ವಿ.ದೇಶಪಾಂಡೆ ಃ- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಎಲ್ಲಿದ್ದಾರೆ? ನಾವು ರೈಸ್ ಮಾಡಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಉಪ ಮುಖ್ಯಮಂತ್ರಿಗಳು ಬರಬೇಕು, ಅವರು ಬರಬೇಕು ಇವರು ಬರಬೇಕು ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬರಲಿ. ಅಲ್ಲಿಯವರೆಗೂ ನಾವು ಭಾಗವಹಿಸುವುದಿಲ್ಲ ನಾವು ಏತಕ್ಕೆ ನಿಮಗೆ ಸಹಕಾರ ಕೊಡಬೇಕು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ ಃ- ಮಾನ್ಯ ಅಧ್ಯಕ್ಷರೇ, ಇಂದು ಎರಡು ಸಭೆಗಳನ್ನು ಒಂದೇ ಸಮಯಕ್ಕೆ ಕರೆಯಲಾಗಿದೆ ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳದ್ದೇ ಕಾರ್ಯಕಲಾಪಗಳು ಇವೆ. ಆದ್ದರಿಂದ ಈಗ ಕಾಗೋಡು ತಿಮ್ಮಪ್ಪನವರು ತಮ್ಮ ವಿಧೇಯಕವನ್ನು ಮಂಡಿಸುತ್ತಾರೆ. ಅದರ ಮೇಲೆ ತಾವು ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್ ಃ- ಸ್ವಾಮಿ ಕೆಲವು ಹೇಳಿಕೆಗಳನ್ನು ಸರ್ಕಾರ ಕೊಡಬೇಕಾಗಿದೆ.

ಅಧ್ಯಕ್ಷರು :- ವಾಟಾಳ್ ನಾಗರಾಜ್‌ರವರೇ, ತಾವು ಸ್ವಲ್ಪ ತಡಮಾಡಿ ಬಂದಿರಿ ಅದೆಲ್ಲಾ ಮುಗಿದು ಹೋಗಿದೆ. ಯಾವ ಯಾವ ವಿಷಯಗಳ ಬಗ್ಗೆ ಹೇಳಿಕೆ ಕೊಡಬೇಕು ಎನ್ನುವುದನ್ನು ನಿಗಧಿಪಡಿಸಿದ್ದಾರೆ. ಸುಮಾರು 12 ಗಂಟೆಯ ವೇಳೆಗೆ ಅವರು ಒಂದೊಂದಾಗಿ ಸ್ಟೇಟ್‌ಮೆಂಟ್ ಕೊಡುತ್ತಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ಈಗ ಪೂರಕ ಅಂದಾಜು ಬೇಡಿಕೆಗಳ ಮೇಲೆ ಚರ್ಚೆ ಮಾಡಬಹುದು. ಅದಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ :- ಕಂದಾಯ ಮಂತ್ರಿಗಳು ಹೇಗೆ ಉತ್ತರ ಕೊಡುತ್ತಾರೆ. ಇದನ್ನು ಫೈನಾನ್ಸ್ ಮಿನಿಸ್ಟರ್ ಮೂವ್ ಮಾಡಿದಾಗ ರೆವಿನ್ಯೂ ಮಿನಿಸ್ಟರ್ ಹೇಗೆ ಉತ್ತರ ಕೊಡುತ್ತಾರೆ? It is responsibility of the Finance Minister to reply ಅಜೆಂಡಾ ಪ್ರಕಾರ ನಿಮಗೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಡಬೇಕಾಗಿತ್ತು. ನೋಡಿ ಭದ್ರಾವತಿಯಲ್ಲಿ ಏನು ಫೈರಿಂಗ್ ಆಯಿತು. ಅದು ಬಹಳ ಮುಖ್ಯವಾಗಿತ್ತು, ಅದನ್ನು ಮೊದಲು ಹಾಕಿ ಎಂದು ಹೇಳಿದ್ದೆವು. ಆದರೆ ಅದನ್ನು ಇವತ್ತು ಕಡೆಯಲ್ಲಿ ಹಾಕಿದ್ದಾರೆ. ಮಾನ್ಯ ಸಭಾಧ್ಯಕ್ಷರೇ, ತಾವು ತಪ್ಪು ತಿಳಿದುಕೊಳ್ಳಬಾರದು. ನಾನು ನಿಮ್ಮ ಮೇಲೆ ಅಪಾಧನೆ ಮಾಡುತ್ತಿಲ್ಲ. ಮೊದಲು ನಿಯಮ 68 ಪ್ರಕಾರ ಚರ್ಚೆ ಅದರೆ ಅದಕ್ಕೆ ಒಂದು ಗಾಂಭೀರ್ಯ ಬರುತ್ತದೆ. ಆದರೆ ಇವತ್ತು ತಾವು ತಮಗೆ ಏನು ಬಿಸಿನೆಸ್ ಬೇಕು ಅದರ ಪ್ರಕಾರ ಹಾಕಿಕೊಂಡಿದ್ದೀರಿ. ಗಮನ ಸೆಳೆಯುವ ಸೂಚನೆಗಳು ಇಲ್ಲ. ಪ್ರಶ್ನೋತ್ತರ ಇಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಈಗಾಗಲೇ ಪೂರಕ ಅಂದಾಜುಗಳನ್ನು ಮಂಡಿಸಲಾಗಿದೆ. ಚರ್ಚೆಯನ್ನು ಪ್ರಾರಂಭ ಮಾಡಬಹುದು. ಉತ್ತರ ಕೊಡುವ ಸಮಯಕ್ಕೆ ಅವರು ಬರುತ್ತಾರೆ.

ಅಧ್ಯಕ್ಷರು :- ದೇಶಪಾಂಡೆಯವರೇ, ತಾವು ಶುರು ಮಾಡಿ. ಅವರು ಬರುತ್ತಾರೆ.

ಶ್ರೀ ಧರ್ಮಸಿಂಗ್ (ಕಂದಾಯಸಚಿವರು) :- ಮಾನ್ಯ ಅಧ್ಯಕ್ಷರೇ, ಈಗ ಆದಕ್ಕಿಂತ ಮುಂಚೆ ನನ್ನ ಇಲಾಖೆಗೆ ಸಂಬಂಧಪಟ್ಟ ಎರಡು ಬಿಲ್‌ಗಳು ಇವೆ ಅವುಗಳನ್ನು ತೆಗೆದುಕೊಳ್ಳಬಹುದು ಎಂದು ನಾನು ಕೇಳಿಕೊಳ್ಳುತ್ತೇನೆ. ಅದನ್ನು ಮುಗಿಸಿಬಿಡೋಣ. ಏಕೆಂದರೆ ಈಗಾಗಲೇ ವಿಧಾನ ಪರಿಷತ್ತಿನಲ್ಲಿ ಇವು ಪಾಸಾಗಿದೆ. ಆದ್ದರಿಂದ ಅವುಗಳನ್ನು ಸುಮ್ಮನೆ ಪಾಸ್ ಮಾಡಿಬಿಡಬಹುದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ತಾವು ಈಗ ಪೂರಕ ಅಂದಾಜುಗಳ ಮೇಲೆ ಚರ್ಚೆ ಪ್ರಾರಂಭ ಮಾಡಬಹುದು.

* ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, 1994-95ನೇ ಸಾಲಿನ ಮೊದಲನೇ ಕಂತಿನ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಅನ್ನು ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಸದನದ ಒಪ್ಪಿಗೆಯನ್ನು ಪಡೆದುಕೊಳ್ಳಲು ಇಟ್ಟಿದ್ದಾರೆ.

ನಾನು ಹಲವಾರು ಭಾರಿ ಈ ಸದನದಲ್ಲಿ ಹೇಳಿದ್ದೇನೆ. ವೀರಪ್ಪಮೊಯ್ಲಿಯವರು ಹಣಕಾಸಿನ ಮಂತ್ರಿಗಳು ಆದ ನಂತರ ಇಡೀ ಹಣಕಾಸಿನ ಶಿಸ್ತು ಏನು ಇದೆ, ಅದನ್ನು ಹಾಳು ಮಾಡಿದ್ದಾರೆ. ಎಷ್ಟೊಂದು ನಾಶ ಮಾಡಿದ್ದಾರೆಂದರೆ ನಿನ್ನೆ ನಾವು ಅವರ ಡಿಮ್ಯಾಂಡ್ಸ್ ಏನು ಪಾಸ್ ಮಾಡಿಕೊಟ್ಟಿದ್ದೇವೆ. ಅದೇ ದಿನ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಚರ್ಚೆಗೆ ಬಂದಿದೆ ನನಗೆ ಅನಿಸುತ್ತದೆ, ರಾಜ್ಯದಲ್ಲಿ ಈ ರೀತಿ ಯಾವತ್ತೂ ಆಗಿಲ್ಲ. ಅಂದರೆ ಇವರು ಏನು ಪ್ರಾವಿಷನ್ ಮಾಡುತ್ತಾರೆ. ಇದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಇವತ್ತು ನಾವು ಏನು ನೋಡುತ್ತಿದ್ದೇವೆ ಅಂದರೆ ಹಲವಾರು ಕೆಲಸಗಳು ಮುಂಗಡ ಪತ್ರದಲ್ಲಿ ಏನು ಮಂಜೂರು ಆಗುತ್ತದೆ ಆ ಕೆಲಸಗಳನ್ನು 8-10 ವರ್ಷಗಳಲ್ಲಿ ಸಹ ಪೂರೈಸುವುದಕ್ಕೆ ಆಗುವುದಿಲ್ಲ. ಅದಕ್ಕೆ ಮುಖ್ಯವಾದ ಕಾರಣ ಅದಕ್ಕೆಬೇಕಾದ ಅಡಿಕ್ವೇಟ್ ಹಣ ನಾವು ಮುಂಗಡಪತ್ರದಲ್ಲಿ ಇಡುವುದಿಲ್ಲ ನಾನು ತಮಗೆ ಒಂದು ಉದಾಹರಣೆ ಕೊಡುತ್ತೇನೆ. ಈ ವರ್ಷ ಚುನಾವಣೆ ವರ್ಷ ಇವತ್ತು ಸರ್ಕಾರ ಏನು ಮಾಡಿದೆ? ಯಾವುದೇ ಕೆಲಸಆಗಬೇಕಾದರೆ ಅದು ಮಂಜೂರಾಗಿರಬೇಕು. ಅದು ಲೋಕೋಪಯೋಗಿ ಇರಲಿ, ನೀರಾವರಿ ಇಲಾಖೆ ಇರಲಿ, ಯಾವುದೇ ಇಲಾಖೆ ಇರಲಿ ಒನ್ ಥರ್ಡ್ ಪ್ರಾವಿಷನ್ ಮಾಡುತ್ತಿದ್ದರು. ಆದರೆ ಇವತ್ತು ಏನು ಮಾಡುತ್ತಿದ್ದಾರೆಂದರೆ, ಇವರಲ್ಲಿ ಹಣ ಇಲ್ಲ. ಹೆಚ್ಚು ಕೆಲಸ ತೆಗೆದುಕೊಂಡು ಪ್ರಚಾರ ಮಾಡುವ ದೃಷ್ಟಿಯಿಂದ ಮಾನ್ಯ ಸಚಿವರು ಏನು ಮಾಡಿದ್ದಾರೆಂದರೆ, ಒಂದು 5 ಲಕ್ಷ ಕೆಲಸಕ್ಕೆ ಒನ್ ಫಿಫ್ತ್ ಪ್ರಾವಿಷನ್ ಮಾಡಿದರೆ ಆ ಕೆಲಸ ಮುಗಿಯಬೇಕಾದರೆ ಎಷ್ಟು ವರ್ಷ ಬೇಕು? ಇಲ್ಲಿ ಪ್ರತಿಯೊಂದು ಕಡೆ ಇವರು ಏನು ಸಪ್ಲಿಮೆಂಟರಿ ಎಸ್ಟಿಮೇಟ್ ತಂದಿದ್ದಾರೆ. ಅದನ್ನು ತಾವು ನೋಡಿದರೆ ಏನು ಕಾಣಿಸುತ್ತದೆ ಅಂದರೆ ಎಲ್ಲಾ ಕಡೆ ಇನ್ ಅಡಿಕ್ವೇಟ್ ಪ್ರಾವಿಷನ್ಸ್ ಇದೆ. ಇವತ್ತು ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬೇಕು ಇವತ್ತು ಸರಿಯಾಗಿ ಪ್ಲಾನಿಂಗ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟಿನ ಹೊಂದಾಣಿಕೆ ಇಲ್ಲ, ಪ್ಲಾನಿಂಗ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೋ-ಆರ್ಡಿನೇಶನ್ ಇಲ್ಲ, ಈ ರೀತಿ ಹೊಂದಾಣಿಕೆ ಇಲ್ಲದಿದ್ದರಿಂದ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಒಂದು ಎರಡು ಮೂರು ನಾಲ್ಕು ಕಂತುಗಳಲ್ಲಿ ಬರುತ್ತಿದೆ. ಈವತ್ತು ಈ ಒಂದು ರಾಜ್ಯದ ಹಣಕಾಸಿನ ಅಡ್ಮಿನಿಸ್ಟ್ರೇಷನ್ ಸರಿ ಇಲ್ಲ. ಒಂದು ರಾಜ್ಯದ ಒಂದು ಮುಂಗಡ ಪತ್ರವನ್ನು ಮಂಡಿಸಿದಾಗ ಅದರಲ್ಲಿ ಎಲ್ಲ ರೀತಿಯಿಂದ ವಿಚಾರ ಮಾಡಿ, ಅಡಿಕ್ವೇಟ್ ಪ್ರಾವಿಷನ್ ಅನ್ನು ಮಾಡಬೇಕಾಗುತ್ತದೆ. ಅದನ್ನು ಮಾಡದಿದ್ದರೆ ಸರ್ಕಾರ ಈ ರೀತಿಯಾಗಿ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನ್ನು ತಂದರೆ ನಾವು ಹೇಗೆ ಒಪ್ಪುವುದಕ್ಕೆ ಸಾಧ್ಯವಿದೆ? ಮಾನ್ಯ ಅಧ್ಯಕ್ಷರೇ, ಒಂದೆರಡು ವಿಚಾರಗಳನ್ನು ನಾನು ತಮ್ಮಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದನ್ನು ಇವತ್ತು ಅವರು ವಿವರಿಸ ಬೇಕು.

A sum of Rs.1.66 Lakhs represents 1654 Ordinary Bonus shares allotted to Messrs. Tata Iron and Steel Company Limited, Bombay. The value of this Bonus Shares of Rs.1,65,000 is debited to this Head of Account and given credit to Miscellaneous Capital.

ಟಾಟಾ ಕಂಪನಿಗೆ ಇವರು ಹಣ ಏನು ಕೊಟ್ಟಿದ್ದಾರೆ, Investments in Public Sector Undertakings ಯಾವ ರೇಟ್‌ಲ್ಲಿ ಇವರು ಶೇರ್ ಕೊಟ್ಟರು? ಅದರ ಮಾರ್ಕೆಟ್ ಬೆಲೆ ಏನಿದೆ? ಇದನ್ನು ಕೊಡುವ ಅವಶ್ಯಕತೆ ಏನಿತ್ತು? ಇದರ ವಿವರಣೆಯನ್ನು ಮಾನ್ಯ ಅರ್ಥಮಂತ್ರಿಗಳು ಕೊಡಬೇಕಾಗುತ್ತದೆ. ಅದೇ ಪ್ರಕಾರ ಇವತ್ತು ನಮ್ಮಲ್ಲಿ ಹಲವಾರು ಸ್ಪಿನ್ನಿಂಗ್ ಮಿಲ್ಸ್ ಇವೆ, ಮಹಾರಾಷ್ಟ್ರದಲ್ಲಿ ಹಲವಾರು ಶುಗರ್ ಫ್ಯಾಕ್ಟರಿಗಳು ಬಂದಿವೆ. ಅವರಿಗೆ ಅಸಿಸ್ಟ್ ಮಾಡುವುದಕ್ಕೆ, ಶೇರ್ ಕ್ಯಾಪಿಟಲ್ ಕೊಡುವುದಕ್ಕೆ ಅಲ್ಲಿನ ಬಜೆಟ್‌ನಲ್ಲಿ ಪ್ರಾವಿಷನ್ ಮಾಡುತ್ತಾರೆ. ಇವತ್ತು ನಮ್ಮಲ್ಲಿ ಆ ಪ್ರಾವಿಷನ್ ಇಲ್ಲ. ಹಾಗಾಗಿ ಹಲವಾರು ಕಡೆ ಸಕ್ಕರೆ ಕಾರ್ಖಾನೆಗಳು ರಿಜಿಸ್ಟರ್ ಆದರೂ ಕೂಡ, ಕೇಂದ್ರಸರ್ಕಾರ ಒಪ್ಪಿಕೊಂಡರೂ ಸಹ ಇವೊತ್ತು ಅವರು ಮುಂದೆ ಬರುತ್ತಾ ಇಲ್ಲ. ಇವತ್ತು ಸರ್ಕಾರ ಒಪ್ಪಿಕೊಂಡರೂ ಸಹ ಸಕ್ಕರೆ ಕಾರ್ಖಾನೆ, ಸ್ಪಿನ್ನಿಂಗ್ ಮಿಲ್ಸ್ ಪ್ರಾರಂಭವಾಗಬೇಕಾದರೆ ಹತ್ತು-ಹನ್ನೆರಡು ವರ್ಷಗಳು ಬೇಕಾಗುತ್ತದೆ. ಇವತ್ತು ಸರ್ಕಾರ ಡಿಫಾಲ್ಟರ್ ಆಗಿರುವ ಕಾರಣಕ್ಕೆ , ಕೇಂದ್ರ ಸರ್ಕಾರದ ಸಂಸ್ಥೆಗಳು ಏನಿವೆ ಅದು ಐಡಿಬಿಐ ಇರಬಹುದು, ಅದು ನಬಾರ್ಡ್ ಇರಬಹುದು, ಎನ್‌ಸಿಡಿಸಿ ಇರಬಹುದು ಎನ್‌ಡಿಡಿಬಿ ಇರಬಹುದು, ಅವುಗಳು ಹಣ ಕೊಡುವುದಕ್ಕೆ ತಯಾರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, a loan of Rs.151 Lakhs and Rs.127 Lakhs was released to Tungabhandra Farmers Co-operative Spinning Mill, Ranebennur and Someshwara Farmers Cooperative Spinning Mill, Lakshmeeshwara. ಈ ಯುನಿಟ್‌ಗಳಿಗೆ ನೀವು ಹಣ ಕೊಡುವುದಕ್ಕೆ ಕಾರಣ ಏನು? ಈ ಯೂನಿಟ್‌ಗಳು ಎರಡು - ಮೂರು ವರ್ಷಗಳಿಗೆ ಮೊದಲೇ ಪ್ರಾರಂಭವಾಗಬೇಕಿತ್ತು. ಈ ಯೂನಿಟ್‌ನ ಚೇರಮನ್ ನಿಮ್ಮ ಪಕ್ಷದ ಶಾಸಕರು ಎಂದು ಕೊಟ್ಟಿರೋ ಅಥವಾ ನಿಜವಾದ ಅವಶ್ಯಕತೆ ಇದೆಯೆಂದು ಕೊಟ್ಟಿದ್ದೀರೋ? ಇನ್ನೂ ಈ ಸ್ಪಿನ್ನಿಂಗ್ ಮಿಲ್ಸ್ ಪ್ರಾರಂಭವಾಗಿಲ್ಲ. ಈ ಪ್ರಕಾರ ಸರ್ಕಾರ ಹಣ ಪೋಲು ಮಾಡಿದರೆ, ಯಾವ ಪ್ರಕಾರ ನಾವು ಇಲ್ಲಿ ಮಂಜೂರಾತಿ ಕೊಡುವುದಕ್ಕೆ ಸಾಧ್ಯವಿದೆ? ಇದನ್ನು ನಾವು ವಿರೋಧ ಮಾಡಬೇಕಾಗುತ್ತದೆ. ಅದೇ ಪ್ರಕಾರ ನಮ್ಮ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ಇದು ಸಂಪೂರ್ಣವಾಗಿ ಮುಚ್ಚಿ ಹೋಗಿದೆ ಸಂಪೂರ್ಣವಾಗಿ ದಿವಾಳಿ ತೆಗೆದಿದೆ. ಅಲ್ಲಿ ಕಬ್ಬು ಇಲ್ಲ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲೊಂದು ಸಕ್ಕರೆ ಕಾರ್ಖಾನೆ ಆಗಬೇಕು. ಆ ಇಚ್ಛೆ ಇರಲಿ, ಈ ಸಕ್ಕರೆ ಕಾರ್ಖಾನೆ ಅವರ ಕಾಲದಲ್ಲಿ ಬಂದಿಲ್ಲ. ಈ ಕಾರ್ಖಾನೆಯನ್ನು ಉರ್ಜಿತಾವಸ್ಥೆಗೆ ತರಬಹುದಾದರೆ ಮಾಡಿ. ಆದರೆ ಹಲವಾರು ಸಲ ಪ್ರಯತ್ನ ಮಾಡಿದರೂ ಅದು ಬಂದಿಲ್ಲ ವಾದ ಕಾರಣ ಪುನಃ ಆ ಕಾರ್ಖಾನೆಗೆ ಸರ್ಕಾರದಿಂದ 624.64 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಆರು ಕೋಟಿ 24 ಲಕ್ಷರೂಪಾಯಿಗಳನ್ನು ಕೊಡುವುದಕ್ಕೆ ಏನು ಕಾರಣ ಸ್ವಾಮಿ? ಹಣ ಕೊಟ್ಟು ಏನು ಪ್ರಯೋಜನ ಆಗಿದೆ? ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಹಣ ಕೊಟ್ಟ ನಂತರ ಎಷ್ಟು ಕ್ರಷಿಂಗ್ ಅಲ್ಲಿ ಆಗಿದೆ? ರೈತರಿಗೆ ಅಲ್ಲಿ ಏನು ಉಪಯೋಗ ಆಗಿದೆ? ಇದೆಲ್ಲಾ ನಮಗೆ ಗೊತ್ತಾಗಬೇಕಾಗುತ್ತದೆ. ಅದು ಗೊತ್ತಾಗದ ವಿನಹ, ನಾವು ಮಂಜೂರಾತಿ

ಕೊಡುವುದಕ್ಕೆ ಬರುವುದಿಲ್ಲ. ಹಾಗಾಗಿ ಮಾನ್ಯ ಅಧ್ಯಕ್ಷರೇ ಇಲ್ಲಿ ಎಲ್ಲಾ ಕಡೆ ನಾವೇನು ನೋಡಿದ್ದೇವೆ ಅಂದರೆ, ಇನ್‌ಅಡಿಕ್ವೇಟ್ ಪ್ರಾವಿಷನ್ಸ್, ಮಾಡಿ ಸರ್ಕಾರ ಇವತ್ತು ನಮ್ಮ ಕಡೆಯಿಂದ ಅದರ ಮೇಲೆ ಹಾಕಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ. ಆದ್ದರಿಂದ ಎಲ್ಲೆಲ್ಲಿ ಸ್ಪಿನ್ನಿಂಗ್ ಮಿಲ್, ಶುಗರ್ ಫ್ಯಾಕ್ಟರಿ ಮತ್ತು ಸಿಕ್ ಯುನಿಟ್ಸೆಗೆ ಸರ್ಕಾರ ಹಣ ಕೊಟ್ಟಿದೆ, ಅದು ಯಾಕೆ ಕೊಟ್ಟರು, ಅದರ ಅವಶ್ಯಕತೆ ಏನು ಬಂತು ಎಂದು ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆಯೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇವತ್ತು ಪ್ರೈಮರಿ ಸ್ಕೂಲ್ ರಿಪೇರ್ಸ್ ಬಗ್ಗೆ 13ನೇ ಪುಟದಲ್ಲಿ ಏನು ಹೇಳುತ್ತಾರೆ ಎಂದರೆ 220 Lakhs is required to undertake the repairs of Primary School Buildings. As no provision was made in the Budget for this purpose, the required amount is included ಎಂದು ಇದಕ್ಕೆ ಪ್ರಾವಿಷನ್ ಯಾಕೆ ಮಾಡಲಿಲ್ಲ? ಹಾಗಾಗಿ ನಾನು ಈ ಸರ್ಕಾರಕ್ಕೆ foresight ಇಲ್ಲ. ಈ ಸರ್ಕಾರಕ್ಕೆ ಪ್ಲಾನಿಂಗ್ ಇಲ್ಲ ಎಂದು ಹೇಳಿದೆ. There is no co-ordination between Planning and Finance Departments ನಾನು ಕೇಳುತ್ತಿದ್ದೇನೆ, ಶಾಲಾ ರೀಪೇರಿ, ಪ್ರತಿವರ್ಷ ಆಗ ಬೇಕು ಮತ್ತು ಪ್ರತಿವರ್ಷ ಇದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಆಗಬೇಕು. ಬಜೆಟ್‌ನಲ್ಲಿ ಪ್ರಾವಿಷನ್ ಮಾಡದೆ, ಇವತ್ತು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಹಾಕಿಕೊಂಡು, 220 ಲಕ್ಷ ರೂಪಾಯಿಗಳಿಗೆ ತಾವು ಮಂಜೂರಾತಿಯನ್ನು ಪಡೆದುಕೊಳ್ಳುತ್ತಿದ್ದೀರಿ. ನಿಮಗೆ ಏನು ಅವಶ್ಯಕತೆ ಬಂತು? ಇದಕ್ಕೆ ಮುಂಚೆಯೇ ನೀವು ಯಾಕೆ ಪ್ರಾವಿಷನ್ ಮಾಡಲಿಲ್ಲ? ಹಾಗಾಗಿ ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಪಾಸ್ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದರ ಅವಶ್ಯಕತೆ ಏನಿದೆ? ಲಾಸ್ಟ ಮಿನಿಟ್‌ನಲ್ಲಿ ಏನು ಬಂತು ಅವುಗಳನ್ನು ಫೋರ್‌ಸೀ ಮಾಡುವುದಕ್ಕಾಗುವುದಿಲ್ಲ. ಅಂಥವುಗಳು ಬಂದರೆ ನಾವು ಮಾನ್ಯತೆ ಕೊಡಬಹುದು. ಆದರೆ ಇವೆಲ್ಲಾ ನಾರ್ಮಲ್ ಕೋರ್ಸಿನಲ್ಲಿ ಬಜೆಟ್‌ನಲ್ಲಿ ಇರಬೇಕಾಗುತ್ತದೆ. ಯಾವ ವಿಚಾರ ಬಜೆಟ್‌ನಲ್ಲಿ ನಾರ್ಮಲ್ ಕೋರ್ಸಿನಲ್ಲಿ ಬಂದಿಲ್ಲ ಅವನ್ನು ಸಪ್ಲಿಮೆಂಟರಿ ಎಸ್ಟಿಮೇಟ್ ಮೂಲಕ ನಮ್ಮ ಕಡೆಯಿಂದ ಮಂಜೂರು ಮಾಡಿಕೊಳ್ಳಲು ನಾವು ಒಪ್ಪಿಗೆ ನೀಡುವುದಿಲ್ಲ ವೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. "Additional amount of Rs.20.00 lakhs is required to Kodagu Zilla Panchayat to undertake repair works of school buildings."

ಸ್ಪೆಷಲ್ಲಾಗಿ ಕೊಡಗು ಜಿಲ್ಲೆಗೆ ಕೊಡುವುದಕ್ಕೆ ಇದು ಏಕೆ ? ಏನು ಕಾರಣ ಇತ್ತು. ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ ಅದರ ರೀಸನ್ ಏನು? ಪ್ರವಾಹದಿಂದಾಗಿ ಡ್ಯಾಮೇಜಾಗಿದೆಯೇ ಎಂದು ಸ್ಪಷ್ಟವಾಗಿ ಕಾರಣ ಗೊತ್ತಾಗಬೇಕಾಗುತ್ತದೆ. 20 ಜಿಲ್ಲಾ ಪರಿಷತ್‌ಗಳಿವೆ, ಕೊಡಗು ಒಂದೇ ಜಿಲ್ಲೆಗೆ 20 ಲಕ್ಷ ಏತಕ್ಕೆ ಕೊಟ್ಟರಿ? ಕೊಡಿ, ಎಲ್ಲರಿಗೂ ಕೊಡಿ, ನನ್ನದೇನೂ ತಕರಾರಿಲ್ಲ? ಏಕೆ ಕೊಟ್ಟಿರಿ? ಇದಕ್ಕೆ ಸ್ಪೆಷಲ್ ರೀಸನ್ಸ್ ಎಂದು ಗೊತ್ತಾಗಬೇಕಾಗುತ್ತದೆ. ಹಾಗಾಗಿ ಎಲ್ಲಾ ಹಂತಗಳಲ್ಲಿ ಸರ್ಕಾರ ಯಾವ ಪ್ರಾವಿಷನ್ನೂ

ಅಡಕ್ವೇಟ್ ಮಾಡದೆ ಇಂತಹ ಸಪ್ಲಿಮೆಂಟರಿ ಎಸ್ಟಿಮೇಟ್ ತಂದು ಮಂಜೂರು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ. ಉದಾಹರಣೆಗೆ ಹೇಳುತ್ತೇನೆ ನಮ್ಮ ವಿದ್ಯಾರ್ಥಿಗಳಿಗೆ ನಾವು ಬಸ್ ಪಾಸ್ ಕೊಟ್ಟಿದ್ದೇವೆ, ಅದು ಸಬ್ಸಿಡೈಸ್ ಆಗುತ್ತದೆ. ಅದು ಸರ್ಕಾರಕ್ಕೆ ಗೊತ್ತಿಲ್ಲವೇ ಪ್ರತಿವರ್ಷ ಎಷ್ಟು ವಿದ್ಯಾರ್ಥಿ ಹೋಗುತ್ತಾರೆ, ಎಷ್ಟು ಅಂದಾಜು ಆಗುತ್ತದೆ ಎಂದು ಅದಕ್ಕೂ ಸರಿಯಾಗಿ ಪ್ರಾವಿಷನ್ ಮಾಡಿಲ್ಲ. ಇಷ್ಟು ಬೇಗನೆ ಈ ಸಪ್ಲಿಮೆಂಟರಿ ಎಸ್ಟಿಮೇಟ್ ಬರುತ್ತದೆಂದು ನಾನು ಅಪೇಕ್ಷೆ ಮಾಡಿರಲಿಲ್ಲ. ಇದು ತಂದಿದ್ದೂ ಸರಿಯಿಲ್ಲ. ಸರ್ಕಾರ ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಇವರು ವೋಟ್ ಆನ್ ಆಕೌಂಟ್ 30-9-94 ತೆಗೆದುಕೊಂಡಿದ್ದಾರೆ. ಹಲವಾರು ಇಲಾಖೆಗಳಲ್ಲಿ ಇವತ್ತು ಹಣವಿಲ್ಲ. ಅರಣ್ಯ ಇಲಾಖೆಯಲ್ಲಿ 30 ರಿಂದ 40 ಕೋಟಿ ರೂ ಪೇಮೆಂಟಾಗ ಬೇಕಾಗಿದೆ. ಸ್ಯಾಂಡಲ್‌ವುಡ್‌ನವರಿಗೆ ಪೇಮೆಂಟಿಲ್ಲ. ಯಾವ ಕಂಟ್ರಾಕ್ಟರಗಳಿಗೂ ಪೇಮೆಂಟಿಲ್ಲ. ಇರಿಗೇಷನ್ ಇಲಾಖೆಯದ್ದೂ ಅದೇ ಪರಿಸ್ಥಿತಿ. ಇವರು ವೋಟ್ ಅನ್ ಅಕೌಂಟ್ ತೆಗೆದುಕೊಳ್ಳುವಾಗಲೇ ವಿಚಾರ ಮಾಡಬೇಕಾಗಿತ್ತು. 13.9.94ವರೆಗೂ ಎಷ್ಟು ಹಣ ನಮಗೆ ಬೇಕಾಗಬಹುದು ಎಂದು ಪ್ರತಿಯೊಂದು ಇಲಾಖೆ ಮೇಲೂ ವಿಚಾರ ಮಾಡಬೇಕಾಗಿತ್ತು. ಯಾವ ಇಲಾಖೆ ಬಗ್ಗೆಯೂ ವಿಚಾರ ಮಾಡದೆ ಇವರು ವೋಟ್ ಅನ್ ಅಕೌಂಟ್ ಅನ್ನು ಎಲ್ಲ ಇಲಾಖೆಗಳನ್ನು ಸೇರಿಸಿ ಇವತ್ತು ತಂದಿದ್ದಾರೆ. ನಾನು ಬೇಕಾದರೆ ಜೀವಂತ ಉದಾಹರಣೆ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಆರ್ಥಿಕಸ್ಥಿತಿ ಬಗ್ಗೆ ಬಹಳ ದೊಡ್ಡ ಭಾಷಣ ಮಾಡಿದರು. ಸಂತೋಷ, ಆದರೆ ನಿಜವಾಗಿ ಪರಿಸ್ಥಿತಿ ಏನಿದೆ? ನಿಜವಾದ ಪರಿಸ್ಥಿತಿ ಎಂದರೆ ಇವತ್ತೆಲ್ಲಾ ಕಡೆ ಟ್ರೆಜರಿ ಖಾಲಿ ಇದೆ, ಯಾವ ಕಡೆಯೂ ಒಂದು ಬಿಲ್ ಸಹ ಪೇಮೆಂಟಾಗುತ್ತಿಲ್ಲ. ಇವತ್ತು ಓಲ್ಡ್ ಏಜ್ ಪೆನ್‌ಷನ್ ಸಿಗುತ್ತಿಲ್ಲ. ಇದು ತಮಗೂ ಗೊತ್ತಿರಬಹುದು. ಇಂತಹ ಪರಿಸ್ಥಿತಿ ಇರುವಾಗ ನಿನ್ನೆ ಬಜೆಟ್ ಮಂಜೂರು ಮಾಡಿಕೊಟ್ಟಿದ್ದೇವೆ, ಇವತ್ತು ಸಪ್ಲಿಮೆಂಟರಿ ಬಜೆಟ್ ಬರುತ್ತದೆಂದರೆ ಸರ್ಕಾರದ ಆರ್ಥಿಕ ಸ್ಥಿತಿ ಎಷ್ಟೊಂದು ಹಾಳಾಗಿದೆ, ಸರಿಯಾಗಿ ಪ್ಲಾನಿಂಗ್ ಮಾಡುತ್ತಿಲ್ಲ, ಸರಿಯಾಗಿ ಅಡಿಕ್ವೇಟ್ ಪ್ರಾವಿಷನ್ ಮಾಡುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ. ಆದ್ದರಿಂದ ಇವತ್ತು ನಾವು ಈ ಬೇಡಿಕೆಗಳನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಬಹಳ ತುರ್ತಾಗಿ ಯಾವುದು ಫೋರ್‌ಸೀವ್ ಮಾಡಿಲ್ಲ ಅಂತಹ ಬೇಡಿಕೆಗಳು ಬಂದಾಗ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ನಾರ್ಮಲ್ ಕೋರ್ಸಿನಲ್ಲಿ ಎಲ್ಲಿ ಪ್ರಾವಿಷನ್ ಆಗಬೇಕಾಗಿತ್ತು, ಎಲ್ಲೆಲ್ಲಿ ನಾರ್ಮಲ್ ಕೋರ್ಸಿನಲ್ಲಿ ಪ್ರಾವಿಷನ್ ಆಗಿಲ್ಲ ಅವುಗಳನ್ನು ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆಶ್ರಯ ಸ್ಕೀಂ ತೆಗೆದುಕೊಳ್ಳಿ; ಆಶ್ರಯ ಸ್ಕೀಂ ಬಗ್ಗೆ ಮುಂಜಾನೆಯಿಂದ ಸಂಜೆವರೆಗೆ ಮಾತಾನಾಡುತ್ತಿರುತ್ತೀರಿ, ಹೆಮ್ಮೆಯಿಂದ ಮಾತನಾಡುತ್ತೀರಿ, ಆದರೆ ಇಲ್ಲೇನು ಮಾಡಿದ್ದಾರೆ? "This budget provision made for rural housing under Ashraya Scheme is Rs. 1403.00 lakhs for the current year. About 43,728 houses have been completed by the end of June 1994 at the Deputy Commissioner's level both under rural and urban areas. About 25,457 houses are at

different stages of construction. It is proposed to complete these houses by the end of September 1994 under 200 days programme. As the budget provision made was found in adequate, the amount of Rs. 12000.00 lakhs is included."

ಏಕೆ ಸ್ವಾಮಿ, ನಿಮ್ಮ ಬಜೆಟ್ ಸ್ಪೀಚ್‌ನಲ್ಲಿ ಜೂನ್ 94ರತನಕ 2 ಲಕ್ಷ ಮನೆಗಳನ್ನು ಕಟ್ಟಿ ಮುಗಿಸುತ್ತೇವೆ ಎಂದು; ಈ ಆ ತರಹದ ಅಡಕ್ವೇಟ್ ಹಣ ಯಾಕೆ ಇರಲಿಲ್ಲ? ನಿಮಗೆ ಕಮಿಟ್‌ಮೆಂಟ್ ಇಲ್ಲವೋ? ನಾವು ಏಕೆ ಹೇಳಬಾರದು ಕೇವಲ ಪೊಳ್ಳು ಮಾತು; ಪೊಳ್ಳು ಘೋಷಣಾ ಮಾಡುತ್ತಾರೆಂದು ನಾನು ಏಕೆ ಸರ್ಕಾರದ ಮೇಲೆ ಚಾರ್ಜ್ ಮಾಡಬಾರದು? ಆಶ್ರಯ ನಿಮ್ಮ ಸ್ಕೀಂ; ಬಡವರಿಗೆ ಸಹಾಯವಾಗುವ ಸ್ಕೀಂ. ಬಜೆಟ್‌ಸ್ಪೀಚ್‌ನಲ್ಲಿ ಒಂದು ಏಕೆ ನಾವು 2 ಲಕ್ಷ ಮನೆ ಕಟ್ಟುತ್ತೇವೆಂದು ಹೇಳಿದ ಮೇಲೆ ಆ ಪ್ರಕಾರ ನೀವು ಹಣದ ಪ್ರಾವಿಷನ್ ಅನ್ನು ಬಡ್ಜೆಟ್‌ನಲ್ಲಿ ಮಾಡಿಕೊಳ್ಳಬೇಕಾಗಿತ್ತು? ಏಕೆ ಮಾಡಿಕೊಳ್ಳಲಿಲ್ಲ? ಇವರ ಸರ್ಕಾರದಲ್ಲಿ 100 ದಿನದ ಕಾರ್ಯಕ್ರಮ, 200 ದಿನದ ಕಾರ್ಯಕ್ರಮ ಎಂದು ಹೊಸ ಕಾರ್ಯಕ್ರಮಗಳು ಬರುತ್ತಿವೆ. ಇದರ ಬಗ್ಗೆಯೂ ನಾವು ಚಿಂತನೆ ಮಾಡಬೇಕಾಗುತ್ತದೆ. 89ರಲ್ಲಿ ನಾಡಿನ ಜನ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. 89ರಿಂದ ಇವತ್ತಿನತನಕ ಏನು ಜನರಿಗೆ ಒಳ್ಳೆಯದಾಗಿದೆ, ಅದರ ಕ್ರೆಡಿಟ್ ನಿಮಗೆ ಹೋಗಬೇಕಾಗುತ್ತದೆ, ಏನು ಕೆಟ್ಟದ್ದಾಗಿದೆ, ಅದು ನಿಮ್ಮ ತಲೆಮೇಲೇ ಬರಬೇಕು. ಸರ್ಕಾರಕ್ಕೆ 100 ದಿನದ, 200 ದಿನದ ಕಾರ್ಯಕ್ರಮ ಇರಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ಇವತ್ತು ಭಯವಾಗುತ್ತಿದೆ, ಇನ್ನು ಮುಂದೆ 50 ದಿವಸಕ್ಕೆ 100 ದಿವಸಕ್ಕೆ ಒಬ್ಬರು ಮುಖ್ಯಮಂತ್ರಿಗಳಾಗಬಹುದೆಂದು, 2-3 ದಿವಸಗಳಿಗೆ ಮುಖ್ಯಮಂತ್ರಿಗಳಾಗಬಹುದೆಂಬ ಭಯವಾಗುತ್ತಿದೆ. ಒಂದು ಬಜೆಟ್ ಪ್ರೆಸೆಂಟಾದ ನಂತರ ಆ ಬಡ್ಜೆಟ್ ಸರ್ಕಾರದ ಕಾರ್ಯಕ್ರಮ ಆಗಬೇಕು. ಅದರಲ್ಲಿ 100, 200 ದಿನ ಕಾರ್ಯಕ್ರಮ ಮಾಡಲಿಕ್ಕೆ ಆಗುವುದಿಲ್ಲ. ಅಧ್ಯಕ್ಷರೇ ಉದಾಹರಣೆಗೆ ಇವರ 200 ದಿನದ ಕಾರ್ಯಕ್ರಮದಲ್ಲಿ ನಾನು ಕೆಡಿಬಿ ರಿವ್ಯೂ ಮಾಡುವಾಗ ನನ್ನ ಕ್ಷೇತ್ರವಾದ ಹಳಿಯಾಳದಲ್ಲಿ ನೆರಳಿನ ಭಾಗ್ಯದಲ್ಲಿ 23 ಮನೆ ಕಟ್ಟಬೇಕೆಂದು ಹೇಳಿದರು; ಮುನೆಗೋಡಿನ ಬಗ್ಗೆ ಕೇಳಿದಾಗ ಅವರು 21 ಎಂದರು, ಯಲ್ಲಾಪುರದ ಬಗ್ಗೆ ಕೇಳಿದೆ. ಅಲ್ಲಿ 28 ಎಂದರು, ನಾನು ಕೇಳುತ್ತೇನೆ, ಏಪ್ರಿಲ್‌ನಿಂದ ಸೆಪ್ಟೆಂಬರ್‌ತನಕ 6 ತಿಂಗಳಲ್ಲಿ ಮೂರು ತಾಲ್ಲೂಕಿನಲ್ಲಿ ಸರ್ಕಾರ ಕಟ್ಟಿದ ಮನೆಗಳೆಷ್ಟು? 100ಇಲ್ಲ; 70-80 ಮಾತ್ರ. ಇದು ಕಾರ್ಯಕ್ರಮವೇನು? ಮನೆ ಕಟ್ಟುವ ಕಾರ್ಯಕ್ರಮವಿದ್ದರೆ ಅದರ ಮೇಲೆ ನಿರ್ಬಂಧ ಇರಬಾರದು. ಈ ಪ್ರಕಾರ ನೀವು ನಿರ್ಬಂಧ ಹಾಕಿದರೆ ಒಳ್ಳೆಯ ರಿಸಲ್ಟ್ ಎಲ್ಲಿ ಬರುತ್ತದೆ? ಒಳ್ಳೆಯ ಅಧಿಕಾರಿ ಇದ್ದಾರೆ He wants to give progress. Upto September suppose he wants to give 100 houses, permit him. Why you are coming in the way? ಹಾಗಾಗಿ ಇವರೇನು 200 ದಿನದ ಕಾರ್ಯಕ್ರಮ ಎಂದು ಹೇಳುತ್ತಿದ್ದಾರೆ ಅದು ಒಂದು

force ಆಗಿದೆ ಏನೂ ಹುರುಳಿಲ್ಲ. ಯಾವ ಹೊಸ ಕಾರ್ಯಕ್ರಮವೂ ಇಲ್ಲ. ಬಜೆಟ್‌ನಲ್ಲಿ ಏನಿದೆಯಲ್ಲಾ, ಅದನ್ನೇ ಇಲ್ಲಿ ತೋರಿಸಿದ್ದಾರೆ; ಅದು ಸರಿಯೇನು? ಇದರಿಂದ ಕರ್ನಾಟಕ ಸಮಗ್ರ ಹಣದ ಡಿಸಿಪ್ಲೀನ್ ಡಿಸ್ಪ್ಯಾಯ್ ಆಗಿದೆ. ಅದಕ್ಕೆ ಹೊಣೆ ಮಾನ್ಯ ಮುಖ್ಯಮಂತ್ರಿಗಳು ಅವರು ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ನಾಳಿನ ಚುನಾವಣೆಯಲ್ಲಿ ಅವರು ಆರಿಸಿ ಬರುವುದಿಲ್ಲ ಎಂದು ಗೊತ್ತಾಗಿದೆ. ಹಾಗಾಗಿ ಮುಂದೆ ಅಧಿಕಾರಕ್ಕೆ ಬಂದವರು ಉತ್ತರ ಕೊಡಲಿ ಎಂದು ನೀವು ಮಾಡುತ್ತಾ ಹೋಗುವುದು ಸರಿಯಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ :- ನಮ್ಮ ಉತ್ತರವನ್ನು ಕೇಳುವುದಕ್ಕೆ ತಾವು ತಯಾರಿರಬೇಕು.

ಶ್ರೀ ಆರ್.ವಿ. ದೇಶಪಾಂಡೆ :- ಒಪ್ಪಿಕೊಳ್ಳುತ್ತೇನೆ, ನೀವು ಏನು ಹೇಳುತ್ತಿದ್ದೀರೋ ಅದೇ ಪ್ರಕಾರ ನಡೆಯುತ್ತಿದ್ದೇವೆ. ಈಗ ಬೇರೇನೂ ಮಾಡುತ್ತಿಲ್ಲ ಹಾಗಾಗಿ ಪತ್ರಿಕೆಗಳು ಸಹ ನಮ್ಮ ನಿಮ್ಮ ಬಗ್ಗೆ ಚೆನ್ನಾಗಿ ಬರೆಯುತ್ತಿವೆ. ಇವತ್ತಿನ ಇಂಡಿಯನ್ ಎಕ್ಸ್‌ಪ್ರೆಸ್ ಓದಿ ನೋಡಿದರೆ ಗೊತ್ತಾಗುತ್ತದೆ. ಸರ್ಕಾರಕ್ಕೆ ಗಾಂಭೀರ್ಯ ಇರಬೇಕು. ಸದನ ನಡೆದಾಗ ಪ್ರತಿಯೊಂದು ವಿಷಯದ ಬಗ್ಗೆ ಗಾಂಭೀರ್ಯ ಬೇಕು, ಎಷ್ಟು ಬಿಲ್ ತರಬೇಕು, ಎಷ್ಟು ಮಂಜೂರು ಮಾಡಿಸಿಕೊಳ್ಳಬೇಕು; ಯಾರು ಹೇಳಿದ್ದಾರೆ ಇವರಿಗೆ ಸೆಷನ್ ಎಕ್ಸ್‌ಟೆಂಡ್ ಮಾಡಬಾರದು ಎಂದು, ನಾವು ಹೇಳಿದ್ದೀವಾ? ಇನ್ನೂ 15 ದಿವಸ ಸೆಷನ್ ಮಾಡಿ ಅಂದರೆ, ಅದಕ್ಕೆ ತಯಾರಾಗಿಲ್ಲ, ಆದರೆ ಎಲ್ಲಾ ಬಿಲ್ಸ್ ಇಂದೇ ಪಾಸ್ ಮಾಡಿಕೊಳ್ಳಬೇಕು, ಹೇಗೆ ಸಾಧ್ಯ ಇದೆ ಅದು? ಹಾಗಾಗಿ ಎಲ್ಲಾ ಹಂತದಲ್ಲಿ ಕೇವಲ ಯೋಜನೆಗಳು ಮಂಜೂರಾಗುತ್ತಿದೆಯೇ ವಿನಃ ಅದಕ್ಕೆ ಅಡಿಕ್ವೇಟ್ ಆಗಿ ಹಣ ಸಿಗುತ್ತಿಲ್ಲ. ಮೊನ್ನೆ ಮುಖ್ಯಮಂತ್ರಿಗಳು ನಮ್ಮ ಅರ್ಥ ಇಲಾಖೆ ಅಧಿಕಾರಿಗಳು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳಿದರು; ಯಾರು ಇಲ್ಲ ಎಂದು ಹೇಳಿದ್ದಾರೆ; ನಾನೇ ಹೇಳಿದ್ದೇನೆ ಮತ್ತು ರಿಸೋರ್ಸ್ ಮೊಬಿಲೈಸೇಷನ್ ಬಗ್ಗೆ ನಮ್ಮ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ನಾನೇ ಹೇಳಿದ್ದೇನೆ. ಆದರೆ ಅದು ಉಪಯೋಗ ಆಗುತ್ತಿಲ್ಲ. ಅವರು ರಿಸೋರ್ಸ್ ಮೊಬಿಲೈಸ್ ಮಾಡಿದರೂ ಮುಖ್ಯಮಂತ್ರಿಗಳಲ್ಲಿ ಆರ್ಥಿಕ ಶಿಸ್ತಿಲ್ಲ. ಬಜೆಟ್‌ನಲ್ಲಿ ಏನಿದೆ ಆ ಪ್ರಕಾರ ಹೋದರೆ ಒಂದು ಸರಿಯಾದ ದಾರಿಯಲ್ಲಿ ನಡೆಯಬಹುದು; ಆದರೆ ಇವರು ಪ್ರತಿ ದಿವಸ 500 ಕೋಟಿ 300 ಕೋಟಿ ಕಾರ್ಯಕ್ರಮಗಳನ್ನು ಮಂಜೂರು ಮಾಡುತ್ತಿದ್ದಾರೆ; ಸಪ್ಲಿಮೆಂಟ್‌ರಿ ಎಸ್ಟಿಮೇಟ್ಸ್ ಇವರೇ ಮುಖ್ಯಮಂತ್ರಿ ಆಗಿ ಮುಂದುವರೆದರೆ ಪ್ರತಿವರ್ಷ ಇಂತಹ 50-100 ಬರಬಹುದು ಈ ತರಹದ ಪರಿಸ್ಥಿತಿ ನಿರ್ಮಾಣವಾದಾಗ ಇಂತಹ ಬೇಡಿಕೆಗಳನ್ನು ನಮಗೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ನಿನ್ನೆ ಡಿಮ್ಯಾಂಡ್‌ನ್ನು ಪಾಸ್ ಮಾಡಿಕೊಂಡು ಎರಡನೇ ದಿನವೇ ಸಪ್ಲಿಮೆಂಟರಿ ಎಸ್ಟಿಮೇಟ್ ತರುವುದು ಸರಿಯಾದ ಪದ್ಧತಿ ಅಲ್ಲ, ಈ ಎರಡು ಮೂರು ದಿನದ ಕಾರ್ಯಕ್ರಮವನ್ನೂ ದಯಮಾಡಿ ನೀವು ಕೈಬಿಡಿ. ಕೈಬಿಟ್ಟು ಒಂದು ವರ್ಷದ ಕಾರ್ಯಕ್ರಮವಿದೆಯಲ್ಲಾ, ಅದರ ಮೇಲೆ ಹೆಚ್ಚಿನ ಸ್ಟ್ರೆಸ್‌ಮಾಡಿ, ಅದು ಬಡವರ ನೆರಳಿನಭಾಗ್ಯ ಕಾರ್ಯಕ್ರಮ ಇರಬಹುದು, ಆಶ್ರಯ ಕಾರ್ಯಕ್ರಮ ಇರಬಹುದು, ಅವು ಒಳ್ಳೆಯ ಕಾರ್ಯಕ್ರಮಗಳು. ಅದರ ಬಗ್ಗೆ ನಮ್ಮ ವಿರೋಧ ಇಲ್ಲ. ಆ ಕಾರ್ಯಕ್ರಮಗಳ ಲಾಭವನ್ನು

ಬಡಜನರಿಗೆ ಮುಟ್ಟಿಸುವ ಪ್ರಯತ್ನ ಮಾಡಿ. ಅದರ ಬಗ್ಗೆ ನಿಮಗೆ ಕಮಿಟ್‌ಮೆಂಟ್ ಇರಬೇಕು. ಆದರೆ ಆ ಕಮಿಟ್‌ಮೆಂಟ್ ಇವತ್ತು ನಿಮ್ಮಲ್ಲಿಲ್ಲ. ಕೇವಲ ನಾವು ಪ್ರೋಗ್ರಾಂ ಮಂಜೂರು ಮಾಡಿದ್ದೇವೆ; ಮನೆ ಮಂಜೂರು ಮಾಡಿದ್ದೇವೆ ಎಂದರೆ ಅದರಿಂದ ಬಡವರಿಗೆ ಲಾಭವಾಗುವುದಿಲ್ಲ; ಆ ಮನೆಗಳನ್ನು ಕಟ್ಟಿದಾಗ ಮಾತ್ರ ಆ ಜನರಿಗೆ ಸಹಾಯವಾಗುತ್ತದೆ. ಆ ದೃಷ್ಟಿಯಿಂದ ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ. ಇನ್ನು ಪಟೇಲರ ಬಗ್ಗೆ ಹೇಳಬೇಕೆಂದರೆ, "The Ex-Patels who are in recepit of Rs. 100/- per month as compensation allowance, were sanctioned adhoc pension of Rs. 500 per month from 1.1.94. As the provsion made in the budget was..."

10-30 ಎ.ಎಂ.

ಇದು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಇದು ಬಹಳ ವರ್ಷಗಳ ಸಮಸ್ಯೆ. ಇದು ಹಳೆಯ ಸಮಸ್ಯೆ ಇದು. ಈ ಸಮಸ್ಯೆಗೆ ಸರಕಾರ ಪರಿಹಾರ ಕೊಟ್ಟಿದೆ. ಆದರೆ ಹೆರೆಡಿಟರಿ ಪಟೇಲರುಗಳಿಗೆ ಕೊಟ್ಟರಿ. ಉತ್ತರ ಕನ್ನಡ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಈ ಭಾಗಗಳಲ್ಲಿ ಹೆರೆಡಿಟರಿ ಪಟೇಲರುಗಳು ಇಲ್ಲ. ಅಲ್ಲೇ ಪಟೇಲರುಗಳನ್ನು ನೇಮಕ ಮಾಡಿದ್ದಾರೆ. ಅವರಿಗೆ ಇದರಿಂದ ಲಾಭ ಸಿಗಲಿಲ್ಲ. ಇದಕ್ಕೆ ತಾವು ಉತ್ತರ ಕೊಡುವುದಾದರೆ ಕೊಡಿ. ಇಲ್ಲವೇ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವುದಾದರೆ ಕೊಡಲಿ. ಇಲ್ಲಿ 2 ವಿಚಾರಗಳಿವೆ. ತಾವು ಇದಕ್ಕೆ 4800 ರೂಪಾಯಿ ಎಂದು ಇನ್‌ಕಮ್ ಲಿಮಿಟ್ ಹಾಕಿದ್ದೀರಿ. ಈ ಇನ್‌ಕಂ ಲಿಮಿಟ್‌ನಿಂದಾಗಿ ಯಾವ ಪಟೇಲರಿಗೂ ಇದರ ಲಾಭ ಸಿಗುತ್ತಿಲ್ಲ. ವೀರಪ್ಪ ಮೊಯಿಲಿಯವರು ಬಹಳ ಜಾಣರು, ಒಳ್ಳೆ ಕಲೆ ಇದೆ. ಒಂದು ಕಡೆ ಕೊಟ್ಟ ಹಾಗೆ ತೋರಿಸುತ್ತಾರೆ. ಮತ್ತೊಂದು ಕೈಯಲ್ಲಿ ತೆಗೆದುಕೊಳ್ಳುತ್ತಾರೆ. ಪಟೇಲರಿಗೆ 500 ರೂಪಾಯಿ ಪೆನ್‌ಷನ್ ಮಂಜೂರು ಮಾಡಿದಾಗ ಅವರಿಗೆಲ್ಲಾ ಬಹಳ ಖುಷಿಯಾಯಿತು. ಬೆನ್ನುಚಪ್ಪರಿಸಿ ಹೋಗಿಬಿಟ್ಟರು. ಅಲ್ಲಿ ಮತ್ತೊಂದು 4800 ರೂ ಇನ್‌ಕಮ್ ಇರಬಾರದೆಂದು ಮಾಡಿದರು. 4800 ರೂಪಾಯಿ ಇನ್‌ಕಂ ಒಬ್ಬ ಕೂಲಿ ಕೆಲಸ ಮಾಡಲಿಕ್ಕೆ ಹೊರಟರೆ ಸಿಗುತ್ತದೆ. ಆತನಿಗೆ ದಿನ 30 ರೂಪಾಯಿ ಸಿಗುತ್ತದೆ. ಅಂದರೆ ತಿಂಗಳಿಗೆ 1 ಸಾವಿರ, ವರ್ಷಕ್ಕೆ 12 ಸಾವಿರ ಆಗುತ್ತದೆ. 4800 ಇನ್‌ಕಂ ಹಾಕಿದರೆ ಯಾವ ಪಟೇಲರಿಗೆ ಸಹಾಯವಾಗುತ್ತದೆ? ಮಾನ್ಯ ಕಾಗೋಡು ತಿಮ್ಮಪ್ಪನವರೇ, ತಾವೂ ಸಹ ಇದರ ಬಗ್ಗೆ ಪ್ರಯತ್ನ ಮಾಡಿದ್ದೀರಿ, ನನಗೆ ಗೊತ್ತಿದೆ. ತಾವೂ ಸಹ ಮಾನ್ಯ ಮುಖ್ಯ ಮಂತ್ರಿಯವರ ಜೊತೆ ಬೆಳಕು ಚೆಲ್ಲಿ ಇದರ ಬಗ್ಗೆ ಪ್ರಯತ್ನ ಮಾಡಿ ಇನ್‌ಕಂ ಲಿಮಿಟ್ ತೆಗೆಯಬೇಕು. ಪಟೇಲರಿಗೆ ಸಹಾಯ ಮಾಡಬೇಕೆಂದು ಇಚ್ಛೆ ಇದ್ದರೆ, ಈ ಇನ್‌ಕಂ ಲಿಮಿಟ್ ತೆಗೆಯಬೇಕು. ದಯಮಾಡಿ ನಮ್ಮ ಮಾತು ಕೇಳಿ. The income limit of ex-patels should go and it should also extend to the Patels who have been appointed and not only hereditary. ಸಾರ್ವಜನಿಕರಾದಲ್ಲಿ

ಪಟೇಲರುಗಳು ಇದ್ದಾರಲ್ಲಾ, ಅವರು ಹೆರೆಡಿಟರಿ ಅಲ್ಲ. ಅವರು ಅಪಾಯಿಂಟೆಡ್ ಪಟೇಲ್ಸ್. ಅವರಿಗೂ ಈ ಬೆನಿಫಿಟ್ ಸಿಗಬೇಕು ಎಂದು ಒತ್ತಾಯಿಸುತ್ತಿದ್ದೇನೆ. ಈಗ ಎಂ.ಪಿ. ಗಳಿಗೆ ಹೊಸ ಸ್ಕೀಮ್ ಬಂದಿದೆ. "The MPs Local Area Development Scheme is a Central Assistance. The scheme has been launched by the Government of India with the objective of enabling Members of Parliament who have executed in their constituencies small works of capital nature to the extent of Rs.10 lakhs each subject to a ceiling of Rs.1crore per year. The Government of India released 202 crores for 93-94 at the rate of Rs.5 lakhs per MP for the immediate commencement of the scheme. Provision was not made in the budget, the amount of RS.2 crores was released from Contingency Fund. An equal sum is required for te repayment to the found. As some of the Dy. Commissioners could not draw the amount before the close of the year 1993-94 to the extent of Rs.15 lakhs which is to be released during the current year."

ಈ ಯೋಜನೆಯನ್ನು ಮಾನ್ಯ ನರಸಿಂಹಾರಾಯರು ಏಕೆ ಮಾಡಿದ್ದಾರೆಂದು ನನಗೆ ಗೊತ್ತಿದೆ. ಈಗ ನರಸಿಂಹಾರಾಯರಿಗೆ ಏನೂ ಹೆದರಿಕೆ ಇಲ್ಲ, ಭಯ ಇಲ್ಲ. ಸ್ಥಾನ ಗಟ್ಟಿ ಮಾಡಿಕೊಂಡಿದ್ದಾರೆ. ನಮ್ಮನ್ನೆಲ್ಲಾ ಛಿದ್ರ ವಿಚಿಧ್ರ ಮಾಡಿ ಅಲ್ಲಿ ತಮ್ಮ ಸ್ಥಾನ ಗಟ್ಟಿ ಮಾಡಿಕೊಂಡಿದ್ದಾರೆ. ಅವರು ಜಪಾನಿನಲ್ಲಿ ಇರುತ್ತಾರೆ. ನಮಗೆ ಇಲ್ಲಿ ಹೊಡೆಯುತ್ತಾರೆ. ನರಸಿಂಹಾರಾಯರು ಜಪಾನಿನಲ್ಲಿ ಇರುತ್ತಾರೆ, ನಾವು ಇಲ್ಲಿ ಹೊಡೆದುಕೊಳ್ಳುತ್ತೇವೆ. ಹೀಗೆ ಛಿದ್ರ ವಿಚಿಧ್ರ ಮಾಡಿ ತಮ್ಮ ಸ್ಥಾನವನ್ನು ಗಟ್ಟಿ ಮಾಡಿಕೊಂಡ ನಂತರ ಈ ರೀತಿ ಯೋಜನೆಗಳನ್ನು ಎಂ.ಪಿ.ಗಳಿಗೆ ಏಕೆ ತರಬೇಕು? ಒಂದು ವರ್ಷದಲ್ಲಿ 1ಕೋಟಿಯನ್ನು ಎಂ.ಪಿ.ಗಳಿಗೆ ಕೊಡುತ್ತೀರಿ? ಎಂ.ಪಿ.ಗಳಿಗೆ ಜಿಲ್ಲಾಧಿಕಾರಿಗಳ ಆಫೀಸಿನಲ್ಲಿ ಕಚೇರಿ, ಜಿಲ್ಲಾ ಮಟ್ಟದಲ್ಲಿ ಒಂದು ಕಾರು. ಅದಕೊಬ್ಬ ಡ್ರೈವರ್, ಒಬ್ಬ ಪಿ.ಎ, ಇದಕ್ಕೆ ಕಾರಣವೇನು? ಪ್ರಧಾನಿಯವರಿಗೆ ಅವರ ಸ್ಥಾನದ ಬಗ್ಗೆ ಚಿಂತನೆ ಇಲ್ಲ, ಅದರ ಬಗ್ಗೆ ತೊಂದರೆ ಇಲ್ಲ. ಆದರೂ ಇಂತಹ ಸ್ಕೀಮುಗಳನ್ನು ತರುವಲ್ಲಿ ಕಾರಣಗಳೇನು? ಇವತ್ತು ಪಂಚಾಯತಿ ವ್ಯವಸ್ಥೆ ಜಾರಿಯಲ್ಲಿ ಬಂದ ನಂತರ ರಸ್ತೆಗಳನ್ನು, ಸೇತುವೆಗಳನ್ನು ಮಾಡುವ ಕೆಲಸ ಪಂಚಾಯಿತಿ ಮೆಂಬರ್‌ಗಳದ್ದು. ಜಿಲ್ಲಾಪರಿಷತ್ ಮೆಂಬರ್‌ಗಳದ್ದು. I go the extent and say that it is not even of the MLAs. If you believe in decentralisation, if you believe in Panchayat system, this work is to be executed by the Zilla Parishads and Panchayats.

ಇವತ್ತು ಜಿಲ್ಲಾ ಪಂಚಾಯಿತಿ ಇಲ್ಲ, ತಾಲ್ಲೂಕು ಪಂಚಾಯಿತಿ ಇಲ್ಲ. ಹಾಗಾಗಿ ನಾವು ಕೆಲವು ಕೆಲಸಗಳನ್ನು ರೆಕಮೆಂಡ್ ಮಾಡುತ್ತೇವೆ. ಅದರೆ ನಿಜವಾಗಿ this all should be done by the Zilla Panchayats and Panchayats and not by MPs.

ಎಂ.ಪಿ.ಗಳು ಏನಿದ್ದರೂ ದೇಶದ ಬಗ್ಗೆ ಚಿಂತನೆ ಮಾಡಬೇಕು. ದೇಶದ ಭದ್ರತೆ ಬಗ್ಗೆ ಚಿಂತನೆ ಮಾಡಬೇಕು ವಿನಹ ಬ್ರಿಡ್ಜ್ ಮತ್ತು ರಸ್ತೆಗಳು ಇವುಗಳನ್ನು ಮಂಜೂರು ಮಾಡುವ ಕೆಲಸ ಎಂ.ಪಿ.ಗಳದ್ದು ಅಲ್ಲ. ಹಾಗಾಗಿ ಇಂಥ ಸ್ಕೀಮಿಗೆ ಸರ್ಕಾರ ವಿರೋಧ ಮಾಡಬೇಕು. I am not against any MP. ಎಂ.ಪಿ.ಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ನನಗೇನೂ ತೊಂದರೇಇಲ್ಲ. ಆದರೆ ತಾತ್ವಿಕವಾಗಿ, as a matter of principle, the Government should have opposed and the Government should have said, we cannot be a party to such things.ಇದು ಏನಾಗುತ್ತಿದೆ ಎಂದರೆ ತಾವು ಪಂಚಾಯತಿ ಸಿಸ್ಟಂನ್ನು ಡಿಸ್ಟ್ರಾಯ್ ಮಾಡುತ್ತಿದ್ದೀರಿ; ಇದರಿಂದ ಏನಾಗಿದೆ ಎಂದರೆ ಪಂಚಾಯಿತಿ ಸಿಸ್ಟಂ ಡಿಸ್ಟ್ರಾಯ್ ಆಗಿ ಪಂಚಾಯತ್ ಸಿಸ್ಟಂಗೆ ಏನು ಮಹತ್ವವನ್ನು ನಾವು ಕೊಡಬೇಕೆಂಬ ಇಚ್ಛೆ ಇದೆ, ಅದನ್ನು ನಾವು ಕೊಡುತ್ತಿಲ್ಲ. ನಾನು ಈಗಾಗಲೇ ಹೇಳಿದೆ, ಇವತ್ತು ಪಂಚಾಯತ್ ಸಿಸ್ಟಂನಲ್ಲಿ ನಾವು ಏನು ಅಧಿಕಾರ ವಿಕೇಂದ್ರೀಕರಣ ಮಾಡಿ ನಾಡಿನ ಜನರ ಕೈಯಲ್ಲಿ ಅಧಿಕಾರವನ್ನು ಕೊಟ್ಟೆವು, ಅದನ್ನು ಪುನಃ ಇವರು ವಾಪಸ್ಸ್ ತೆಗೆದುಕೊಂಡರು ಅಷ್ಟೇ ಅಲ್ಲ, ಆ ಪಂಚಾಯತ್ ಅಧ್ಯಕ್ಷರಿಗೆ ಅಧಿಕಾರ ಇಲ್ಲ. ಈ ಪ್ರಕಾರ ಎಂ.ಪಿ.ಗಳು ಒಂದುಕೋಟಿ ರೂ. ಮತ್ತೊಬ್ಬರಿಗೆ 50 ಲಕ್ಷ ರೂ. ಈ ರೀತಿ ಕೊಡುತ್ತಾ ಹೋದರೆ ಯಾವ ಪ್ರಕಾರ ಪಂಚಾಯತಿಗಳು ನಡೆಯುವುದಕ್ಕೆ ಸಾಧ್ಯ? ಯಾವ ಪ್ರಕಾರ ಜಿಲ್ಲಾ ಪಂಚಾಯತಿಗಳು ನಡೆಯುವುದಕ್ಕೆ ಸಾಧ್ಯ? ಯಾವ ಪ್ರಕಾರ ಗ್ರಾಮೀಣ ಸ್ವರಾಜ್ಯ ಕಲ್ಪನೆ ಸರ್ಕಾರ ಆಗುವುದಕ್ಕೆ ಸಾಧ್ಯ? ಇದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಈ ಒಂದು ಸಪ್ಲಿಮೆಂಟರಿ ಎಸ್ಟಿಮೇಟ್ ಏನು ಇದೆ, ಇದಕ್ಕೆ ನಾನು ತತ್ವಶಃ on principle ವಿರೋಧ ಮಾಡುತ್ತಾ ಈ ಪ್ರಕಾರ ಸರ್ಕಾರ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ತರಬಾರದು, ಎಲ್ಲೆಲ್ಲಿ ಫೋರ್‌ಸೀ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ಎಲ್ಲೆಲ್ಲಿ ಅರ್ಜೆಂಟ್ ಕೆಲಸವಿದ್ದಾಗ ಖರ್ಚಾಗುತ್ತದೆ, ಅಂಥ ಎಸ್ಟಿಮೇಟ್ಸ್ ತಂದರೆ ನಾವು ಪಾಸ್ ಮಾಡಬಹುದು. ಆದ್ದರಿಂದ ಇದಕ್ಕೆ ನಾನು ವಿರೋಧ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಕೆ.ಎಸ್.ಈಶ್ವರಪ್ಪ:- (ಶಿವಮೊಗ್ಗ):-ಮಾನ್ಯ ಅಧ್ಯಕ್ಷರೇ, ''ಈ ಪ್ರಾಥಮಿಕ ಶಾಲೂ ಕಟ್ಟಡಗಳ ದುರಸ್ತಿಗಾಗಿ 220 ಲಕ್ಷ ರೂಪಾಯಿಗಳ ಅವಶ್ಯಕತೆ ಏನಿದೆ ಆಯವ್ಯಯದಲ್ಲಿ ಈ ಉದ್ದೇಶದ ಹಣವನ್ನು ಒದಗಿಸಿಲ್ಲವಾದ್ದರಿಂದ ಈ ಅಗತ್ಯವಾದ ಹಣವನ್ನು ಬೇಡಿಕೆಯಲ್ಲಿ ಸೇರಿಸಿದೆ'' ಎಂದು ಇವತ್ತು ಪೂರಕ ಅಂದಾಜುಗಳ ಪಟ್ಟಿಯಲ್ಲಿ ಸೇರಿಸಿದ್ದಾರೆ. ಇಡೀ ರಾಜ್ಯದಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ನಗರ ಪ್ರದೇಶಗಳಲ್ಲೂ ಕೂಡ ಮಳೆ

ಮುಗಿಯವಂಥ ಸಂದರ್ಭ ಬಂದಿರುವಾಗ ನಾವೆಲ್ಲಾ ಇಲ್ಲಿ ಸೇರಿದ್ದೇವೆ. ಮಳೆ ಆಗುತ್ತಿರುವಂಥ ಸಂದರ್ಭದಲ್ಲಿ ಹಳ್ಳಿಗಳಿಗೆ ಕನಿಷ್ಟ ಶಾಸಕರು ಈ ಸಂದರ್ಭದಲ್ಲಾದರೂ ಚುನಾವಣೆ ಬಂದಿದೆ ಎಂದು ಹೋಗಿರಬಹುದು ಎಂದು ನಾನು ಭಾವಿಸುತ್ತಿದ್ದೇನೆ. ನೂರರಲ್ಲಿ 75 ಶಾಲೆಗಳಲ್ಲಿ ಸೋರುತ್ತಿದೆ. ಹೆಂಚುಗಳು ಒಡೆದುಹೋಗಿವೆ. ರೀಪರ್‌ಗಳು ನೀರುಬಿದ್ದು ಇನ್ನೇನು ಹೆಂಚು ಕುಸಿದೇ ಬೀಳಬಹುದು ಎನ್ನುವ ಶಾಲಾ ಕಟ್ಟಡಗಳಿವೆ. ಇನ್ನು ತಾರಸಿಯಾಗಿರುವಂಥ ಶಾಲೆಗಳಂತೂ ಗೋಡೆಗಳು ನೀರಿನಲ್ಲಿ ನೆನೆದು ಖಂಡಿತಾ ಮಕ್ಕಳು ಬದುಕುತ್ತಾರೋ, ಸಾಯುತ್ತಾರೋ ಎನ್ನುವಂಥ ಸ್ಥಿತಿ ಈ ರಾಜ್ಯದ ಅನೇಕ ಶಾಲೆಗಳಲ್ಲಿವೆ. ಇವತ್ತು ಏತಕ್ಕೆ ಸೇರಿಸುವುದಕ್ಕೆ ಹೊರಟಿದ್ದಾರೋ ಗೊತ್ತಿಲ್ಲ. ಅಂತೂ ಸೇರಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದಾರೆ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇಷ್ಟು ದಿನ ಬಜೆಟ್‌ನಲ್ಲಿ ಸೇರಿಸುವಂಥ ಪ್ರಯತ್ನವನ್ನು ಏತಕ್ಕೆ ಇವರು ಮಾಡಲಿಲ್ಲ ಎಂದು ನನಗಂತೂ ಆಶ್ಚರ್ಯವಾಗುತ್ತದೆ. ನಾನು ಕೂಡ ಬಜೆಟ್‌ನಲ್ಲಿ ಸೇರಿಸಿ, ಸೇರಿಸಿ ಎಂದು ಪ್ರತಿವರ್ಷವೂ ಪತ್ರಗಳನ್ನು ಬರೆದುಹಾಕಿದ್ದೇನೆ. ಆದರೆ ಯಾವುದೇ ಬಜೆಟ್‌ನಲ್ಲೂ ಕೂಡ ಆ ಒಂದು ಶಾಲೆಗಳ ಅಭಿವೃದ್ಧಿಗೆ ಹಾಕಿರಲಿಲ್ಲ. ಇದು ಕೇವಲಈ ರೀತಿ ಸರ್ಕಾರದ ಒಂದು ತಾತ್ಸಾರದ ಧೋರಣೆ ಎಂದು ನಾನು ತುಂಬಾ ನೊಂದು ಹೇಳಬೇಕಾಗುತ್ತದೆ. ಏಕೆಂದರೆ ಅನೇಕ ಕಡೆ ಹರಿಜನ ಗಿರಿಜನ ಮಕ್ಕಳು ಹೋಗುತ್ತಿರುವಂಥ ಶಾಲೆಗಳಲ್ಲೂ ಕೂಡ ಸರ್ಕಾರ ಆ ಒಂದು ಶಾಲೆಯ ಅಬಿವೃದ್ಧಿಗೆ ಏನೇನೂ ಪ್ರಯತ್ನವನ್ನು ಮಾಡಿಲ್ಲ. ನನಗೆ ಶಿವಮೊಗ್ಗದಿಂದ ಒಂದು ಪತ್ರ ಬಂದಿದೆ. ಅಲ್ಲಿನ ದುರ್ಗಿಗುಡಿ ಶಾಲೆಯಲ್ಲಿ ಸೋರುತ್ತಾ ಇದೆ, ಆ ಶಾಲೆಯ ಅಭಿವೃದ್ಧಿಗೆ ಸರ್ಕಾರ ಗಮನ ಕೊಡದಿದ್ದರೆ ಡಿಡಿಪಿಐ ಕಛೇರಿಗೆ ನಾವು ಬೀಗಮುದ್ರೆ ಹಾಕುತ್ತೇವೆಂದು ಡಾ॥ ರಾಜಕುಮಾರ್ ಅಭಿಮಾನಿ ಸಂಘದಿಂದ ಪತ್ರವನ್ನು ಬರೆದಿದ್ದಾರೆ. ಶಾಸಕರ ಮನೆ ಮುಂದೆ ಕೆ.ಎಸ್. ಈಶ್ವರಪ್ಪನವರ ಮನೆ ಮುಂದೆ ಎಲ್ಲಾ ಶಾಲಾ ಮಕ್ಕಳನ್ನೂ ಕರೆದುಕೊಂಡು ಬಂದು ನಾವು ಧರಣಿ ಮಾಡುತ್ತೇವೆ ಎಂದುನನಗೆ ಪತ್ರ ಬಂದಿದೆ. ಬರೀ ನನ್ನ ಕ್ಷೇತ್ರದಲ್ಲೇ ಅಲ್ಲ ಎಲ್ಲ ಕ್ಷೇತ್ರಗಳಲ್ಲಿಯೂ ಇದೇ ರೀತಿ ಇದೆ. ಶಿವಮೊಗ್ಗ ನಗರದಲ್ಲೆಲ್ಲಾ ಹಾಗೆ ಇದೆ. ಗ್ರಾಮಾಂತರ ಪ್ರದೇಶದ ಎಲ್ಲಾ ಶಾಲೆಗಳೂ ಅದೇ ರೀತಿ ಇದೆ. ಸಾಗರದ ಅನೇಕ ಶಾಲೆಗಳಿಗೆ ನಾನು ಹೋಗಿದ್ದೇನೆ. ಅಲ್ಲೂ ಕೂಡ ಸೋರುತ್ತಿದೆ. ಇದು ಈಗ ಸೇರಿಸುವಂಥ ಸ್ಥಿತಿ ಬಂತಲ್ಲ ಎಂದು ನನಗೆ ಒಂದು ರೀತಿ ಸಂತೋಷವಾದರೆ ಮತ್ತೊಂದು ರೀತಿ ನನಗೆ ದುಃಖವಾಗುತ್ತಿದೆ. ನಾನು ಇದನ್ನು ಸ್ವಾಗತ ಮಾಡುತ್ತಿದ್ದೇನೆ. ನನಗನಿಸುತ್ತದೆ, ಈಗ ಹಾಕಿರುವ ಈ ಹಣ, ಇದರ ಜೊತೆಗೆ 220 ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ ಎಂದು ಏನು ಬರೆದಿದ್ದೀರಿ, ಇದು ಸಾಕಾಗಲಿಕ್ಕಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ, ನಗರ ಪ್ರದೇಶದಲ್ಲಿ 100ರಲ್ಲಿ 75 ಶಾಲೆಗಳು ಸೋರುತ್ತಿವೆ. ಇದನ್ನು ಗಮನಿಸಿ. ನಿಮಗೆ ಜಿಲ್ಲಾ ಪರಿಷತ್ ಮುಖಾಂತರ ಪತ್ರ ಬಂದಿರಬಹುದು, ಕಾರ್ಪೊರೇಷನ್‌ಗಳಿಂದಲೂ ಕೂಡ ಬಂದಿರಬಹುದು. ತಕ್ಷಣ ಅದಕ್ಕೆ ಇನ್ನೂ ಎಷ್ಟು ಹಣ ಬೇಕು ಎನ್ನುವುದನ್ನು ತರಿಸಿಕೊಂಡು ಇದರ ಬಗ್ಗೆ ಬಿಡುಗಡೆ ಮಾಡಿದರೆ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತದೆ. ಎರಡನೆಯದು ಈ ಶಾಲೆಗಳು ದುರಸ್ತಿಯಾದರೆ ಆ ಗ್ರಾಮಾಂತರ ಪ್ರದೇಶದಲ್ಲಿ ನೆಮ್ಮದಿಯಾದರೂ

ಉಂಟಾಗುತ್ತದೆ. ಈ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಬೇಕು. ಈ ಹಣವನ್ನು ಯಾರು ಖರ್ಚು ಮಾಡಬೇಕು ಎನ್ನುವ ಪ್ರಶ್ನೆ ಇನ್ನೂ ಇದೆ. ಜಿಲ್ಲಾ ಪರಿಷತ್‌ನಲ್ಲಿ ಹೋಗಿ ಕೇಳಿದರೆ, ನಮ್ಮ ಹತ್ತಿರ ಇದಕ್ಕೆ ಪ್ರಾವಿಷನ್ ಇಲ್ಲ ಎಂದು ಹೇಳುತ್ತಾರೆ. ನಗರಸಭೆ, ಪುರಸಭೆ ಕಾರ್ಪೊರೇಷನ್‌ನಲ್ಲಿ ಹೋಗಿ ಕೇಳಿದರೆ ನಮ್ಮಲ್ಲಿ ಇದಕ್ಕೆ ಪ್ರಾವಿಷನ್ ಇಲ್ಲ ಎನ್ನುತ್ತಾರೆ. ಹಾಗಾದರೆ ಇದಕ್ಕೆ ಅಪ್ಪ ಅಮ್ಮ ಯಾರಿದ್ದಾರೆ? ಜಿಲ್ಲಾ ಪರಿಷತ್ತೋ ? ನಗರಸಭೆ ಪುರಸಭೆ ಕಾರ್ಪೊರೇಷನ್? ಯಾರು? ಇದನ್ನು ಕೂಡ ಸಂಬಂಧಪಟ್ಟ ನಗರಸಭೆಗೆ ಈ ಹಣವನ್ನು ನೀವೇ ಖರ್ಚು ಮಾಡಿ ಎಂದು ಹೇಳಿಕೊಂಡು ನೇರವಾಗಿ ಅವರಿಗೆ ಹಣವನ್ನು ಬಿಡುಗಡೆ ಮಾಡಿ ಜಿಲ್ಲಾ ಪರಿಷತ್ತಿಗೆ ನಿಮಗೆ ಸಂಬಂಧಪಟ್ಟ ಹಣವನ್ನು ನೀವು ಖರ್ಚು ಮಾಡಿ ಎಂದು ಅವರಿಗೆ ಹೇಳಿ ಸರ್ಕಾರದಿಂದ ಇದರ ಬಗ್ಗೆ ಸ್ಪಷ್ಟವಾದ ನಿಲುವು ಬರದಿದ್ದರೆ ಮತ್ತೆ ಹಣ ಎಲ್ಲೋ ಹೋಗಿ ಒಂದು ಕಡೆ ಬಿದ್ದಿರುತ್ತದೆ. ಈ ಹಣವನ್ನು ಜಿಲ್ಲಾ ಪರಿಷತ್ತಿಗೆ ಕಳುಹಿಸುತ್ತೀರೋ, ಕಾರ್ಪೊರೇಷನ್‌ಗೆ ಕಳುಹಿಸುತ್ತೀರೋ ನನಗೆ ಗೊತ್ತಿಲ್ಲ. ಆ ಸಂಬಂಧಪಟ್ಟ ವ್ಯಕ್ತಿಗೆ ಸ್ಪಷ್ಟವಾಗಿ ಅವರಿಗೆ ಯಾರು ಮಾಡಬೇಕು ಎಂದು ಕ್ಲಿಯರ್ ಇಲ್ಲ. ಜಿಲ್ಲಾ ಪರಿಷತ್ತಿನಲ್ಲಿ ಮಾತನಾಡಿದರೆ ಕಾರ್ಪೊರೇಷನ್‌ನಿಂದ ಅರ್ಧ ಹಣ ಕೊಡಿಸಿ, ನಾವು ಅರ್ಧ ಹಣವನ್ನು ಹಾಕುತ್ತೇವೆ ಎಂದು ಹೇಳುತ್ತಾರೆ. ಗ್ರಾಮಾಂತರ ಪ್ರದೇಶಕ್ಕೆ ನಗರ ಪ್ರದೇಶಕ್ಕೆ ಈ ರೀತಿ ಗೊಂದಲವಿರುವುದರಿಂದ ಸರ್ಕಾರ ಇದನ್ನು ಸ್ಪಷ್ಟ ಮಾಡಬೇಕು. ಈ ಒಂದು ಹಣವನ್ನು ಯಾರು ಬಳಸಿಕೊಳ್ಳಬೇಕು? ಈ ಹಣವನ್ನು ನೇರವಾಗಿ ಆಯಾ ಏಜೆನ್ಸಿಗೆ ಕಳುಹಿಸುವಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು ಎಂದು ಹೇಳಿ ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿ ಕುಳಿತಿದ್ದಾರೆ. ''ಆಶ್ರಯ ಯೋಜನೆಯ ಮುಖಾಂತರ 1403 ಲಕ್ಷ ರೂಪಾಯಿಗಳ ಅನುದಾನವನ್ನು ಆಯವ್ಯಯದಲ್ಲಿ ಕಲ್ಪಿಸಲಾಗಿತ್ತು. 94 ನೇ ಜೂನ್ ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸುಮಾರು 43,728 ಮನೆಗಳನ್ನು ಮುಕ್ತಾಯಗೊ ಳಿಸಲಾಗಿರುತ್ತದೆ. ಸುಮಾರು 25,457 ಮನೆಗಳು ವಿವಿಧ ನಿರ್ಮಾಣದ ಹಂತದಲ್ಲಿರುತ್ತದೆ. 200 ದಿನಗಳ ಕಾರ್ಯಕ್ರಮದಡಿ ಈ ಮನೆಗಳನ್ನು 1994 ಸೆಪ್ಟೆಂಬರ್ ಅಂತ್ಯದೊಳಗೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆಯೆಂದು ಹೇಳಿದ್ದರೂ ಸಹ ಈ ಆಶ್ರಯ ಯೋಜನೆಯ ಮುಖಾಂತರ ಮನೆಗಳು ಸಿಗುತ್ತದೆ ಎನ್ನುವಂಥ ಸಮಾಧಾನ ಮಾತ್ರವಾಯಿತೇ ಮನೆಗಳು ಸಿಗಲಿಲ್ಲ. ರಾಜ್ಯ ಸರ್ಕಾರದಿಂದ ಆಶ್ರಯ ಯೋಜನೆಗೆ ಪ್ರತಿ ತಿಂಗಳಿಗೆ ಒಂದು ಸಾರಿ ಬರುತ್ತಿತ್ತು. ನೀವು ಈ ಮನೆ ಕಟ್ಟಿ, ಗ್ರಾಮಾಂತರ ಪ್ರದೇಶದಲ್ಲಿ 500 ಮನೆ ಕಟ್ಟಿ, ನಗರ ಪ್ರದೇಶದಲ್ಲಿ 500 ಮನೆ ಕಟ್ಟಿ, ಕಟ್ಟುವುದಕ್ಕೆ ಎಲ್ಲಾ ಫಲಾನುಭವಿಗಳ ಲಿಸ್ಟ್ ಕೂಡ ಮಾಡಿದೆವು, ಆಶ್ರಯ ಕಮಿಟಿಯಿಂದ ಕಟ್ಟಿಸಿಕೊಟ್ಟು ಆಯಿತು. ಕೊನೆಗೆ ಈ ಒಂದು ಆಶ್ರಯ ಯೋಜನೆ ಬಗ್ಗೆ ಸಿ.ಓ.ಡಿ ತನಿಖೆಯಾಗುತ್ತಿರುವುದರಿಂದ ಗೃಹ ನಿರ್ಮಾಣ ಮಂಡಳಿಯಿಂದ ಮನೆ ಕಟ್ಟುವುದಕ್ಕೆ ಸಾಧ್ಯವಿಲ್ಲ.ನಾವು ಪಟ್ಟಿ ಕಳುಹಿಸಿದ್ದೇವೆ ನಾವು ಈಗ ಏನು ಮಾಡಬೇಕು? ಆ ಸಿ.ಓ.ಡಿ. ತನಿಖೆ ಯಾರು ತಪ್ಪಿತಸ್ಥರಾಗಿದ್ದಾರೆ. ಯಾರು ದುಡ್ಡು ಹೊಡೆದು ತಿಂದಿದ್ದಾರೆ. ಆ ಜನಗಳಿಗೆ ಏನು ಸಂಬಂಧವೋ ; ಪ್ರಶ್ನೆ ಬೇರೆ. ಆದರೆ ಮನೆ ಬೇಕು. ನೀವು ಗೃಹ ನಿರ್ಮಾಣ ಮಂಡಳಿಯಿಂದ ಕಟ್ಟುತ್ತೀರೋ; ಜಿಲ್ಲಾಧಿಕಾರಿಗಳ ಮುಖಾಂತರ

ಕಟ್ಟುತ್ತೀರೋ? ಬಿಡಿಓ ಮುಖಾಂತರ ಕಟ್ಟುತ್ತೀರೋ ಗೊತ್ತಿಲ್ಲ. ಸ್ಪಷ್ಟವಾಗಿ, ಒಂದು ನೇರವಾಗಿ ಇಷ್ಟು ಹಣ ಕೊಟ್ಟು ನೀವು ಕಟ್ಟಿಸಿ ಎಂದು ಜಿಲ್ಲಾಧಿಕಾರಿಗಳಿಗೆ ಕೊಡಿ. ಜಿಲ್ಲಾಧಿಕಾರಿಗಳ ಮುಖಾಂತರ ಕಟ್ಟಿದರೆ ಒಳ್ಳೆಯದು ಅವರ ಹತ್ತಿರ ಫಲನುಭವಿಗಳ ಪಟ್ಟಿ ತಯಾರು ಇದೆ. ಅವರು ಕಟ್ಟಿಸುವ ಪ್ರಯತ್ನ ಮಾಡುತ್ತಾರೆ. ಅದನ್ನು ಬಿಟ್ಟು ಈ ಗೃಹನಿರ್ಮಾಣ ಮಂಡಳಿಯಿಂದ ಈ ಒಂದು ಗೊಂದಲ ನಿರ್ಮಾಣಮಾಡಿದರೆ ಹೇಗೆ? ಈಗ ಅನೇಕ ಮನೆಗಳಿಗೆ ಫೌಂಡೇಷನ್ ಆಗಿದೆ. ಕೆಲವು ಅರ್ಧಂಬರ್ಧ ಗೋಡೆ ಮಟ್ಟಕ್ಕೆ ಬಂದು ನಿಂತಿವೆ. ಮಳೆ ಬಿದ್ದು ಅವು ಕುಸಿದುಹೋಗುತ್ತಿವೆ. ಇನ್ನು ಕೆಲವು ಪೂರ್ಣ ಮುಗಿದಿದೆ ಎನ್ನುವ ರೂಪಕ್ಕೆ ಬರುತ್ತಿರುವ ಸಂದರ್ಭದಲ್ಲಿ ಸ್ವಲ್ಪ ಉಳಿದು ಕಿಟಕಿ ಬಾಗಿಲು ಎಲ್ಲಾ ಕಿತ್ತುಕೊಂಡು ಕಿತ್ತುಕೊಂಡು ಹೋಗುತ್ತಿದ್ದಾರೆ. ಈ ರೀತಿ ಆಶ್ರಯ ಎಂದ ತಕ್ಷಣ ಇಡೀ ರಾಜ್ಯದಲ್ಲಿ ಬೆಚ್ಚಿಬೀಳುವಂಥ ಸ್ಥಿತಿ ಬಂದುಹೋಗಿದೆ. ನಾನು ಅದಕ್ಕೋಸ್ಕರ ಈ ಸರ್ಕಾರವನ್ನು ಒತ್ತಾಯ ಮಾಡುತ್ತಿರುವುದು ಹಣವನ್ನು ನೇರವಾಗಿ ಜಿಲ್ಲಾಧಿಕಾರಿಗಳ ಹತ್ತಿರ ಕಳುಹಿಸುವಂಥ ಪ್ರಯತ್ನವನ್ನು ನೀವು ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ :- ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ :- ಅದು ಸಾಕಾಗುತ್ತಿಲ್ಲ. ಈ ಪ್ರಶ್ನೆ ಈಗ ಬಂದಿರುವುದು. ನಾನು ಅನುಭವಿಸುತ್ತಿದ್ದೇನೆ. 'ಆಶ್ರಯ' ಕಮಿಟಿಯಲ್ಲಿ ಪಟ್ಟಿ ಕಳುಹಿಸಿಕೊಟ್ಟು ಜಿಲ್ಲಾಧಿಕಾರಿಗಳ ಹತ್ತಿರ ಹಾಗೆಯೇ ಉಳಿದಿದೆ. ಪೂರ್ಣ ಹಣ ಇನ್ನೂ ಸಿಕ್ಕಿಲ್ಲ, ಇದಕ್ಕೆ ಪರಿಹಾರವನ್ನು ಮಾಡಬೇಕಾಗುತ್ತದೆ. ಜೊತೆಗೆ ಇನ್ನೊಂದು ಹೇಳುತ್ತಿದ್ದೀರಿ, ಏನೆಂದರೆ ''1994 ರ ಸೆಪ್ಟಂಬರ್ ಅಂತ್ಯದೊಳಗೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ'', ಎಂದು. ಇನ್ನು ಎಷ್ಟು ದಿವಸ ಉಳಿದಿದೆ? ಇವೊತ್ತು 7ನೇ ತಾರೀಖಾಗಿದ್ದು ಇನ್ನು 23 ದಿವಸಗಳು ಉಳಿದಿದ್ದು ಎಲ್ಲಿ ಮುಗಿಸುತ್ತಿರಿ? ಮತ್ತೆ ಚುನಾವಣೆ ಬಂತೆಂದು ಘೋಷಣೆ. ಅದಕ್ಕೋಸ್ಕರ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿರುವುದೇನೆಂದರೆ, ಇಷ್ಟು ಹಣ ನಿಮಗೆ ಕೊಡುತ್ತೇವೆ, ಇಷ್ಟು ಮನೆಗಳನ್ನು ನಿಮಗೆ ಕಟ್ಟಿಕೊಡುತ್ತೇವೆಂದು ನೇರವಾಗಿ ಹೇಳಿ. ಇದನ್ನು ಬಿಟ್ಟು ಸಮ್ಮನೆ 2 ಲಕ್ಷ ಮನೆಗಳನ್ನು, 3 ಲಕ್ಷಮನೆಗಳನ್ನು ಹದಿನೈದು ದಿವಸಗಳಲ್ಲಿ ಕಟ್ಟಿಕೊಡಲಾಗುವುದೆಂದು ಮಾಯ-ಮಂತ್ರ ಮಾಡುವ ರೀತಿಯಲ್ಲಿ ಪ್ರತಿ ದಿವಸ ಒಂದೊಂದು ಹೇಳಿಕೆ ಕೊಡುತ್ತಿರುವುದರಿಂದ ನಾವು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಜನರು ನಮ್ಮನ್ನು ಕೇಳುತ್ತಾರೆ. ಏನೆಂದರೆ ಮುಖ್ಯಮಂತ್ರಿಯವರು 2 ಲಕ್ಷ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದಾರೆ, ಅಂದರೆ, ಒಂದೊಂದು ಕ್ಷೇತ್ರದಲ್ಲೂ 1 ಸಾವಿರ ಮನೆಗಳಾದರೂ ಬರುತ್ತದೆ. ನಮ್ಮ ಗ್ರಾಮ ಪಂಚಾಯಿತಿಗೆ ಇಷ್ಟು ಮನೆಗಳು ಬರುತ್ತದೆ, ನಗರ ಪ್ರದೇಶಗಳಿಗೆ ಇಷ್ಟು ಮನೆಗಳು ಬರುತ್ತದೆ, ದಯವಿಟ್ಟು ನಮಗೆ ಮನೆ ಕಟ್ಟಿಕೊಡಿ ಎಂದು ಇಡೀ ರಾಜ್ಯದ ಜನರು ಪ್ರತಿಯೊಬ್ಬ ಶಾಸಕರನ್ನು ಕೇಳುತ್ತಿದ್ದಾರೆ. ತಾವು ಇದನ್ನು ಸೆಪ್ಟೆಂಬರ್ ಅಂತ್ಯದೊಳಗೆ ಮಾಡುತ್ತೀರೋ ಅಥವಾ ಮಾರ್ಚಿ ಅಂತ್ಯದೊಳಗೆ ಮಾಡುತ್ತೀರೊ ಎಂದು ನಮಗೆ ಗೊತ್ತಿಲ್ಲ. ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ಆದೇಶ ಕೊಟ್ಟು ಒಂದೊಂದು ಕ್ಷೇತ್ರದಲ್ಲಿ ಇಂತಿಷ್ಟು ಮನೆಗಳನ್ನು ನೀವು ಕಟ್ಟಿಸಬೇಕು, ಇದಕ್ಕಾಗಿ ಇಷ್ಟು

ಹಣ ಕಳುಹಿಸುತ್ತಿದ್ದೇವೆಂದು ಶಾಸಕರುಗಳ ಮುಖಾಂತರ ಸುತ್ತೋಲೆ ಕಳುಹಿಸಿಕೊಟ್ಟರೆ ಅನುಕೂಲವಾಗುತ್ತದೆ. ಆಗ ಇಷ್ಟು ಮನೆಗಳು ಖಂಡಿತವಾಗಿಯೂ ಸಿಗುತ್ತದೆಂದು ನಾವು ಜನರಿಗೆ ಹೇಳುತ್ತೇವೆ. ತಮಗೆ ಗೊತ್ತಿರುವಂತೆ ಇತ್ತೀಚೆಗೆ ಮಹಾಪುರ ಬಂದು ಕೆಲವು ಮನೆಗಳು ಬಿದ್ದುಹೋದವು. ತಮಗೆ ಹೇಗಿದ್ದರೂ 'ಆಶ್ರಯ' ಯೋಜನೆಯಡಿ ಮನೆಗಳನ್ನು ಕಟ್ಟಿಕೊಡುವಂಥ ಅವಕಾಶ ಇದೆ. ನೆರೆ ಹಾವಳಿಯಲ್ಲಿ ತಮ್ಮ ಮನೆಗಳನ್ನು ಯಾರು ಕಳೆದುಕೊಂಡಿದ್ದಾರೋ ಅವರಿಗೆ ಕನ್ವರ್ಟ್ ಮಾಡಿ ಬಿಡಿ; ಮತ್ತೆ ಹಣ ಬರುತ್ತದೆ. ಆಗ ' ಆಶ್ರಯ ' ಯೋಜನೆಯಡಿ ಮನೆಗಳನ್ನು ಕಟ್ಟಿಸಿ ಎಂದು ಹೇಳುತ್ತಾರೆ. ಇವರು 2ಲಕ್ಷ ಮನೆಗಳನ್ನು ತಮ್ಮ ಮನೆಗಳನ್ನು ಕಳೆದುಕೊಂಡು ನಿರ್ವಸಿತರಾದಂಥವರಿಗೆ ಕೊಡುತ್ತೀರೋ ಅಥವಾ ಆಶ್ರಯ ಯೋಜನೆಯಡಿ ಕೊಡುತ್ತೀರೋ? ಇದರ ಬಗ್ಗೆ ನಾನಂತೂ ತುಂಬಾ ಗೊಂದಲದಲ್ಲಿದ್ದೇನೆ. ಬೇರೆ ಶಾಸಕರಲ್ಲೂ ಸಹ ಈ ಗೊಂದಲವಿದೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ; ಪ್ರತಿಯೊಂದು ಕ್ಷೇತ್ರದಲ್ಲೂ ಇಂತಿಷ್ಟು ಮನೆಗಳನ್ನು ಆಶ್ರಯ ಯೋಜನೆಯಡಿಯಲ್ಲಿ ಕಟ್ಟಿಕೊಡುತ್ತೇವೆಂದು ನೇರವಾಗಿ ಹೇಳಬೇಕು. ಮತ್ತು ಆದೇ ರೀತಿ ಅತಿವೃಷ್ಟಿಯುಂಟಾಗಿ ಬಿದ್ದಿರುವ ಮನೆಗಳ ಅಂದಾಜು ಪಟ್ಟಿ ತಮಗೆ ಈಗಾಗಲೇ ಬಂದಿವೆ. ಇವರಿಗೂ ಸಹ ಮನೆಗಳನ್ನು ಕಟ್ಟಿಕೊಡಲಾಗುವುದೆಂದು ಹೇಳಿದರೆ, ನಾವು ಮನೆ ಕಳೆದುಕೊಂಡು ನಿರ್ವಸಿತರಾದವರ ಪಟ್ಟಿಯನ್ನು ಕಳುಹಿಸಿಕೊಡುತ್ತೇವೆ. 'ಆಶ್ರಯ' ಯೋಜನೆಯಡಿ ಮನೆಗಳನ್ನು ಕಟ್ಟಿಕೊಡುವುದಕ್ಕೂ ಮತ್ತು ನೆರೆ ಬಂದು ಮನೆಗಳನ್ನು ಕಳೆದುಕೊಂಡವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೂ ಸಂಬಂಧ ಕಲ್ಪಿಸಬೇಡಿ. ಆದುದರಿಂದ, 'ಆಶ್ರಯ' ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಇಂತಿಷ್ಟು ಹಣ ಕೊಡುತ್ತೇವೆ ಮತ್ತು ಮಹಾಪೂರದಿಂದ ಮನೆ ಕಳೆದುಕೊಂಡವರಿಗೆ ಮನೆ ಕಟ್ಟಿಕೊಳ್ಳುವುದಕ್ಕಾಗಿ ಇಷ್ಟು ಹಣ ಕೊಡುತ್ತೇವೆಂದು ಹೇಳಿದರೆ ಅದಕ್ಕೆ ತಕ್ಕ ವ್ಯವಸ್ಥೆ ಮಾಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. ಇನ್ನು ' ಹೊಸ ಮಂತ್ರಿಗಳ ಮತ್ತು ಪಾರ್ಲಿಮೆಂಟ್ ಸದಸ್ಯರ ಉಪಯೋಗಕ್ಕಾಗಿ ಕಾರುಗಳನ್ನು ಕೊಳ್ಳಲು ಹೆಚ್ಚುವರಿ ಮೊಬಲಗಿನ ಅವಶ್ಯಕತೆ ಇದೆ' ಎಂದು ತಿಳಿಸಿದ್ದಾರೆ. ಯಾರಿಗೆ ಅವಶ್ಯಕತೆ ಇದೆ? ಹೊಸ ಮಂತ್ರಿಗಳನ್ನು ಮಾಡುವುದಕ್ಕೆ ನಾವು ಹೇಳಿದ್ದೇವೆಯೇ? ಈ ರಾಜ್ಯದ ಜನರು ನಿಮಗೆ ಹೇಳಲಿಲ್ಲ. ನಿಮ್ಮಲ್ಲೇ ಗೊಂದಲ ನಿರ್ಮಾಣ ಮಾಡಿಕೊಂಡು ಯಾರನ್ನೋ ತೃಪ್ತಿಪಡಿಸಬೇಕು, ಅದಕ್ಕೋಸ್ಕರ ಹೊಸ ಮಂತ್ರಿಗಳನ್ನು ನೇಮಕ ಮಾಡಬೇಕೆನ್ನುವ ಒಂದೇ ಉದ್ದೇಶವಿಟ್ಟುಕೊಂಡು ಮಾಡಿದ್ದೀರಿ. ಪ್ರಪಂಚದಲ್ಲಿಎಲ್ಲಿಯೂ ಇಷ್ಟೊಂದು ದೊಡ್ಡ ಮಂತ್ರಿಮಂಡಲ ಬಹುಶಃ ಇರಲಿಕ್ಕಿಲ್ಲ. 200 ದಿವಸಗಳ ಸಾಧನೆ ಮಾಡಿರುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ ಮೂರು ವರ್ಷಗಳ ಸಾಧನೆ ಮಾಡಿರುವುದಾಗಿ ಪ್ರಧಾನಮಂತ್ರಿಗಳು ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯದ ದೊಡ್ಡ ಸಾಧನೆ ಎಂದರೆ 46 ಜನರ ದೊಡ್ಡ ಮಂತ್ರಿಮಂಡಲ !

ಅಧ್ಯಕ್ಷರು :- ಈಶ್ವರಪ್ಪನವರೇ, ತಾವು ಪೂರಕ ಅಂದಾಜುಗಳ ಮೇಲೆ ಮಾತ್ರ ಚರ್ಚೆ ನಡೆಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ :- ಆದರ ಬಗ್ಗೆಯೇ ನಾನು ಹೇಳುತ್ತಿದ್ದೇನೆ. ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳುವುದೇನೆಂದರೆ, ಹೊಸ ಕಾರುಗಳನ್ನು ಕೊಳ್ಳಲು ಜನರು

ಹೇಳಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರುವ ಜನರಿಗೆ ಇವುಗಳ ಅವಶ್ಯಕತೆ ಇಲ್ಲ. ಇವರು ಗೊಂದಲ ನಿರ್ಮಿಸುವುದಕ್ಕೋಸ್ಕರ ಮಂತ್ರಿಮಂಡಲ ರಚಿಸಿಕೊಂಡು, ಆ ಮಂತ್ರಿಗಳಿಗೆ ಕಾರು ಕೊಂಡುಕೊಳ್ಳುವುದಕ್ಕೋಸ್ಕರ ಬಡ ಬೋರೇಗೌಡ ತನ್ನ ಹಣ ಕೊಡುವಂಥ ಸ್ಥಿತಿ ಈ ರಾಜ್ಯದಲ್ಲಿ ಬಂದಿದೆಯಲ್ಲಾ, ಇದಕ್ಕೆಏನು ಹೇಳಬೇಕು? ಇರುವ ಹಳೆಯ ಕಾರುಗಳನ್ನೇ ದುರುಸ್ತಿಪಡಿಸಿ ಮಂತ್ರಿಗಳಿಗೆ ಕೊಟ್ಟರೆ ಅವರು ತೃಪ್ತರಾಗಿರುತ್ತಾರೆ. ಅವರು ಕೂಡ ಒಂದು ಗೂಟದ ಕಾರಿನಲ್ಲಿ ಓಡಾಡಬೇಕೆಂಬ ಆಸೆ ಇತ್ತು. ಅವರನ್ನು ತೃಪ್ತಿಪಡಿಸಬೇಕೆಂದು ನಿಮಗೂ ಆಸೆ ಇದೆ. ಅಂಬಾಸಿಡರ್ ಕಾರುಗಳು ಇನ್ನಿತರ ಬೇರೆ ಕಾರುಗಳು ಬೇಕಾದಷ್ಟಿವೆ. ಮಂತ್ರಿಗಳಿಗೆ ಕಾಂಟಸ್ಸಾ ಕಾರು ಇದ್ದರೆ ಮಾತ್ರ ಅವರು ಮಂತ್ರಿ ಎಂದು ಕರೆಸಿಕೊಳ್ಳುತ್ತಾರೆಂಬ ಪರಿಸ್ಥಿತಿ ನಮ್ಮ ದೇಶದಲ್ಲಿ ಇಲ್ಲ. ಇವರು ಕಾರಗಳನ್ನೇ ಬಳಸಿಕೊಳ್ಳುವ ಪ್ರಯತ್ನ ಮಾಡಿ. ಯಾವುದೋ ಕಾರಣಕ್ಕಾಗಿ ಹೊಸ ಮಂತ್ರಿಗಳಿಗೆ ಕಾಂಟೆಸ್ಸಾ ಕಾರುಗಳ ಅವಶ್ಯಕತೆಯಿದೆಯೆಂದು ಪ್ರಸ್ತಾವ ತಂದಿದ್ದೀರಿ. ಇದನ್ನು ಇಡೀ ರಾಜ್ಯದ ಜನರು ವಿರೋಧಿಸುತ್ತಾರೆ. ಖಂಡಿತವಾಗಿಯೂ ಹೊಸ ಕಾರುಗಳನ್ನುಕೊಳ್ಳುವಂಥ ಪಯತ್ನ ಸರ್ಕಾರ ಮಾಡಬಾರದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಸಿ.ಬೈರೇಗೌಡ (ಮೇಮಗಲ್) :- ಮಾನ್ಯ ಅಧ್ಯಕ್ಷರೆ, ಆ ಪೂರಕ ಬೇಡಿಕೆಗಳು ಮತ್ತು ಇದರ ಅವಶ್ಯಕತೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಸವಿಸ್ತಾರವಾಗಿ ಹೇಳಿದ್ದಾರೆ. ಅವರು ಹೇಳಿದಂತೆ ಪೂರ್ಣವಾದ ಬಜೆಟ್ ಪಾಸ್ ಆಗಿ ಇನ್ನು ಎರಡು ದಿವಸ ಕೂಡ ಮುಗಿದಿಲ್ಲ. ಆಗಲೇ ನಮ್ಮ ಮುಂದೆ ಈ ಬೇಡಿಕೆಗಳನ್ನು ಇಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿರುವ ಸರ್ಕಾರವನ್ನು ನಾನೂ ಸಹ ತೀವ್ರವಾಗಿ ಖಂಡಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರಕ್ಕೆ ಮುಂದಾಲೋಚನೆ ಇಲ್ಲ. ಬದಲಾಗಿ ಸಮಯಕ್ಕೆ ಸರಿಯಾಗಿ ಏನು ಬರುತ್ತದೆ, ಆದರ ಒಂದು ಮೆಟ್ಟಿಲು ಹತ್ತಿದರೆ ಸಾಕೆನ್ನುವ ದೂರದೃಷ್ಟಿ ಇಲ್ಲದ ತಕ್ಷಣ ದೃಷ್ಟಿಯಿಟ್ಟುಕೊಂಡು ಸರ್ಕಾರ ನಡೆಸುತ್ತಿರುವ ಕಾರಣದಿಂದ ಇವೊತ್ತು ನಮ್ಮಮುಂದೆ ಈ ಬೇಡಿಕೆಗಳು ಬಂದಿವೆ. ಇಲ್ಲಿ ನಾವು ಈಗಾಗಲೇ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ವೀರಪ್ಪಮೊಯಿಲಿ ಯವರು ಮುಖ್ಯಮಂತ್ರಿಗಳಾದ ಮೇಲೆ ಅನೇಕ ಲಾಬಿಗಳ ಮೇಲೆ ಯುದ್ಧವನ್ನು ಸಾರಿದರು. ಹುತಾತ್ಮರಾಗುತ್ತೇವೆನ್ನತಕ್ಕ ಮಾತನ್ನು ಅನೇಕ ಸಾರಿ ಹೇಳಿದ್ದಾರೆ. ಆದರೆ ಎಷ್ಟರ ಮಟ್ಟಿಗೆ ಹುತಾತ್ಮರಾಗಿದ್ದಾರೋ ಗೊತ್ತಿಲ್ಲ. ಅವರು ಹೇಳಿರತಕ್ಕ ಮಾತುಗಳು ಎಷ್ಟರ ಮಟ್ಟಿಗೆ ಕಾರ್ಯಗತವಾಗಿದೆಯೋ ಎನ್ನುವ ಬಗ್ಗೆ ವಿಮರ್ಶೆ ಮಾಡಬೇಕಾಗಿದೆ. ಇವತ್ತು ನಾವು ಅಧಿವೇಶನಕ್ಕೆ ಕೊನೆಯ ದಿನದಲ್ಲಿದ್ದೇವೆ. ನಾನು ಒಂದೇ ಉದಾಹರಣೆಯನ್ನು ಕೊಡ ಬಯಸುತ್ತೇನೆ. 1992ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಅನೇಕ ನಗರ ಪ್ರದೇಶಗಳಲ್ಲಿ ಏನು ಮಲವನ್ನು ತಲೆಯ ಮೇಲೆ ಹೊರತಕ್ಕ ದುಷ್ಟ ಪದ್ಧತಿ ಇತ್ತೋ ಗುಂಡಿಯನ್ನು ಮಾಡತಕ್ಕ ಪದ್ಧತಿ ಏನು ಇತ್ತೊ, ಅಂಥ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕು ಎನ್ನತಕ್ಕ ಕಾರಣಕೋಸ್ಕರವಾಗಿ ಹುಡ್ಕೋದವರು 32 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿ 52 ನಗರ ಪ್ರದೇಶಗಳಲ್ಲಿ ಅದನ್ನು ಕಾರ್ಯಗತ ಮಾಡುವುದಕ್ಕೆ, ಮುಂದಾದರು. ಆದರೆ

31.4 ಕೋಟಿ ರೂಪಾಯಿಗಳಲ್ಲಿ ಮಾರ್ಚ್ 94ಕ್ಕೆ ಸುಮಾರು27.34 ಕೋಟಿ ರೂಪಾಯಿಗಳು ಖರ್ಚಾಗಿದೆ. ಇವರ ಮೂಲ ಉದ್ದೇಶ ಏನಿದೆ ಅದನ್ನು ನಾವೂ ಸ್ವಾಗತಿಸುತ್ತೇವೆ. ಈ ಮಲವನ್ನು ತಲೆಯಮೇಲೆ ಹೊರತಕ್ಕ ಪದ್ಧತಿಯ ನಿರ್ಮೂಲನೆಯ ಕೆಲಸ ಈ ರಾಜ್ಯದಲ್ಲಿ ಮೊದಲೇ ಆಗಬೇಕಾಗಿತ್ತು. ಅದು ಆಗಿರಲಿಲ್ಲ. ಕೊನೆಯ ಪಕ್ಷ ಈಗಲಾದರೂ ಸಹ ಹುಡ್ಕೊದವರು ಈ ಕೆಲಸವನ್ನು ಕೈಗೆತ್ತಿಕೊಂಡು ಏನು ಕೆಲಸವನ್ನು ಮಾಡಲು ಮುಂದಾದರೋ ಅದನ್ನು ನಾವು ಸ್ವಾಗತ್ತಿಸುತ್ತೇವೆ. ಆದರೆ ಇವತ್ತು ಮಾರ್ಚ್ 94 ರವರೆಗೆ ಆ ಹಣದಲ್ಲಿ 27.34 ಕೋಟಿ ಏನು ಖರ್ಚು ಮಾಡಿದ್ದಾರೆ, ಆದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ನನ್ನ ಲೆಕ್ಕದ ಪ್ರಕಾರ ಇಪ್ಪತ್ತು ಕೋಟಿ ರೂಪಾಯಿಗಳವರೆಗೆ ಇದರಲ್ಲಿ ದುರ್ವ್ಯಯವಾಗಿದೆ. ಮುಖ್ಯಮಂತ್ರಿಗಳ ಗಮನಕ್ಕೆ ಇದರಲ್ಲಿನ ಹಣವು ದುರುಪಯೋಗವಾಗಿದೆ ಎಂಬುದು ಬಂದಾಗ, ಅವರು ದಿನಾಂಕಃ 17-3-94ರಂದು ಒಂದು ಟಿಪ್ಪಣಿಯನ್ನು ಕಾರ್ಯದರ್ಶಿಯವರಿಗೆ ಕಳುಹಿಸಿಕೊಟ್ಟು ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ತಿಳಿಸುತ್ತಾರೆ. ಅದೇ ರೀತಿ 18-4-94ರಂದು ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಂದ ಒಂದು ಟಿಪ್ಪಣಿ ಹೋಗುತ್ತದೆ. ಇದಕ್ಕೆ ಪ್ರತಿಯಾಗಿ ಕಾರ್ಯದರ್ಶಿ-2 ರವರು ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ನ ಕಛೇರಿಗೆ ಹೋಗಿ ಸುಮಾರು 300ಕ್ಕಿಂತ ಹೆಚ್ಚು ಕಡತಗಳನ್ನು ವಶಪಡಿಸಿಕೊಳ್ಳುತ್ತಾರೆ. ಮತ್ತು ಕಡತಗಳಲ್ಲೇನಿದೆ ಎಂಬುದನ್ನು ಪರಿಶೀಲನೆ ಮಾಡುತ್ತಾರೆ. ಅನಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಜೂನ್ 13, 1994ರಂದು ಟಿಪ್ಪಣಿಯನ್ನು ಕಳುಹಿಸಿಕೊಡುತ್ತಾರೆ. ಈ ಟಿಪ್ಪಣಿಯು ಐದು ಪುಟವಿದೆ. ಅದರ ಅಧಿಕೃತ ದಾಖಲೆ ನನ್ನ ಬಳಿ ಇದೆ. ಈ ಟಿಪ್ಪಣಿಗೆ ಪೂರಕವಾಗಿ ಸುಮಾರು 64 ಪುಟದ ಟಿಪ್ಪಣಿಯನ್ನು ಸಹ ಕಳಿಸಿಕೊಟ್ಟಿದ್ದಾರೆ. ಇದರಲ್ಲೇನಾಗಿದೆ ಎಂದರೆ ಈ ರೀತಿ dry latrine ಅನ್ನು flush out ಆಗಿ ಪರಿವರ್ತನೆ ಮಾಡತಕ್ಕ ಕೆಲಸವಾಗಲಿಲ್ಲ, ಅಂಗಡಿಗೆ ಒಂದೊಂದು ಸಾರಿ ಹಣವನ್ನು ಕೊಟ್ಟಿದ್ದಾರೆ. ಮನೆ ನಂಬರ್ ಏನೂ ಇಲ್ಲ ಕೆಲವು ಕಡೆ ಅಂಗಡಿ ಎಂದು ತೋರಿಸಿದ್ದಾರೆ. 2-3 ಸಲ ಹಣವನ್ನು ಪಾವತಿ ಮಾಡಿದ್ದಾರೆ ಹಾಗೂ ಕಂಟ್ರಾಕ್ಟ್‌ದಾರರು ಇದರಲ್ಲಿ ಸೇರಿದ್ದಾರೆ. ಅವರು ಬೇನಾಮಿ ಕಂಟ್ರಾಕ್ಟ್‌ದಾರರಾಗಿ ಕೆಲಸ ಮಾಡುತ್ತಿದ್ದಾರೆ. ಈ ರೀತಿಯಾಗಿ ಕೆಲಸವನ್ನು ಮಾಡಿ ಹಣವನ್ನು ಲಪಟಾಯಿಸಿದ್ದಾರೆ. ಅಲ್ಲಿನ ಕಾರ್ಯದರ್ಶಿ ಅವರು ಅಧಿಕೃತವಾಗಿ ಮಾನ್ಯ ಮುಖ್ಯಮಂತ್ರಿಯವರಿಗೆ ಕಳುಹಿಸಿರುವಂತಹ ಟಿಪ್ಪಣಿಯ ಪ್ರಕಾರ ಅವರು ಕೆಲವು ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಸೂಚನೆ ಮಾಡಿದ್ದಾರೆ. ಅದರಲ್ಲಿನ 2ಪ್ಯಾರವನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅಂಶ 2ರಲ್ಲಿ ಪ್ರಸ್ತುಕ ಯೋಜನೆಯಲ್ಲಿ ಫಲಾನುಭವಿಗಳ ವಂತಿಗೆಗಾಗಿ ಇರಿಸಿದ ಸರ್ಕಾರಿ ಹಣದಲ್ಲಿ ಗುತ್ತಿಗೆದಾರ ಕೋರಿಕೆಯಂತೆ ಪೌರಾಡಳಿತ ನಿರ್ದೇಶನಾಲಯವು ತಪ್ಪಾಗಿ ಬಟವಾಡೆ ಮಾಡಿದ್ದು ಈ ಯೋಜನೆಯ ಕಾರ್ಯಾನುಷ್ಠಾನದಲ್ಲಿನ ಲೋಪದ ಕಾರಣ. ಇಂತಹ ಗುತ್ತಿಗೆದಾರರು ಪಡೆದ ಹಣದ ವಸೂಲಾತಿಗಾಗಿ ಕ್ರಿಮಿನಲ್ ಮತ್ತು ಸಿವಿಲ್ ವ್ಯವಹಾರವನ್ನು ನಡೆಸತಕ್ಕದ್ದು ಕ್ರಿಮಿನಲ್ ಅಫೆನ್ಸ್ ಮಾಡಿರತಕ್ಕಂಥವರು ಮತ್ತು ಹಣವನ್ನು ತಪ್ಪಾಗಿ ಏನು ಬಟವಾಡೆ ಮಾಡಿದ್ದಾರೆ ಅದನ್ನು ವಾಪಸ್ಸು ಪಡೆಯಬೇಕೆಂದೂ

ಸಹ ಕಾರ್ಯದರ್ಶಿಯವರು ಸಲಹೆ ಮಾಡಿದ್ದಾರೆ. ಇದರಲ್ಲಿ ಶಾಮೀಲಾಗಿರುವಂತಹ ಅಧಿಕಾರಿಗಳ ಬಗ್ಗೆ ಮತ್ತು ಯಾವ ರೀತಿ ನಡೆದಿದೆ ಎಂಬುದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಬೇಕೆಂಬುದನ್ನೂ ಸಹ ಇವರು ತಿಳಿಸಿದ್ದಾರೆ. ಇಲ್ಲಿಯವರೆಗೂ ನಡೆದ 64ಪುಟಗಳ ಟಿಪ್ಪಣಿ ಮತ್ತು 5 ಪುಟಗಳ ಮೂಲ ಸಂಕ್ಷಿಪ್ತ ಟಿಪ್ಪಣಿ ಇದೆ. ಇದೆಲ್ಲವನ್ನೂ ಓದಲು ಹೆಚ್ಚು ವೇಳೆಯಾಗುತ್ತದೆ. ಹೀಗೆ, ಅವರ ಮೇಲೆ ಗುರುತರವಾದಂತಹ ಆರೋಪವಿದೆ, ಕೋಟ್ಯಾಂತರ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ. ಅಲ್ಲಿ ಇರತಕ್ಕಂಥ ಡೈರೆಕ್ಟರ್ ಆಫ್ ಮ್ಯುನಿಸಿಪಲ್ ಅಡ್‌ಮಿನಿಸ್ಟ್ರೇಷನ್ ಆಗಿರುವಂಥವರು ಮತ್ತು ಅವರ ಕಛೇರಿಯಲ್ಲಿರತಕ್ಕಂಥ ರಾಮಸ್ವಾಮಿ ಎನ್ನತಕ್ಕಂಥವರು ದುರುಪಯೋಗಮಾಡಿದ್ದಾರೆಂದು ಅಲ್ಲಿನ ಕಾರ್ಯದರ್ಶಿಯವರು ಮಾನ್ಯ ಮುಖ್ಯಮಂತ್ರಿಯವರಿಗೆ ನೇರವಾಗಿ ಟಿಪ್ಪಣಿ ಕಳುಹಿಸಿದ್ದಾರೆ. ಅಧ್ಯಕ್ಷರೇ, ಇದು ಜುಲೈನಲ್ಲಿ ಆಗಿದ್ದು ಮೂರು ತಿಂಗಳಾಗುತ್ತಾ ಬಂದರೂ ಇದುವರೆಗೂ ಯಾವ ಕ್ರಮ ಇಲ್ಲ. ಇವತ್ತಿನ ದಿವಸ ಆಡಳಿತ ಈ ರೀತಿ ನಡೆಯಲು ಕಾರಣವೇನು? ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಬಲವಾದಂಥ ಕಾರಣವೇನು ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಕಾರಣಗಳು ಏನೂ ಇಲ್ಲ, ಇಲ್ಲಿ ಏನೋ ನಡೆಯುತ್ತದೆ ಎಂಬ ಗುಮಾನಿ ಹುಟ್ಟತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಇದೆ. ದುರದೃಷ್ಟ ಏನೆಂದರೆ ಯಾರು ಈ ಟಿಪ್ಪಣಿಯನ್ನು ಮುಖ್ಯಮಂತ್ರಿಯವರಿಗೆ ಕಳುಹಿಸಿದ್ದಾರೋ ಅವರು ಇಲ್ಲಿ ಇವತ್ತಿನ ದಿವಸ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ ಅಪ್ಪಿತಪ್ಪಿ, ಅಲ್ಲಿ ಇಲ್ಲಿ ಯಾರೋ ಒಬ್ಬ ದಕ್ಷ ಅಧಿಕಾರಿಗಳು ಇದ್ದಾರೆ. ಅಂತಹ ದಕ್ಷ ಅಧಿಕಾರಿಗಳು ಮೂರು ತಿಂಗಳುಗಳ ಕಾಲ ಸುಮಾರು 300ಕ್ಕೂ ಹೆಚ್ಚು ಕಡತಗಳನ್ನು ಪರಿಶೀಲನೆ ಮಾಡಿ ಹಿರಿಯ ಅಧಿಕಾರಿಗಳಿಗೆ ಕಳುಹಿಸಿದಂತಹ ವರದಿಯನ್ನು ಮೇಲೆ ಮುಖ್ಯಮಂತ್ರಿಯವರೇ ಕ್ರಮ ತೆಗೆದುಕೊಳ್ಳದಿದ್ದರೆ ಅವರು ಯಾವ ರೀತಿ ಕೆಲಸ ಮಾಡುತ್ತಾರೆ? ಅವರ ಕೈ ಕೆಳಗೆ ಕೆಲಸ ಮಾಡಿದಂತಹ ಅಧಿಕಾರಿಗಳಿಗೆ ಮೇಲಾಧಿಕಾರಿಗಳ ಮೇಲೆ ಏನು ವಿಶ್ವಾಸವಿರುತ್ತದೆ. ಇವತ್ತು ದಕ್ಷ ಅಧಿಕಾರಿಗಳನ್ನು ಡೀಮಾರಲೈಸ್ ಮಾಡುವಂತಹ ಪರಿಸ್ಥಿತಿ ಇದೆ. ಇವತ್ತು ನನ್ನ ತಿಳುವಳಿಕೆಯ ಪ್ರಕಾರ ಈ ವರದಿಯನ್ನು ಕಳುಹಿಸಿರುವಂತಹ ಶ್ರೀ ಸುಧೀರ್ ಕುಮಾರ್ ಎನ್ನುವವರು ಇವತ್ತು ರಜಾ ಮೇಲೆ ಹೋಗುವಂತಹ ಪರಿಸ್ಥಿತಿ ಬಂದಿದೆ. ಯಾರು ದಕ್ಷರಾಗಿ ಕೆಲಸ ಮಾಡುತ್ತಾರೋ ಆ ಅಧಿಕಾರಿಗಳನ್ನು ಸ್ನಬ್ ಮಾಡತಕ್ಕ ಕೆಲಸ ಆಡಳಿತದಲ್ಲಿ ನಡೆಯುತ್ತಿದೆ.

(ಶ್ರೀ ರಾಜುಗೌಡರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ರಾಜ್ಯದ ಆಡಳಿತ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂಥಾದ್ದಕ್ಕೂ, ಮಾಡುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ರೀತಿಯಾಗಿ ಅಧಿಕಾರಿಗಳನ್ನು, ಭ್ರಷ್ಟ ಅಧಿಕಾರಿಗಳನ್ನು, ರಕ್ಷಿಸತಕ್ಕಂಥ ಕೆಲಸ ಮುಖ್ಯಮಂತ್ರಿಗಳಿಂದಲೇ ಆದರೆ ಈ ರಾಜ್ಯವನ್ನು ಕಾಪಾಡುವವರು ಯಾರು? ಈ ರೀತಿ ಸಾಮಾನ್ಯ ಜನರ ಹಣ ಪೋಲಾಗುತ್ತಾ ಹೋದರೆ, ಸರ್ಕಾರ ಇರುವುದು ಹಣ ಪೋಲಾಗುವುದನ್ನು ನೋಡಿಕೊಂಡು ಇರುವುದಕ್ಕಾ? ಇದನ್ನು ದಯವಿಟ್ಟು ಹೇಳಬೇಕು. ಇವತ್ತು ನಿಮ್ಮ ಅಧಿಕೃತವಾದಂತಹ ದಾಖಲೆ ನನ್ನ ಹತ್ತಿರವಿದೆ.

ಇದನ್ನು ಸರ್ಕಾರಕ್ಕೆ ಬೇಕಾದರೆ ಕೊಡುವುದಕ್ಕೆ ನಾನು ತಯಾರಿದ್ದೇನೆ. ದಕ್ಷತೆಯಿಂದ ಯಾವ ಅಧಿಕಾರಿಗಳು ಕೆಲಸ ಮಾಡುತ್ತಾರೋ ಅವರ ಬರವಣಿಗೆಗೆ ನಿಮ್ಮಲ್ಲಿ ಬೆಲೆ ಇಲ್ಲ. ಮತ್ಯಾವುದಕ್ಕೋ ನಿಮ್ಮಲ್ಲಿ ಬೆಲೆ ಇದೆ. ಏನಿದೆ ಇದರಲ್ಲಿ ಒಳಗುಟ್ಟು? ಮಾನ್ಯ ಮುಖ್ಯಮಂತ್ರಿಯವರ ನಡತೆಯನ್ನು ಈ ವತ್ತಿನ ದಿವಸ ಪ್ರಶ್ನೆ ಮಾಡಬೇಕಾಗಿದೆ. ಯಾವುದೇ ಮುಖ್ಯಮಂತ್ರಿ ಇದ್ದರೂ ಸಹ ಇದು ಸರಿಯಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಬಹಳ ತೀವ್ರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ತಕ್ಷಣ ಯಾರು ತಪ್ಪಿತಸ್ಥ ಅಧಿಕಾರಿಗಳು ಇದ್ದಾರೆ, ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಅಥವಾ ತೆಗೆದುಕೊಳ್ಳುತ್ತೀರಿ ಎನ್ನುವ ಮಾತನ್ನು ಈಗಲಾದರೂ ಕೂಡ ಹೇಳಬೇಕು. ಕೋಟ್ಯಾಂತರ ರೂಪಾಯಿಗಳಷ್ಟು ಹಣ ಲೂಟಿಯಾಗುತ್ತಿದ್ದರೆ ಅದನ್ನು ನೋಡಿಕೊಂಡು ಇರುವುದಕ್ಕಲ್ಲಾ ಈ ಸರ್ಕಾರ ಇರುವುದು. ಆದುದರಿಂದ ನಾನು ಈ ಬಗ್ಗೆ ತೀವ್ರವಾಗಿ ಆರೋಪವನ್ನು ಮಾಡಿ ಈ ತಪ್ಪಿತಸ್ಥ ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡತಕ್ಕಂತಹ ಕೆಲಸ ಈ ಸರ್ಕಾರದಿಂದ ಅದರಲ್ಲೂ ಮುಖ್ಯಮಂತ್ರಿಗಳಿಂದ ಆಗುತ್ತಿದೆ ಎಂದು ತೀವ್ರವಾದ ಆರೋಪವನ್ನು ನಾನು ಮಾಡುತ್ತಿದ್ದೇನೆ. ಇವತ್ತು ಈ ರೀತಿಯಾದಂತಹ ತಪ್ಪಿತಸ್ಥರ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದರೆ ಈ ಪೂರಕ ಬೇಡಿಕೆಗಳ ಅವಶ್ಯಕತೆ ಖಂಡಿತ ಇರಲಿಲ್ಲ. ಆಡಳಿತದಲ್ಲಿ ಹಿಡಿತ ಇಲ್ಲದೆ ಈ ರೀತಿ ಯದ್ವಾತದ್ವಾ ಲೂಟಿಯಾಗುತ್ತಿದ್ದರೂ ಕಣ್ಣುಮುಚ್ಚಿ ಕುಳಿತಿರುವ ಕಾರಣದಿಂದಾಗಿ ಇವತ್ತು ಪೂರಕ ಬೇಡಿಕೆಗಳನ್ನು ಈ ಸಭೆಯ ಮುಂದೆ ಇಡತಕ್ಕಂಥಹ ಪರಿಸ್ಥಿತಿಗೆ ಸರ್ಕಾರ ಬಂದಿದೆ. ಆದುದರಿಂದ ಇದನ್ನು ನಾನು ವಿರೋಧಿಸುತ್ತಾ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ.ರಾಮಯ್ಯ (ಕುಣಿಗಲ್)ಃ - ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾವು ಆಯವ್ಯಯದ ಬಗ್ಗೆ ಚರ್ಚೆ ಮಾಡಿ ಅದಕ್ಕೆ ಒಪ್ಪಿಗೆಯನ್ನು ಕೊಟ್ಟೆವು. ಇವತ್ತು ಬೆಳಿಗ್ಗೆನೇ 24 ಗಂಟೆಯ ಒಳಗಡೆ ಈ ಪೂರಕ ಅಂದಾಜನ್ನು ಈ ಸಭೆಯ ಮುಂದೆ ಇಟ್ಟಿರುವಂತಹ ಔಚಿತ್ಯ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ಈ ಪೂರಕ ಅಂದಾಜನ್ನು ಸರ್ಕಾರ ಸದನದ ಮುಂದೆ ತರುವುದಕ್ಕೆ ಯಾವಾಗ ಅವಕಾಶ ಇದೆ, ಯಾವ ಸಂದರ್ಭದಲ್ಲಿ ತರಬಹುದು ಎನ್ನುವುದರ ಬಗ್ಗೆ ನೋಡುವುದಕ್ಕೆ ನಾನು ಸಂವಿಧಾನದ ಪುಸ್ತಕವನ್ನು ತರಿಸಿದೆ. ಅದರಲ್ಲಿ 205ನೇ ಕಲಂನಲ್ಲಿ ಯಾವಾಗ ಇದನ್ನು ತರಬಹುದು ಎಂದು ಹೇಳುತ್ತಾರೆ. ನಮ್ಮ ಸಂಸದೀಯ ವ್ಯವಹಾರದ ಸಚಿವರು ನನಗೆ ಗೊತ್ತಿದ್ದ ಹಾಗೆ ಕಾನೂನು ತಜ್ಞರು. ನಾನು 18 ವರ್ಷಗಳ ಕಾಲ ಪ್ರಾಕ್ಟೀಸ್ ಮಾಡಿದ್ದೇನೆ. ಅವರು ನನಗಿಂತ ಜಾಸ್ತಿ ವರ್ಷ ಪ್ರಾಕ್ಟೀಸ್ ಮಾಡಿದ್ದಾರೆ. 205ರಲ್ಲಿ ಈ ಸರ್ಕಾರಕ್ಕೆ ಯಾವಾಗ ಪೂರಕ ಅಂದಾಜನ್ನು ತರುವುದಕ್ಕೆ ಸಾಧ್ಯ ಎನ್ನುವುದನ್ನು ಹೇಳಿದ್ದಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ ಃ- ಮಾನ್ಯ ಉಪಾಧ್ಯಕ್ಷರೇ 6 ತಿಂಗಳ ಕಾಲ ಖರ್ಚಿನ ವೆಚ್ಚದ ಬಗ್ಗೆ ಈ ಸಭೆಯ ಒಪ್ಪಿಗೆಯನ್ನು ಓಟ್ ಆನ್ ಅಕೌಂಟ್ ತೆಗೆದುಕೊಂಡು ಹಿಂದಿನ ಸಭೆಯಲ್ಲಿ ಒಪ್ಪಿಗೆಯಾಯಿತು. ಈ 6 ತಿಂಗಳ ಕಾಲದಲ್ಲಿ ಆಯವಯ್ಯದಲ್ಲಿ ನಿಗದಿ ಮಾಡಿದಕ್ಕಿಂತ

ಹೆಚ್ಚಿಗೆ ಖರ್ಚಾಗಿರುತ್ತದೆಯಲ್ಲ ಅದಕ್ಕೆ ಮಾತ್ರ ಪೂರಕ. ಇದು ಮುಂದಿನದಕ್ಕೆ ಅಲ್ಲ. ಇವತ್ತಿನವರೆಗೂ ಆಗಿರುವುದಕ್ಕೆ ಮಾತ್ರ ಇದು ಬಂದಿದೆ. ಆದುದರಿಂದ ಇದು ನಮ್ಮ ಆಯವ್ಯಯದ ಬೇಡಿಕೆಗಳ ಮೇಲೆ ಮಂಜೂರು ಆಗಿರುವುದಕ್ಕೂ ಇದಕ್ಕೂ ಸಂಬಂಧ ಇಲ್ಲ. ಹಿಂದಿನ 6 ತಿಂಗಳಿನ ಖರ್ಚಿನಲ್ಲಿ ಹೆಚ್ಚು ಖರ್ಚಾಗಿರುವುದಕ್ಕೆ ಮಾತ್ರ ಇದನ್ನು ತರುತ್ತಿದ್ದೇವೆ.

* ಶ್ರೀ ವೈ.ಕೆ. ರಾಮಯ್ಯ :- ನಾನು ಅದನ್ನೇ ಹೇಳುತ್ತಿದ್ದೇನೆ. ಯಾವಾಗ ನೀವು ಇದನ್ನು ತರಬಹುದು ಎಂಬುದನ್ನು ಹೇಳುತ್ತಿದ್ದೇನೆ. ಈ ಸರ್ಕಾರಕ್ಕೆ ಯಾವಾಗ ಪೂರಕ ಅಂದಾಜು ಇಡುವುದಕ್ಕೆ ಹಕ್ಕು ಇದೆ, ಅವಕಾಶ ಇದೆ ಎಂಬುದನ್ನು ಸಂವಿಧಾನದಲ್ಲಿ ಬರದೇ ಇಟ್ಟಿದ್ದಾರೆ. ನೀವು ಬೇಕುಬೇಕಾದ ಹಾಗೆ ಹುಡುಗಾಟ ಆಡುವುದಕ್ಕೆ ಆಗುವುದಿಲ್ಲ. ಬೇರೆಯದಕ್ಕೆಲ್ಲಾ ಸಂವಿಧಾನ ಬೇಕು, ಕಾನೂನು ಬೇಕು, ಆದರೆ ನಿಮ್ಮ ಆರ್ಥಿಕ ದಿವಾಳಿತನ ಮುಚ್ಚಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ಮಾತ್ರ ನಿಮಗೆ ಸಂವಿಧಾನ, ಕಾನೂನು ಕಟ್ಟಳೆ ಬೇಕಾಗಿಲ್ಲ. ಇಲ್ಲಿ ನೋಡಿ ಓದುತ್ತೇನೆ. ಏಕೆಂದರೆ ನನಗಿಂತ ಜಾಸ್ತಿ ನೀವು ಅನುಭವಸ್ಥರು.

"**Article 205** : Suplementary, additional or excess grants:-

(1) The Government Shall --

(a) if the amount authorised by any law made in accordance with the provisions of Article 204 to be expended for a particualr service for the current financial year is found to be insufficient for the purposes of that year or when a need has arisen during the current financial year for supplementary or additional expenditure upon some new service not contemplated in the annual financal statement (unquote - i.e., in the budget) for that year...."

ಅಂದರೆ ನೀವು ಯಾವಾಗ ಇದನ್ನು ತರಲಿಕ್ಕೆ ಸಂವಿಧಾನದ ಪ್ರಕಾರ ಅವಕಾಶ ಇದೆ ಎಂದರೆ ಟಿಪ್ಪಣಿ ಒಳಗೆ ನೀವೇ ಹೇಳಿದ್ದೀರಿ. ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡಿರತಕ್ಕಂತಹ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ನಿರೂಪಣೆಯಲ್ಲಿ ಹೇಳಿದ ಹೊಸ ಸೇವೆಗಾಗಿ ಪ್ರಸಕ್ತ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ಮಟ್ಟದ ಅವಶ್ಯಕತೆ ಉಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ಸದನದ ಮುಂದೆ ತರಬಹುದು. ಸ್ವಾಮಿ, ದಯಮಾಡಿ ಒಂದನ್ನು ತರಿಸಿಕೊಂಡು ನೋಡಿ. ಇದರಲ್ಲಿ ಯಾವ್ಯಾವುದು ನಿರೀಕ್ಷೆ ಮಾಡದೇ ಇರುವಂತಹ ಖರ್ಚು ಇದೆ, ಯಾವ್ಯಾವುದು ಹೊಸ ಸೇವೆಗಳಿಗೆ ಇದೆ ಎನ್ನುವುದನ್ನು ನನಗೆ ಹೇಳಬೇಕಾಗುತ್ತದೆ. ನಮ್ಮ ಪ್ರಶ್ನೆಗೆ ನೇರವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ನಾನು ಅವತ್ತಿನಿಂದ ನೋಡುತ್ತಿದ್ದೇನೆ, ನಾನು ಪ್ರಶ್ನೆ ಕೇಳಿದರೆ, ಈ ಸದನದಲ್ಲಿ ಮುಖ್ಯಮಂತ್ರಿಗಳು ನಾವು ಕೇಳಿದ ಪ್ರಶ್ನೆಯನ್ನು ಬಿಟ್ಟುಬಿಟ್ಟು

ಬಂಗಾರಪ್ಪನವರು ಅಲ್ಲೆಲ್ಲೋ ಭಾಷಣ ಮಾಡಿದ್ದಕ್ಕೆ ಉತ್ತರ ಕೊಡುವುದಕ್ಕೆ ಹೋಗುತ್ತಾರೆ. ನಾನು ಯೋಜನೆ ಬಗ್ಗೆ ಪ್ರಶ್ನೆಯನ್ನು ಕೇಳಿದರೆ, ನೀವು 58 ಪರ್‌ಸೆಂಟ್ ಜಾಸ್ತಿ ಮಾಡಿದ್ದೀರಿ ಯೋಜನೆ ವೆಚ್ಚವನ್ನು, ಅದೇ ರೀತಿ ಯಾವ ರೀತಿ ರಿಸೋರ್ಸಸ್ ಅನ್ನು ಆಗ್‌ಮೆಂಟ್ ಮಾಡುತ್ತೀರಿ ಎಂದು ಕೇಳಿದರೆ ಬಂಗಾರಪ್ಪನವರು ಯಾವುದೋ ಊರಿನಲ್ಲಿ ಭಾಷಣ ಮಾಡಿದರೆ ಇಲ್ಲಿ ಬಂದು ಅದಕ್ಕೆ ಉತ್ತರ ಕೊಡುತ್ತಾರೆ, ನನಗೆ ಅದು ಬೇಕಾಗಿಲ್ಲ, ನನಗೆ ಬೇಕಾಗಿರುವುದು ನನ್ನ ಪ್ರಶ್ನೆಗೆ ಉತ್ತರ. ಇಲ್ಲಿರುವಂಥ ಪಟ್ಟಿಯಲ್ಲಿ ನೀವು ಈಗ ಕ್ಲಾಸಿಫೈ ಮಾಡಿ ನನಗೆ ಹೇಳಬೇಕಾಗುತ್ತದೆ. ಯಾವ ಯಾವ ಖರ್ಚನ್ನು ನೀವು ನಿರೀಕ್ಷೆ ಮಾಡಿರಲಿಲ್ಲ which were not contemplated or anticipated. ಮತ್ತು ಎರಡನೆಯದು ಯಾವಯಾವುದು ಹೊಸ ಸೇವೆಗಳು ಎಂದು ನೀವೆ ಹೇಳಬೇಕಾಗುತ್ತದೆ. ನಾನು ಒಂದೆರಡನ್ನು ತಮಗೆ ಉದಾಹರಣೆ ಕೊಡುತ್ತೇನೆ, ನಂತರ ತಾವು ಹೇಳಿ, ಹೊಸಸೇವೆಯಲ್ಲಿ ಬರುತ್ತವೆಯೇ ಅಥವಾ not contemplated ಎಂದು. ಅಧ್ಯಕ್ಷರೇ, ಒಂದನೇ ಪುಟದಲ್ಲಿ, ಕೋಲಾರ ಜಿಲ್ಲೆಯ ರೈತರು ಆಂಧ್ರಪ್ರದೇಶದ ಯಾವುದೋ ಶೈತ್ಯಾಗಾರದಲ್ಲಿ ಆಲೂಗಡ್ಡೆಯನ್ನು ಶೇಕರಿಸಿಟ್ಟಿದ್ದರಂತೆ, ಅದು ಕೆಟ್ಟುಹೋಗಿದೆಯಂತೆ, ಆ ದುಡ್ಡನ್ನು ಕೊಡಲಿಕ್ಕೆ ಪೂರಕ ಅಂದಾಜಿನಲ್ಲಿ ನಾವು ಒಪ್ಪಿಗೆ ಕೊಡಬೇಕಾಗುತ್ತದೆ. ಸ್ವಾಮಿ, ನಮ್ಮ ಊರಿನಲ್ಲಿ ರೇಷ್ಮೆ ಗೂಡೆಲ್ಲಾ ಕೆಟ್ಟುಹೋಗಿದೆ, ಅದಕ್ಕೂ ಕೊಡುತ್ತೀರಾ? ಇಲ್ಲದಿದ್ದರೆ ಯಾರೋ ತೆಗೆದುಕೊಂಡು ಹೋಗಿ ಎಲ್ಲೋ ಆಲೂಗಡ್ಡೆ ಇಟ್ಟು ಯಾವುದೋ ಕಾರಣಕ್ಕಾಗಿ ನಾಶವಾಗಿರುವುದಕ್ಕೆ ಈ ಸರ್ಕಾರ ಪರಿಹಾರವನ್ನು ಕೊಡುವಂಥ ಒಂದು ಪರಿಸ್ಥಿತಿ ಸೃಷ್ಟಿಯಾಗಿದ್ದರೆ ಇದೇ ಪರಿಸ್ಥಿತಿ ಬೇರೆ ಕಡೆಯಲ್ಲಿಯೂ ಸೃಷ್ಟಿಯಾಗಬೇಕಾಗುತ್ತದೆ. ಅದಿಲ್ಲ ಎಂದರೆ ಯಾರದೋ ಮುಲಾಜಿಗಾಗಿ ಈ ಸರ್ಕಾರ ಇದನ್ನು ಕೊಡುತ್ತದೆ, ಅಥವಾ ಯಾರನ್ನೋ ಮೆಚ್ಚಿಸಲಿಕ್ಕಾಗಿ ಕೊಡುತ್ತದೆ. ಅಥವಾ ಅಲ್ಲಿ ಯಾರೋ ಒಬ್ಬ ಶಾಸಕ ಡಿಸಿಡೆಂಟ್ ಆಗಿರುವುದರಿಂದ ಅವರನ್ನು ಇವರ ಕಡೆ ಕರೆದುಕೊಳ್ಳುವುದಕ್ಕಾಗಿ ಕೊಡಬೇಕಾಗಿದೆ ಎಂದು ನಾನು ಭಾವಿಸಿಕೊಂಡರೆ ಅದು ತಪ್ಪಾಗಲಾರದು ಎಂಬುದು ನನ್ನ ಭಾವನೆ.

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಗೆ ಸಂಬಂಧಪಟ್ಟಿರತಕ್ಕ ವಿಚಾರವನ್ನು ಮಾನ್ಯ ರಾಮಯ್ಯನವರು ಪ್ರಸ್ತಾಪ ಮಾಡುತ್ತಿದ್ದಾರೆ ಮತ್ತು ನನ್ನ ಕ್ಷೇತ್ರದಲ್ಲಿರತಕ್ಕಂತ ಕೆಲವು ರೈತರ ಆಲೂಗಡ್ಡೆಯೂ ಸಹ ಕೊಳೆತು ಹೋಗಿದೆ, ಕೊಳೆತು ಹೋಗಿರತಕ್ಕಂತದ್ದು ನಿಜ, ಇದರಲ್ಲಿ ನಮ್ಮ ರೈತರಿಗೆ 1.50 ಕೋಟಿ ನಷ್ಟವಾಗಿದೆ. ಈ ಶೈತ್ಯಾಗಾರದ ಅವಕಾಶ ನಮ್ಮ ಜಿಲ್ಲೆಯಲ್ಲಿ ಇಲ್ಲದಿರುವ ಕಾರಣ ಪಕ್ಕದಲ್ಲಿರತಕ್ಕ ಪುಂಗನೂರಿನಲ್ಲಿ ಈ ಆಲೂಗಡ್ಡೆಯನ್ನು ಇಟ್ಟಿದ್ದಾರೆ. ಸ್ವಾಮಿ ಆಲೂಗಡ್ಡೆಯನ್ನು ಬೆಳೆಯಬೇಕಾದರೆ ರೈತ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಅಷ್ಟೇ ಅಲ್ಲ, ನಾವು ಬಿತ್ತನೆ ಆಲೂಗಡ್ಡೆಯನ್ನು ಪಂಜಾಬಿನಿಂದ ತರುವುದು. ಪಂಜಾಬಿನಲ್ಲಿರತಕ್ಕ ಈ ಭಯೋತ್ಪಾದಕರ ಗುಂಪನ್ನು ಮೆಟ್ಟಿ ಇವತ್ತು ನಾವು ಆಲೂಗಡ್ಡೆಯನ್ನು ತಂದು ಇವತ್ತಿನ ದಿವಸ ಬೆಳೆಸುತ್ತಾ ಇದ್ದೇವೆ. ಅಂತಹ

ಆಲೂಗಡ್ಡೆ ಇವತ್ತಿನ ದಿವಸ ಕೊಳೆತು ಹೋಗಿದೆ. ಕೊಳೆತುಹೋದಂತಹ ಪರಿಸ್ಥಿತಿಯಲ್ಲಿ ರೈತರು ಏನು ಮಾಡಬೇಕು? ನಾನಂತೂ ಇದನ್ನು ಸ್ವಾಗತ ಮಾಡುತ್ತೇನೆ, ಆದರೆ ನನ್ನ ವಿರೋಧ, ನನ್ನ ಅಕ್ಷೇಪ ಏನು ಎಂದರೆ ಇಲ್ಲಿಯವರೆಗೂ ಆ ರೈತರ ಕೈಗೆ ಹಣ ಈ ನಿಮಿಷದವರೆಗೂ ತಲುಪಿಲ್ಲ, ಸ್ವಲ್ಪ ಹಣ ಮಾತ್ರ ಬಿಡುಗಡೆಯಾಗಿದೆ, ಪೂರ್ತಿಯಾಗಿ ಹಣ ಬಿಡುಗಡೆಯಾಗಿಲ್ಲ, ಅದನ್ನು ತಾವು ಯಾವಾಗ ಬಿಡುಗಡೆ ಮಾಡುತ್ತೀರಿ? ಈಗ ರಾಮಯ್ಯನವರು ಅವರ ಬೇಡಿಕೆಯನ್ನು ಇಟ್ಟಿದ್ದಾರೆ. ಏನು ರೇಷ್ಮೆ ಗೂಡು ಹಾಳಾಗಿದೆ, ಅವರಿಗೂ ಕೊಡಿ, ಎಂದು ನಾನು ಅವರ ಪರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತ ಆಲೂಗಡ್ಡೆ ಬೆಳೆಯುವವನಾಗಿರಬಹುದು, ಅಥವಾ ರೇಷ್ಮೆ ಬೆಳೆಯತಕ್ಕ ರೈತ ಇರಬಹುದು, ರೈತರಿಗೆ ನಷ್ಟ ಆದಂತಹ ಸಂದರ್ಭದಲ್ಲಿ ಕೊಡಬೇಕು ಎಂದು ರಾಮಯ್ಯನವರ ಜೊತೆಗೆ ನಾನು ಸಹ ಒತ್ತಾಯ ಮಾಡುತ್ತೇನೆ ಎನ್ನುವ ಮಾತನ್ನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ.ಕೃಷ್ಣಪ್ಪ (ತೋಟಗಾರಿಕಾ ರಾಜ್ಯ ಸಚಿವರು) :- ಮಾನ್ಯ ಅಧ್ಯಕ್ಷರೇ, ನಮ್ಮ ಹಿರಿಯ ಸದಸ್ಯರು ಆಲೂಗಡ್ಡೆ ನಷ್ಟವಾದಂತ ರೈತರಿಗೆ ಹಣ ಕೊಡದಿದ್ದುದಕ್ಕೆ ಖೇದವನ್ನು ವ್ಯಕ್ತಮಾಡಿದ್ದಾರೆ. ಅದಕ್ಕೆ ಸರ್ಕಾರದಿಂದ ತಡೆಯಾಗಲಿಲ್ಲ, ಮಾನ್ಯ ಅಧ್ಯಕ್ಷರೇ, ಪಟ್ಟಿ ಮಾಡಲಿಕ್ಕೆ ಹೋದರೆ, ಬೋಗಸ್ ರೈತರು, ಟ್ರೇಡರ್ಸ್ ಎಲ್ಲಾ ಸೇರಿ 200 ಜನರ ಪಟ್ಟಿ ಕೊಡಲಿಕ್ಕೆ ಮುಂದೆ ಬಂದರು, ಸ್ಕ್ರೂಟನಿ ಮಾಡಿ ಎಂದು ಅಲ್ಲಿನ ಲೋಕಲ್ ಲೆಜಿಸ್‌ಲೇಟರ್‌ಗೆ ಹೇಳಿದ ಮೇಲೆ ಈಗ ಪಟ್ಟಿ ಅಂತಿಮವಾಗಿ ತಯಾರು ಆಗಿದೆ. ಮೊದಲನೆ ಕಂತು 20 ಲಕ್ಷ ರೂ ಕೊಟ್ಟಾಗ ಅದನ್ನು ಒಟ್ಟಿಗೆ ಕೊಡಬೇಕು ಎಂದು ಹೇಳಿದರು, ಮುಂದಿನವಾರ 17ನೇ ತಾರೀಖಿನ ಮೇಲೆ ವಿತರಣೆ ಮಾಡುತ್ತಿದ್ದೇವೆ ನಮ್ಮ ಕಡೆಯಿಂದ ತಡವಾಗಿಲ್ಲ. ಸರ್ಕಾರದಿಂದ 46 ಲಕ್ಷ ರೂ. ಅವತ್ತೇ ಕೊಡಲಿಕ್ಕೆ ತೀರ್ಮಾನ ಆಗಿತ್ತು. ನಾವು ತಯಾರಾಗಿಯೂ ಇದ್ದೆವು.

ಶ್ರೀ ಸಿ.ಬೈರೇಗೌಡ :- ಅದು ಸರಿಯಲ್ಲ. ನಿಮ್ಮ ಆರ್ಥಿಕ ಇಲಾಖೆಯಲ್ಲಿ ಇನ್ನೂ ಹಣ ಬಿಡುಗಡೆ ಆಗಿಲ್ಲ. ದಯವಿಟ್ಟು ತಾವು ಕಡತ ತರಿಸಿ ನೋಡಿ.

ಶ್ರೀ ಎ.ಕೃಷ್ಣಪ್ಪ :- 46 ಲಕ್ಷ ರೂಪಾಯಿಗಳಿಗೆ ಸರ್ಕಾರ ಬದ್ಧವಾಗಿತ್ತು. ಪಟ್ಟಿ ತಯಾರಿಸುವುದು ವಿಳಂಬವಾಯಿತು, ಈಗ ದುಡ್ಡು ವಿಳಂಬವಾಗಿದೆ. ಮುಂದೆ ಕೊಡುತ್ತೇವೆ.

ಶ್ರೀ ಸಿ.ಬೈರೇಗೌಡ :- ಪಟ್ಟಿ ತಯಾರಾಗಿದೆ. ಪಟ್ಟಿಗೆ ಎಲ್ಲರ ಒಪ್ಪಿಗೆಯಾಗಿದೆ. ನೀವು ಇಲ್ಲದೆ ಇರತಕ್ಕದ್ದು ಹೇಳಬೇಡಿ. ಹಣ ಕೊಡುವುದರಲ್ಲಿ ನಿಧಾನ ಮಾಡುತ್ತಿದ್ದೀರಿ.

ಶ್ರೀ ಎ.ಕೃಷ್ಣಪ್ಪ :- ತಡ ಯಾವಾಗ ಆಗಿದೆ? ಪಟ್ಟಿ ಯಾವತ್ತು ಕೊಟ್ಟದ್ದು? ಇನ್ಸ್‌ಪೆಕ್ಷನ ಮಾಡಿದ್ದು ಯಾವಾಗ? ಎಂದು ತಿಂಗಳು ಆದಮೇಲೆ ಪಟ್ಟಿ ಬರೆಸಿರುವುದು. ಈ ಮಾತು ಸೇರಿಸಿ ಹೇಳಿ.

ಛೇರ್ಮನ್ :- ಬೇಗನೆ ಬಟವಾಡೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ವೈ.ಕೆ.ರಾಮಯ್ಯ :- ಈ ವಿಷಯದಲ್ಲಿ ನನ್ನ ನಿಲುವನ್ನು ಸ್ಪಷ್ಟ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೋಲಾರದ ರೈತರಿಗೆ ಬೆಳೆ ನಾಶವಾದುದಕ್ಕೆ ಪರಿಹಾರ ಕೊಟ್ಟಿದ್ದಕ್ಕೆ ನನ್ನ ವಿರೋಧ ಇಲ್ಲ. ನನ್ನ ಪ್ರಾರ್ಥನೆ ಇಷ್ಟೇ, ಈ ತತ್ವವನ್ನು ಈ ನೀತಿಯನ್ನು ಅಲ್ಲಿಗೆ ಸೀಮಿತಗೊಳಿಸಬೇಡಿ. ಇದನ್ನು ಇತರ ಅಗ್ರಿಕಲ್ಚರಲ್ ಕಮಾಡಿಟೀಸ್‌ಗಳಿಗೂ ವಿಸ್ತರಿಸಿ. ಆಗ ನಾನು ಕೂಡ ಬೈರೇಗೌಡ ಜೊತೆಯಲ್ಲಿ ಇರುತ್ತೇನೆ. ಆಮೇಲೆ ಹತ್ತನೇ ಪುಟದಲ್ಲಿ ಮತ್ತೊಂದು ಪೂರಕ ಅಂದಾಜನ್ನು ಪ್ರಾಥಮಿಕ ಶಾಲೆಗಳ ರಿಪೇರಿ ಆಗಬೇಕೆಂದು ತಂದಿದ್ದಾರೆ. ಸ್ಥಳೀಯ ಅಧಿಕಾರಿಗಳಿಗೆ ನಾವು ಪ್ರತಿ ವರ್ಷ ತಾಲ್ಲೂಕು ಸಮಿತಿಯಲ್ಲಿ ಪಟ್ಟಿ ಮಾಡಿ ಕಳುಹಿಸುತ್ತಿರುತ್ತೇವೆ. ಅವು ದುಡ್ಡಿಲ್ಲವೆಂದು ವಾಪಸ್ಸು ಬರುತ್ತಿರುತ್ತವೆ. Have you not anticipated this expenditure? Have you not contemplated this expenditure? ಕೇಳಿ ಸ್ವಾಮಿ, ಯಾವ ಶಾಸಕರ ಕ್ಷೇತ್ರದಲ್ಲಿ ಶಾಲೆ ರಿಪೇರಿ ಮಾಡುವುದಕ್ಕೆ? ದುಡ್ಡು ಬೇಕಾಗಿಲ್ಲ? ಏನು ಮಾಡುತ್ತಿದ್ದಾರೆ ನಿಮ್ಮ ಅಧಿಕಾರಿಗಳು? why should you bring this in supplementary budget?

ಈ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳನ್ನು ದುರಿಸ್ತಿ ಮಾಡಿಸಬೇಕೆಂಬ ವಿಷಯಕ್ಕೆ ಇದು ವಿಶಿಷ್ಟ ಸೇವೆ ಏನು? ಹೇಳಿ ಸ್ವಾಮಿ, ಇದು ವಿಶಿಷ್ಟ ಸೇವೆಯಲ್ಲಿ ಬರುತ್ತದೆಯೇ? ಹೋಗಲಿ, ಇದು ಅನಿರೀಕ್ಷಿತವೇನು? ಅದಕ್ಕೆ ನಾನು ಹೇಳುತ್ತಿರುವುದು, ನೀವು ತಂದಿರುವ ಬೇಡಿಕೆಗಳಲ್ಲಿ ನೂರಕ್ಕೆ ಒಂದೆರಡು ಬಿಟ್ಟು ಉಳಿದವೆಲ್ಲಾ ಅನಿರೀಕ್ಷಿತ ಅಲ್ಲ, ಹೊಸ ಸೇವೆ ಅಲ್ಲ. ನಿಮ್ಮ ಆರ್ಥಿಕ ಸ್ಥಿತಿಯ ವ್ಯವಸ್ಥೆಯನ್ನು ನಿರ್ವಹಣೆ ಮಾಡುವ ರೀತಿಯಲ್ಲಿ ನೀವು ಸೋತಿದ್ದೀರಿ. ಅದಕ್ಕಾಗಿ ಈ ಗೊಂದಲ. ಬಜೆಟ್ಟಿನಲ್ಲಿ ಯಾವುದು ಸೇರಿಸಬೇಕೆಂಬುದರ ಬಗ್ಗೆ ನಿಮಗೆ ಗಮನ ಇಲ್ಲ, ಬಜೆಟ್ಟಿನಲ್ಲಿ ಯಾವುದು ಬಿಡಬೇಕೆಂಬುದರ ಬಗ್ಗೆ, ಯಾವುದಕ್ಕೆ ಅದ್ಯತೆ ಕೊಡಬೇಕೆಂಬುದರ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಅದಕ್ಕಾಗಿ ಗೊಂದಲವನ್ನು ಸೃಷ್ಟಿ ಮಾಡಿ ಯಾವುದನ್ನೋ ಯಾವುದಕ್ಕೆ ಇಡಬೇಕಾದುದನ್ನು ತಂದು ನಮ್ಮ ಮುಂದೆ ಇಡುತ್ತಿದ್ದೀರಿ. ಅದೇ ರೀತಿ ಮೈಸೂರಿನ ವಸ್ತು ಪ್ರದರ್ಶನಕ್ಕೆ ಪ್ರತಿ ವರ್ಷ ದುಡ್ಡು ಕೊಡುತ್ತಿರಲಿಲ್ಲವೇ? ಪ್ರತಿ ವರ್ಷ ವಸ್ತು ಪ್ರದರ್ಶನಕ್ಕೆ ದುಡ್ಡು ಕೊಡಬೇಕೆಂದು ನಿಮಗೆ ಗೊತ್ತಿಲ್ಲವೇ? ಟಿಪ್ಪುಸುಲ್ತಾನ ಶತಮಾನೋತ್ಸವ ಮಾಡಬೇಕೆಂದು ಎರಡು ವರ್ಷದಿಂದ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ನಿಮ್ಮ ಅಧಿಕಾರಿಗಳು ಅದನ್ನು ಅಯವ್ಯಯದಲ್ಲಿ ಸೇರಿಸದೆ? ಏನು ಮಾಡುತ್ತಿದ್ದರು ದಸರಾ ಉತ್ಸವ ವನ್ನು ಪ್ರತಿ ವರ್ಷ ಮಾಡುತ್ತೀರಿ, ಪ್ರತಿ ವರ್ಷ ಖರ್ಚು ಮಾಡುತ್ತೀರಿ. ಏತಕ್ಕೆ ಇದನ್ನು ಆಯವ್ಯಯದಲ್ಲಿ ಸೇರಿಸಲಿಲ್ಲ? ಇದಕ್ಕೆ ಉತ್ತರ ಬೇಕಾಗುತ್ತದೆ. ಅದೇ ರೀತಿ ನಾನು ಕೆಲವನ್ನು ಮಾತ್ರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಅನೇಕ ಐಟಂಗಳು ಆಯವ್ಯಯದಲ್ಲಿ ಇರಬೇಕಾದವು ಇಲ್ಲದಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ರಾಜ್ಯದಲ್ಲಿ ಆರ್ಥಿಕ ಇಲಾಖೆ ಎಂಬುದು ಇದೆಯೇ? ಆರ್ಥಿಕ ಇಲಾಖೆ ಇದ್ದರೆ ಈ ರೀತಿ ಆಗುತ್ತಿರಲಿಲ್ಲ. ರಾಮಸ್ವಾಮಿಯವರೇ ತಾವು ಕೇಳಬೇಕು, ಇಲ್ಲದಿದ್ದರೆ ನಾನು ಕುಳಿತುಕೊಳ್ಳುತ್ತೇನೆ. ಕಿವುಡರ

ಮುಂದೆ ಕಿನ್ನರಿ ಭಾರಿಸುವುದಕ್ಕೆ ನನಗೆ ಇಷ್ಟವಿಲ್ಲ. If nobody wants to hear me, I won't talk.

ಶ್ರೀ ಹಾರ್ನಳ್ಳಿ ರಾಮಸ್ವಾಮಿ :- ನೀವು ಹೇಳಿದ್ದನ್ನು ನಾನು ನೋಟ್ ಮಾಡಿ ಕೊಳ್ಳುತ್ತಿದ್ದೇನೆ.

ಶ್ರೀ ವೈ.ಕೆ ರಾಮಯ್ಯ :- ಅಯವ್ಯಯದ 34ನೇ ಪುಟವನ್ನು ನೋಡಿದರೆ ರಾಜ್ಯದಲ್ಲಿ ಆರ್ಥಿಕ ಇಲಾಖೆ ಕೆಲಸ ಮಾಡುತ್ತಿದೆಯೇ ಎಂಬ ಅನುಮಾನ ನನಗೆ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅಯವ್ಯಯ ಭಾಷಣದಲ್ಲಿ ಹೇಳಿದ್ದಾರೆ, ಈ ರಾಜ್ಯದಲ್ಲಿ ನಾವು ಸಾಲ ಮಾಡಿರತಕ್ಕದ್ದಕ್ಕೆ ಬಡ್ಡಿ ತರುವುದಕ್ಕೆ ಎಷ್ಟು ಹಣವನ್ನು ಕಳೆದಿದ್ದೇವೆಂದರೆ ನನಗೆ ಜ್ಞಾಪಕ ಇದ್ದ ಹಾಗೆ ಮುಂದಕ್ಕೆ ಏನು ಹೇಳುತ್ತಾರೆಂದರೆ, ಬಡ್ಡಿ ಕಳೆದು, ಸಾದಿಲ್ವಾರು ಕಳೆದು, ಯೋಜನೇತರ ವೆಚ್ಚಗಳನ್ನು ಕಳೆದು ಅಭಿವೃದ್ಧಿ ಕೆಲಸಗಳಿಗೆ ಉಳಿಯತಕ್ಕದ್ದು ಅತಿ ಕಡಿಮೆ ಹಣ ಎಂದು. ಇದು ಅವರು ಉಪಯೋಗಿಸಿರತಕ್ಕ ಪದ ತಮ್ಮ ಆಯವ್ಯಯ ಭಾಷಣದಲ್ಲಿ. ಈ 25 ಕೋಟಿ ರೂಪಾಯಿಗಳನ್ನು ಏತಕ್ಕೆ ಸೇರಿಸಲಿಲ್ಲ? ಇದು ನಿನ್ನೆ ದಿನ ಸಾಲ ಮಾಡಿದಿರಾ? ಮೊನ್ನೆ ದಿನ ಮಾಡಿದಿರಾ? ನಿನ್ನೆ ಮೊನ್ನೆ ಮಾಡಿದ್ದರೂ ಬಜೆಟ್ಟಿನಲ್ಲಿ ಬರಬೇಕಾಗಿತ್ತು. ಇವತ್ತು ಬೆಳಿಗ್ಗೆ ಸಾಲ ಮಾಡಿದ್ದೀರಾ? ಇವತು ಬೆಳಿಗ್ಗೆ ಸಾಲ ಮಾಡಿದ್ದಕ್ಕೆ ಬಡ್ಡಿ ಕೊಡುತ್ತೇವೆಂದು ತಂದಿದ್ದರೆ ನಾನು ಒಪ್ಪುತ್ತಿದ್ದೆ. 25 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಹಣವನ್ನು ಬಡ್ಡಿ ರೂಪದಲ್ಲಿ ಕೊಡಬೇಕೆಂಬುದು ನಿಮ್ಮ ಆರ್ಥಿಕ ಇಲಾಖೆಯ ಮುಂದೆ ಇತ್ತೇ ಇಲ್ಲವೇ? ಇದ್ದಿದ್ದ ಪಕ್ಷದಲ್ಲಿ ನಿಮ್ಮ ಆರ್ಥಿಕ ಇಲಾಖೆ ಸತ್ತಿತ್ತೇ, ಪ್ರಜ್ಞೆ ಇರಲಿಲ್ಲವೇ? ಏನು ಹೇಳಬೇಕು ಇದಕ್ಕೆ? shall I say that this shows the foolishness of the Finance Department? Shall I say that this shows the irresponsibility of the Finance Department or the ignorance of the Finance Department, or shall I have to say that this government has no control over the Finance Department?

ಮಂತ್ರಿಯಾದವರು, ಮುಖ್ಯ ಮಂತ್ರಿಯಾದವರು ತನ್ನ ಇಲಾಖೆಯಲ್ಲಿ ಏನು ನಡೆಯುತ್ತಿದೆ ಏನು ನಡೆಯುತ್ತಿಲ್ಲ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡದಿದ್ದರೆ ಈ ಅವ್ಯವಸ್ಥೆ ನಡೆಯುತ್ತದೆ. ಬೆಳಗ್ಗೆ ಎದ್ದರೆ ಆ ಡಿಸಿಡೆಂಟ್ ಅನ್ನು ಇಲ್ಲಿಗೆ ಕರೆದುಕೊಂಡು ಬಾ, ಈ ಡಿಸಿಡೆಂಟ್ ಅನ್ನು ಇಲ್ಲಿಗೆ ಕರೆದುಕೊಂಡು ಬಾ, ಬೆಳಿಗೆ ಎದ್ದು ಸಲಾಂ ಹೊಡೆಯುವುದಕ್ಕೆ ಡೆಲ್ಲಿಗೆ ಹೋಗು, ಹೀಗಾಗಿ ಅವರಿಗೆ ಸಮಯವೇ ಇಲ್ಲ. ಈ 25 ಕೋಟಿ ರೂಪಾಯಿಗಳ ಸಾಲದ ಬಡ್ಡಿ ಕೊಡುವ ವಿಷಯವನ್ನು ನೀವು ಅಂದಾಜಿನಲ್ಲಿ ಸೇರಿಸದೆ ಪೂರಕ ಅಂದಾಜಿನಲ್ಲಿ ತರುವ ಅವ್ಯವಸ್ಥೆ ನೋಡಿದರೆ ಖೇದವಾಗುತ್ತದೆ. ಹೀಗಿದ್ದರೂ ಆರ್ಥಿಕ ಪರಿಸ್ಥಿತಿ ಸ್ಥಿರವಾಗಿದೆ ಎಂದು ನಿನ್ನೆ ಮುಖ್ಯ ಮಂತ್ರಿಗಳ ವೀರಾವೇಶದ ಭಾಷಣ. ಇವರಿಗೆ ಸಿಎಂಐ ಮೊದಲ್ಗೊಂಡು ಸರ್ಟಿಫಿಕೇಟ್ ಕೊಟ್ಟಿದ್ದಾರಂತೆ. 25 ಕೋಟಿ ರೂಪಾಯಿಗಳನ್ನು ರೆಗ್ಯುಲರ್ ಬಜೆಟ್ಟಿನಲ್ಲಿ ಎತಕ್ಕೆ ಸೇರಿಸಲಿಲ್ಲ?

ಅದರಲ್ಲೇ ನೀವು ತರಬೇಕಾಗಿತ್ತು. ಹಾಲು ಉತ್ಪಾದಕರ ಸಂಗಕ್ಕೆ ಹಣ ಕೊಡುವಂಥ ಒಂದು ವಿಚಾರವನ್ನು ಇದರಲ್ಲಿ ಸೇರಿಸಿದ್ದಾರೆ. ಹಾಲು ಉತ್ಪಾದಕರ ಸಂಘಗಳು ನಡೆಯುವ ರೀತಿ, ಅಲ್ಲಿನ ಅಡಳಿತ ಸರಿ ಮಾಡಿ ಅವು ನಷ್ಟವಾಗದಂತಹ ರೀತಿಯಲ್ಲಿ ಸರ್ಕಾರ ನೋಡಿಕೊಳ್ಳಬೇಕಾದುದು ಸರ್ಕಾರದ ಜವಾಬ್ದಾರಿ. ಅದನ್ನು ಇವರು ಮಾಡುವುದಿಲ್ಲ. ಅದು ಬಿಟ್ಟು ಹಾಲು ಉತ್ಪಾದಕರ ಸಂಘಗಳಲ್ಲಿ ಆದಂಥ ನಷ್ಟವನ್ನು ಇವರು ಕಟ್ಟಿಕೊಡುವುದಕ್ಕೆ 200 ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಅದು ಬೇಕಾಗಿಲ್ಲ. ಆದರೆ ಆಡಳಿತದ ಹಿಡಿತ ಇಲ್ಲದೆ ಭ್ರಷ್ಟಾಚಾರದಿಂದ, ಅದಕ್ಷತೆಯಿಂದ, ಅವ್ಯವಹಾರಗಳಿಂದ ಆಸಂಸ್ಥೆ ನಷ್ಟಪಟ್ಟರೆ ಅದನ್ನು ಸರ್ಕಾರ ತುಂಬಿಕೊಡುವುದಕ್ಕೆ ಇವತ್ತು ಮುಂದೆ ಬರುತ್ತಿದೆ. ನಾನು ಮತ್ತೆ ಇದನ್ನು ಹೇಳಬೇಕಾಗುತ್ತದೆ : ಏನೆಂದರೆ, ಸಾರ್ವತ್ರಿಕವಾಗಿ ಒಂದು ನಿಯಮ ಮಾಡಬೇಕಾಗುತ್ತದೆ. ಯಾವ ಯಾವ ಸಾರ್ವಜನಿಕ ಸಂಸ್ಥೆಗಳು, ಕಾರ್ಪೊರೇಟ್ ಬಾಡೀಸ್ ಎಂದು ಕರೆಯುತ್ತಾರೆ ಅವು ಯಾವುವು ನಷ್ಟ ಹೊಂದುತ್ತವೆ ಅವೆಲ್ಲ ದರ ನಷ್ಟವನ್ನು ತುಂಬಿಕೊಡುವ ನೀತಿಯನ್ನು ಮುಂದುವರಿಸಿ ಕೊಂಡುಹೋಗಬೇಕಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಒಕ್ಕೂಟ ಇವೇ ನಮ್ಮ ಸ್ನೇಹಿತರಾದ ಶ್ರೀ ಮಾಧು ಸ್ವಾಮಿಯವರು ಅದರಲ್ಲಿ ಬಹಳ ಪರಿಣಿತರು. ಅವರಿಗೆ ಅದರ ಉದ್ದ ಆಳ ಎಲ್ಲಾ ಗೊತ್ತು. ಅವರು ಬಹಳ ಚೆನ್ನಾಗಿ ನಡೆಸಿಕೊಂಡು ಹೋದರು. ಅದಾದಮೇಲೆ ಬೇರೆ ಒಬ್ಬರು ಅಧ್ಯಕ್ಷರನ್ನು ನೇಮಕ ಮಾಡಿದರು. ಎತಕ್ಕೆ ಈ ಸಂಸ್ಥೆಗಳಲ್ಲಿ ನಷ್ಟವಾಗುತ್ತಿದೆ ಎಂದು ಸ್ವಲ್ಪ ಕಣ್ತೆರೆದು ನೋಡಿ. ಒಬ್ಬರು ಅಧ್ಯಕ್ಷರನ್ನು ಮಾಡಿದರು. ಆ ಅಧ್ಯಕ್ಷರ ಹಿನ್ನೆಲೆ ಏನು ಗೊತ್ತೇ? ಅವರು ಊರಿನಲ್ಲಿರುವ ಹಾಲು ಉತ್ಪಾದಕರ ಸಂಘಕ್ಕೆ ಅಧ್ಯಕ್ಷರಾಗಿದ್ದರು. 1200 ರೂಪಾಯಿನ ಚೆಕ್ ಅನ್ನು 12,000 ರೂಪಾಯಿ ಎಂದು ತಿದ್ದಿ ದುಡ್ಡು ಡ್ರಾ ಮಾಡಿಕೊಂಡರು. ಪೊಲೀಸರ ಮುಂದೆ ಹೋಯಿತು. ನಾನೇ ಬರೆದೆ ಪೊಲೀಸರಿಗೆ. ಆದರೆ ಅವರು ಆಡಳಿತ ಪಕ್ಷದವರು ತಾನೇ. ಆಡಳಿತ ಪಕ್ಷದವರು ಕೂನಿ ಮಾಡಿದ್ದಾರೆಂದರೂ ನೀವು ಅರೆಸ್ಟ್ ಮಾಡುವುದಿಲ್ಲ. ವೈಕೆ. ರಾಮಯ್ಯ ಅಲ್ಲಿ ಯಾರನ್ನೋ ಬೈದ ಎಂದು ಸೆಕ್ಷನ್ 502 ರಲ್ಲಿ ಕೇಸ್ ಹಾಕಿ ಅರೆಸ್ಟ್ ಮಾಡುತ್ತೀರಿ. ನಿಮ್ಮ ಪಕ್ಷದವರು 1200 ರೂಪಾಯಿ ಚೆಕ್ಕನ್ನು 12 ಸಾವಿರ ಎಂದು ಮಾಡಿದರೆ ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಅವರು ಏನು ಮಾಡಿದರು ಗೊತ್ತೇ? ಆ ಕೇಸ್ ಇನ್ನೇನು ಹಾಕುತ್ತಾರೆ ಎನ್ನುವಾಗ ಅಸಿಸ್ಟೆಂಟ್ ರಿಜಿಸ್ಟ್ರಾರ ಆಫೀಸಿಗೆ ಹೋಗಿ (ದೊಡ್ಡವರು ತಾನೇ ಅಧ್ಯಕ್ಷರು) ಸ್ವಲ್ಪ ಫೈಲ್ ಕೊಡಿ ಸರ್ ಎಂದರು. ಆ ಫೈಲನ್ನು ತೆಗೆದುಕೊಂಡು ನೋಡುತ್ತಿದ್ದ ಹಾಗೆ ಆ ಚೆಕ್ಕನ್ನು ಬಾಯಿಗೆ ಹಾಕಿಕೊಂಡು ನುಂಗಿದರು. I am not telling a story. I am narrating the facts. ಬೇಕಾದರೆ ನೀವು ಆ ಕಡತವನ್ನು ತರಿಸಿ ನೋಡಿ. ತುಮಕೂರು ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷರು ಯಾರಿದ್ದಾರೆ, ಅವರ ಹೆಸರು ಹೇಳುವುದು ಬೇಡ, ಏಕೆಂದರೆ ಅವರು ಈ ಸದನದ ಸದಸ್ಯರಲ್ಲ. ಅಷ್ಟಾದರೂ ನಿಮಗೆ ಗೊತ್ತಿರಬೇಕಾಗುತ್ತದೆ. ನಾನು ಹೇಳಿದ್ದು ಸರಿ ಇದೆಯೋ ಇಲ್ಲವೋ ಎಂದು ಫೈಲ್ ತರಿಸಿನೋಡಿ. ಆ ಚೆಕ್ಕನ್ನು ನುಂಗಿಬಿಟ್ಟರು. ಈ ಒಂದು ಅಪರಾಧಕ್ಕೆ, ಇವರ ನಡವಳಿಕೆಗೆ ಈ ರಾಜ್ಯದಲ್ಲಿ ಸಿಕ್ಕಿದಂಥ ಶಿಕ್ಷೆ ಏನು ಗೊತ್ತಾ? ಯಾರು ಹಳ್ಳಿಯ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿದ್ದರೋ

ಆ ಮಹನೀಯರನ್ನು ತೆಗೆದುಕೊಂಡು ಬಂದು ತುಮಕೂರು ಜಿಲ್ಲೆಯ ಹಾಲು ಒಕ್ಕೂಟದ ಅಧ್ಯಕ್ಷರನ್ನಾಗಿ ಕೂರಿಸಿದರು. ಶಿಕ್ಷೆ ಅಲ್ಲ, ಬಹುಮಾನ ಅವರಿಗೆ. ಅವರ ಕಾಲದಲ್ಲಿ ನಷ್ಟ ಆದರೆ ಇಂಥ ವ್ಯಕ್ತಿಗಳನ್ನು ತೆಗೆದುಕೊಂಡುಬಂದು ಕೂರಿಸಿ ನಷ್ಟ ಆದರೆ ಆ ದುಡ್ಡನ್ನು ಕಟ್ಟಿಕೊಳ್ಳುವುದಕ್ಕೆ ಇದರಲ್ಲಿ ತರುತ್ತೀರಿ. 200 ಲಕ್ಷ ರೂಪಾಯಿಗಳನ್ನು ನಾವು ಇದಕ್ಕೆ ಕೊಟ್ಟಿದ್ದೇವೆ. ಬ್ಯಾಂಕ್ ನುಂಗಿದ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಮಾಡಿ ಅವರು ಅವ್ಯವಹಾರ ಮಾಡಿ ನಷ್ಟ ಅನುಭವಿಸಿದರೆ ಆ ನಷ್ಟವನ್ನು ತುಂಬಿಕೊಡುವುದು ಯಾವುದರಲ್ಲಿ ಬರುತ್ತದೆ ಸ್ವಾಮಿ? ಸಂಸದೀಯ ಸಚಿವರೇ, ಇದು ಹೊಸ ಸೇವೇನಾ? ಇದೇನು ಸೇವೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆದ್ದರಿಂದ ನನ್ನ ಮೊದಲ ತಕರಾರು ಸನ್ಮಾನ್ಯ ಅಧ್ಯಕ್ಷರೇ ಈ ಪೂರಕ ಅಂದಾಜನ್ನು ತರುವುದಕ್ಕೆ ಸಂವಿಧಾನದಲ್ಲಿ ಈ ಸರ್ಕಾರಕ್ಕೆ ಎನು ಅವಕಾಶ ಇದೆಯೋ, ಆ ಅವಕಾಶವನ್ನು ಈ ಸರ್ಕಾರ ದುರುಪಯೋಗ ಮಾಡಿಕೊಂಡಿದೆ. ಎರಡೇ ಎರಡು ಸಂದರ್ಭಗಳಲ್ಲಿ ಅವರು ಇಂತಹದ್ದನ್ನು ತರಬಹುದು. ಅದನ್ನು ಮಾಡಲ್ಲಿಲ್ಲ. ಇದು ಒಂದು ಕಾರಣ. ಎರಡನೇ ಕಾರಣ, ನಾನು ಅತ್ಯಂತ ಕಟುವಾಗಿ ಹೇಳಬೇಕಾಗುತ್ತದೆ, ಏನೆಂದರೆ, ಇತ್ತೀಚಿನ ವರ್ಷಗಳಲ್ಲಿ ಈ ರಾಜ್ಯದಲ್ಲಿ ನಿರ್ಮಾಣವಾಗಿರುವಂಥ ಆರ್ಥಿಕ ಅವ್ಯವಸ್ಥೆ. ಇದು ಬಹಳ ಪ್ರಮುಖವಾದುದು. ಈ ಆರ್ಥಿಕ ಅವ್ಯವಸ್ಥೆಯ ಫಲವಾಗಿ ಯಾವತ್ತೂ ಇಲ್ಲದಿರುವ ಇಂಥ ಸವಾಳಿಕೆಗಳು ನಮ್ಮ ಮುಂದೆ ಬರುತ್ತಿವೆ. ನಿನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ವಾದ ಮಾಡಿದರು. ಪಾಪ, ಅವರು ಲಾಯರ್ ಆಗಿದ್ದವರು ತಾನೇ? But the case was very bad. ರಾಮಸ್ವಾಮಿಯವರೇ, ನಿಮಗೆ ಗೊತ್ತಿದೆ, ಅವರು ಬಹಳ ಸಾರಿ ಟೇಬಲ್ ಕುಟ್ಟಿದರು. The argument was very good but the case was very bad. When you have a law, you hit the law, when you have the fact you hit the fact; but when you don't have the both you hit the table.

ಹಾಗಾಯಿತು ಅವರ ಪರಿಸ್ಥಿತಿ. ನಾನು ಅವರನ್ನು ಕೇಳಿದೆ. ಸ್ವಾಮಿ ನೀವು ಒಂದೇ ಒಂದು ವರ್ಷದಲ್ಲಿ ಈ ರಾಷ್ಟ್ರದಲ್ಲಿ ಮಾಡದಂಥ ಒಂದು ದೊಡ್ಡ ಸಾಧನೆ ಮಾಡಿದ್ದೀರಿ. ಅದು ಯಾವುದೆಂದರೆ ಕಳೆದ ವರ್ಷದ ಪ್ಲಾನ್ ಇತ್ತಲ್ಲ, ಅದರ ಹೆಚ್ಚಳವನ್ನು ಶೇಕಡ 58 ಜಾಸ್ತಿ ಮಾಡಿದ್ದೀರಿ. ಯೋಜನಾ ವೆಚ್ಚವನ್ನು 58 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಬಹಳ ಸಂತೋಷ. ಇದು ನಮಗೆ ರಾಜಕಾರಣಿಗಳಿಗೆ ಎಲ್ಲರಿಗೂ ಇರತಕ್ಕ ಹುಚ್ಚು. ನಾವು ಅದು ಮಾಡಿದೆವು ಇದು ಮಾಡಿದೆವು ಅವರಿಗಿಂತ ಚೆನ್ನಾಗಿ ಮಾಡಿದೆವು ಎಂದು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ ಅದೇ ಸಂದರ್ಭದಲ್ಲಿ ಮೊಯಿಲಿ ಸಾಹೇಬರು ವಾದ ಮಾಡುವಾಗ ಎಲ್ಲಿ ತಪ್ಪಿದರು ಎಂದರೆ ಯಾವಯಾವ ಇಲಾಖೆಯಲ್ಲಿ ಎಷ್ಟು ರಿಸೋರ್ಸಸ್ ಮೊಬಲೈಸೇಷನ್ ಕಳೆದ ವರ್ಷ ಜಾಸ್ತಿಯಾಗಿದೆ ಎಂಬ ಪಟ್ಟಿಯನ್ನು ಕೊಟ್ಟರು. ಎಕ್ಸೈಜ್‌ನಲ್ಲಿ 24 ಪರ್ಸೆಂಟ್ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ 20 ಪರ್ಸೆಂಟ್. ರಾಮಸ್ವಾಮಿಯವರೇ, ನಾನು ನೇರವಾಗಿ ನಿಮ್ಮ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳುತ್ತೇನೆ. When you have increased the plan size by 58% is it not your duty to augment the resources to the extent of 58%? ಇದಕ್ಕೆ

ಉತ್ತರ ಕೊಡಿ ಎಂದರೆ ಬಂಗಾರಪ್ಪನವರ ಭಾಷಣಕ್ಕೆ ನಿಮ್ಮ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ ನಾನೇನು ಹೇಳಲಿ? ಬಹಳ ಸರಳವಾದ ಪ್ರಶ್ನೆ. ರಾಜ್ಯದ ಯೋಜನಾ ವೆಚ್ಚದ ಗಾತ್ರವನ್ನು ಶೇಕಡ 58ರಷ್ಟು ಜಾಸ್ತಿ ಮಾಡಿದ್ದೀರಿ. ಆದರೆ ಯಾವುದಾದರೂ ರೀತಿಯಲ್ಲಿ ನಿಮ್ಮ ಸಂಪನ್ಮೂಲದ ಕ್ರೋಢೀಕರಣ 58 ಪರ್ಸೆಂಟ್ ಜಾಸ್ತಿಯಾಗಿದೆಯೇ? Corresponding to your increase is there any mobilisation of resources to the extent of 58%?

ಅದು ಆಗಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಆಗಿಲ್ಲ ಎಂದು ನೀವು ಒಪ್ಪಿಕೊಂಡಿದ್ದೀರಿ. ಆ ಒಂದು ಹುಚ್ಚುತನ ಇದೆಯಲ್ಲಾ ಸರ್ಕಾರ ಮಾಡಿದಂಥ ದಡ್ಡತನ ಇದೆಯಲ್ಲಾ, ಏನೋ ಮಾಡಿದ್ದೇವೆ ಎಂಬ ಭ್ರಮಾಲೋಕದಲ್ಲಿ ಬದುಕುವುದಕ್ಕೆ ಪ್ರಯತ್ನಪಟ್ಟರಲ್ಲಾ ಅದರ ಪ್ರತಿಫಲವೇ ಇಂಥ ದುಃಸ್ಥಿತಿಗೆ ಕಾರಣ ಈ ರಾಜ್ಯದಲ್ಲಿ. ಸಿ.ಎಂ.ಐ.ನವರು ನಿಮಗೆ ಸರ್ಟಿಫಿಕೇಟ್ ಕೊಡುತ್ತಾರಾ? ಇಲ್ಲಿರತಕ್ಕ 224 ಜನ ಸದಸ್ಯರನ್ನು ಕೇಳಿ. ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಅಸಿಸ್ಟೆಂಟ್ ಇಂಜಿನಿಯರ್ ಏನು ಹೇಳುತ್ತಾನೆ ಕೇಳಿ. ಕುಣಿಗಲ್‌ನಲ್ಲಿ ಎರಡು ವರ್ಷದಿಂದ ಕಾಲೇಜು ಕಟ್ಟಡದ ಕೆಲಸ ನಿಂತುಹೋಗಿದೆ. ತುಮಕೂರು ಸಬ್‌ಡಿವಿಷನ್‌ನಲ್ಲಿ ನಿಮ್ಮ ಪೆಂಡಿಂಗ್ ಬಿಲ್ ಎಷ್ಟಿದೆ ಎಂಬುದನ್ನು ತರಿಸಿ ನೋಡುತ್ತೀರಾ? ನನಗೆ ಯಾವ ಸರ್ಟಿಫಿಕೇಟ್ ಬೇಕಾಗಿಲ್ಲ. ನಿಮ್ಮ ಸಿ.ಎಂ.ಐ.ನವರದೂ ಬೇಕಾಗಿಲ್ಲ ಪ್ಲಾನಿಂಗ್ ಕಮಿಷನ್‌ದ್ದೂ ಬೇಕಾಗಿಲ್ಲ, ಪ್ರಣವ್ ಮುಖರ್ಜಿ ಅವರದ್ದೂ ನಮಗೆ ಬೇಕಾಗಿಲ್ಲ. ಪ್ರಣವ್ ಮುಖರ್ಜಿಯವರು ಯಾರುಯಾರಿಗೆ ಎಂಥೆಥ ಸರ್ಟಿಫಿಕೇಟ್ ಕೊಡುತ್ತಾರೆ ಎಂಬುದು ನನಗೆ ಬೈರೇಗೌಡರಿಗೆ ತುಂಬಾ ಚೆನ್ನಾಗಿ ಗೊತ್ತಿದೆ. ದೆಲ್ಲಿಯಲ್ಲಿ ಹೇಳಿಬಂದಿದ್ದೇವೆ. ಆದರೆ ಈ ರಾಜ್ಯದ ಜನರ ಸರ್ಟಿಫಿಕೇಟ್ ನಿಮಗೆ ಸಿಕ್ಕುತ್ತದೆಯೇ? ನಿಮ್ಮ ಖಜಾನೆ ತುಂಬಿ ತುಳುಕುತ್ತಾ ಇದ್ದರೆ ಇದನ್ನು ಎತಕ್ಕೆ ತಂದಿರಿ. ನಿಮ್ಮ ಖಜಾನೆ ತುಂಬಿ ತುಳುಕುತ್ತಾ ಇದ್ದರೆ ನೀರಾವರಿ ಇಲಾಖೆಯಲ್ಲಿ 160 ಕೋಟಿ ರೂಪಾಯಿಗಳ ಬೆಲೆಗಳು ಏಕೆ ಇನ್ನೂ ಪೆಂಡಿಂಗ್ ಇವೆ? ಇದಕ್ಕೆ ಉತ್ತರ ಕೊಡಿ. ಏಕೆ ತುಳುಕುತ್ತಾ ಇದೆ ನಿಮ್ಮ ಖಜಾನೆ? ನಿಮ್ಮ ವೀರಾವೇಶದ ಭಾಷಣವನ್ನು ನಾನು ನಿನ್ನೆ ಕೇಳಿದೆ. ನಿಮ್ಮ ಖಜಾನೆ ತುಂಬಿ ತುಳುಕುತ್ತಾ ಇರುವಾಗ ಲೋಕೋಪಯೋಗಿ ಇಲಾಖೆಯಲ್ಲಿ ಏಕೆ 48 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್‌ಗಳನ್ನು ಇಟ್ಟುಕೊಂಡಿದ್ದೀರಿ? ನಾನು ಅಲ್ಲಿಯ ವರೆಗೆ ಮುಂದಕ್ಕೆ ಹೋಗುವುದಿಲ್ಲ. ನಿಮ್ಮ ಆರ್ಥಿಕ ದುಸ್ಥಿತಿಗೆ ಹಿಡಿದಂತಹ ಕನ್ನಡಿಗ ನಾನು ಎಲ್ಲೂ ದೂರ ಹೋಗುವುದಿಲ್ಲ. ಈ ಅಧಿವೇಶನದ ಸಮಯದಲ್ಲಿ ಪೂರ್ತಿ ನಾನು ಶಾಸಕರ ಭವನದಲ್ಲೇ ಇರುತ್ತೇನೆ. ಅಲ್ಲಿ ಒಂದು ಬಲ್ಬ್ ತಂದು ಹಾಕಿಕೊಡಿ ಎಂದರೆ ಅದಕ್ಕೆ ಹಣ ಇಲ್ಲವಂತೆ. ಅಧ್ಯಕ್ಷರೇ, ಈ ರಾಜ್ಯದ ಆರ್ಥಿಕ ದುಸ್ಥಿತಿಗೆ ಎಲ್ಲೋ ಹೋಗುವುದು ಬೇಡಿ. ನೀವು ಇಲ್ಲೇ ರೂಮ್‌ನಲ್ಲಿದ್ದೀರಿ ಎಂದು ಕಾಣುತ್ತದೆ. ಬಲ್ಬ್ ಕೇಳಿದರೆ ಸ್ಟೋರ್‌ನಲ್ಲಿ ಬಲ್ಬ್ ಸಪ್ಲೈ ಇಲ್ಲ ಎಂದು ಹೇಳುತ್ತಾರೆ.

ಶ್ರೀ ಕೆ. ಲಕ್ಕಣ್ಣ:- ನಮ್ಮ ರೂಮಿನಲ್ಲಿ ತಂದು ಹಾಕಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಬರೀ ಕಾಂಗ್ರೆಸ್ ಪಕ್ಷದವರ ರೂಮುಗಳನ್ನು ಮಾತ್ರ ಅವರು ನೋಡಿಕೊಂಡಿರಬೇಕು.

* ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಹಣದ ಪರಿಸ್ಥಿತಿ, ಆರ್ಥಿಕ ಸ್ಥಿತಿ ಚೆನ್ನಾಗಿದೆ ಎಂದು ಅವರು ಭಾಷಣ ಮಾಡುತ್ತಾರೆ. ಚೆನ್ನಾಗಿಲ್ಲ ಎಂದು ನಾನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಸಣ್ಣ ಕೆರೆಗಳನ್ನು ಕಟ್ಟಿಸುವುದಕ್ಕೆ ಪ್ರಾರಂಭಿಸಿ 8 ವರ್ಷ ಆಯಿತು. ಎಲ್ಲಾ ಅರ್ಧಂಬರ್ಧವಾಗಿ ನಿಂತಿವೆ. ಒಂದೇ ಒಂದು ರೂಪಾಯಿಯನ್ನು ಸಣ್ಣ ನೀರಾವರಿ ಇಲಾಖೆಗೆ ಒದಗಿಸಿಕೊಟ್ಟಿಲ್ಲ. ನಿಮ್ಮ ಖಜಾನೆ ತುಂಬಿ ತುಳುಕುತ್ತಾ ಇದೆ, no dearth of money. ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರವೂ ಹಣವನ್ನು ಇಟ್ಟಿದ್ದೀರಿ. ಈ ಸರ್ಕಾರದ ಆರ್ಥಿಕ ಪರಿಸ್ಥಿತಿ ಬಗ್ಗೆ ಹೇಳಬೇಕೆಂದರೆ, ಹಿರಿಯರು ಮತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಇಲ್ಲಿ ಇದ್ದಾರೆ. ಕಳೆದ ಸಾರಿ ತುಮಕೂರಿನಲ್ಲಿ ಒಂದು ಸಭೆ ನಡೆಯಿತು. ಅಲ್ಲಿ ಅನೇಕ ಕೆಲಸಗಳು ಏಕೆ ಆಗಿಲ್ಲಿ ಎನ್ನುವ ಬಗ್ಗೆ ವ್ಯಾಪಕವಾದ ಚರ್ಚೆ ನಡೆಯಿತು. ಜಿಲ್ಲೆಯ ಉಳಿದ ಸದಸ್ಯರೂ ಸಹಾ ಅಲ್ಲಿ ಇದ್ದರು. ಆ ಸಭೆಯಲ್ಲಿ ಬಹಳ ಪ್ರಮುಖವಾಗಿ ಅಧಿಕಾರಿಗಳು ನಮಗೆ ಹೇಳಿದ್ದು ಏನೆಂದರೆ, ಹಣ ಇಲ್ಲದೇ ಇರುವುದರಿಂದ ಪ್ರಗತಿ ಕೆಲಸಗಳು ಕುಂಟಿತವಾಗಿವೆ ಎಂದು. ಏಕೆ? ಈಗ ಒಂದು ವಿಷಯದಲ್ಲಿ ನಮಗೂ ಅನುಮಾನ ಬರುತ್ತಿದೆ, ನಿಮಗೂ ಬರುತ್ತದೆ ಎಂದು ಕಾಣುತ್ತದೆ. ಅಲ್ಲಿ ಟ್ರೆಷರಿಯಲ್ಲಿ ಹಣ ಕೇಳಿದರೆ ರಿಸ್ಟ್ರಿಕ್ಷನ್ ಇದೆ ಎಂದು ಹೇಳುತ್ತಾರೆ. ಇವರನ್ನು ಕೇಳಿದರೆ ತುಂಬಿತುಳುಕುತ್ತದ್ದೆಂದು ಹೇಳುತ್ತಾರೆ. ಇವರಿಬ್ಬರಲ್ಲಿ ಯಾರೋ ಒಬ್ಬರು ಸುಳ್ಳು ಹೇಳುತ್ತಿದ್ದಾರೆ. ದುಡ್ಡಿಗೆ ನಮ್ಮಲ್ಲಿ ಬರವೇ ಇಲ್ಲ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ಅಲ್ಲಿ ಅಧಿಕಾರಿಗಳು ಹೇಳುವುದು ನಾವೇನು ಮಾಡುವುದು ಸ್ವಾಮಿ ಕೆಲಸ ಮಾಡಲು ದುಡ್ಡು ಬಂದಿಲ್ಲ ಎಂದು. ಇವರಿಬ್ಬರಲ್ಲಿ ಯಾರು ಸುಳ್ಳು ಹೇಳುತ್ತಿದ್ದಾರೆಂದು ನಾವು ಕಂಡುಹಿಡಿಯಬೇಕಾಗಿದೆ. ಇವತ್ತೂ ಕೂಡ ಹಣ ಇದೆ ಎಲ್ಲೂ ಕೂಡ ದುಡ್ಡಿಗೆ ತೊಂದರೆ ಇಲ್ಲ ಎನ್ನುವ ಇದೇ ವಾದವನ್ನು ತಾವು ಹೇಳುವುದಾದರೆ, ನಾಳೆಯಿಂದ ಯಾವ ಅಧಿಕಾರಿ ದುಡ್ಡಿಲ್ಲ ಎಂದು ಹೇಳುತ್ತಾನೋ ಅವನ ಕೊರಳುಪಟ್ಟಿ ಹಿಡಿದುಕೊಂಡು ಬಂದು ನಿಮ್ಮ ಮುಂದೆ ನಿಲ್ಲಿಸಬೇಕಾಗುತ್ತದೆ. You tell the people of Karnataka that there is no dearth for money.

ಯಾರಾದರೂ ಒಬ್ಬ ಅಧಿಕಾರಿ ಹಣ ಇಲ್ಲವಾದ್ದರಿಂದ ಕೆಲಸ ನಿಂತುಹೋಗಿದೆ ಎಂದು ಹೇಳಿದರೆ ಆ ಮನುಷ್ಯನನ್ನು ನಾನು ನಿಮ್ಮ ಮುಂದೆ ನಿಲ್ಲಿಸಬೇಕಾಗುತ್ತದೆ. ಏಕೆ ನೀವು ಅಧಿಕಾರಿಗಳನ್ನು ಗೋಳು ಹೊಯ್ದು ಕೊಳ್ಳುತ್ತಿದ್ದೀರಿ? ಪತ್ರಿಕೆಗಳಿಗೆ ಚುನಾವಣೇ ಭಾಷಣ ಮಾಡುತ್ತೀರಿ ದುಡ್ಡಿದೇದುಡ್ಡಿದೇ ಎಂದು. ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ಪ್ರಶಸ್ತಿಪತ್ರ ಕೊಡಬೇಕಾದವರು ನರಸಿಂಹರಾಯರು ಅಲ್ಲ, ಪ್ರಣಬ್ ಮುಖರ್ಜಿಯವರಲ್ಲ, ಸಿಎಂಐ ಸಂಸ್ಥೆ ಅಲ್ಲ. ಈ ರಾಜ್ಯದ ಹಣದ ಪರಿಸ್ಥಿತಿ ಬಗ್ಗೆ ಪ್ರಶಸ್ತಿ ಪತ್ರ ಕೊಡಬೇಕಾದವರು ಈ ರಾಜ್ಯದ ಜನ. ಪೆನ್‌ಷನ್‌ಗೆ ಟ್ರೆಜರಿಗೆ ತಿರುಗುತ್ತಿರುವವನು ಹೇಳಬೇಕು, ಬಿಲ್ ಬರಲಿಲ್ಲವೆಂದು ಎಂಜಿನಿಯರ್ ಆಫೀಸಿಗೆ ಗುತ್ತಿಗೇದಾರ ತಿರುಗುತ್ತಿದ್ದಾನಲ್ಲ ಅವನು ಈ ರಾಜ್ಯದ ಹಣಕಾಸಿನ ಸ್ಥಿತಿಯ ಬಗ್ಗೆ ಹೇಳಬೇಕು. ಅವರು ಹೇಳುವುದನ್ನು ಬಿಟ್ಟು ನಮಗೆ ನರಸಿಂಹರಾಯರು

ಸರ್ಟಿಫಿಕೇಟ್ ಕೊಟ್ಟಿದ್ದಾರೆ, ಪ್ರಣಭ್ ಮುಖರ್ಜಿಯವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎಂದರೆ ಅದರಿಂದ ಪ್ರಯೋಜನ ಆಗುವುದಿಲ್ಲ. ನಿನ್ನೇ ತಾನೆ ಬಂತು ದೇವರುಗಳ ವಿಷಯದಲ್ಲಿ. ನಾವು ಆ ದೇವರುಗಳನ್ನು ತೃಪ್ತಿಪಡಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ದೇವರು ಜನಗಳು, ಸರ್ವಸ್ವವನ್ನೂ ಕೊಟ್ಟಿರುವವರು. ಆ ದೇವರುಗಳು ಏನಾದರೂ ನಿಮಗೆ ಸರ್ಟಿಫಿಕೇಟ್ ಕೊಟ್ಟಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಇವರು ಯಾರೂ ಕೊಟ್ಟಿರತಕ್ಕ ಸರ್ಟಿಫಿಕೇಟ್‌ನಿಂದ ನಿಮಗೂ ಪ್ರಯೋಜನವಾಗುವುದಿಲ್ಲ, ನಮಗೂ ಪ್ರಯೋಜನ ಆಗುವುದಿಲ್ಲ. ಅದಕ್ಕೆ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. At least, here afterwards, try to stop to live in an utopian world.

ಭ್ರಮಾಲೋಕದಲ್ಲಿ ಬದುಕುವಂತಹ ಪ್ರಯತ್ನವನ್ನು ಮಾಡಬೇಡಿ. At least now, come to the ground.

ಆ ಭ್ರಮಾಲೋಕದಲ್ಲಿ ತೇಲಾಡುವ ಪ್ರಯತ್ನ ಮಾಡಬೇಡಿ. ಸನ್ಮಾನ್ಯ ಅಧ್ಯಕ್ಷರೇ, ನನಗೆ ಒಂದೇ ಒಂದು ನೋವಾಗುವ ವಿಷಯವೆಂದರೆ, ಈ ಹೊಸ ಸೇವೆಗಳ ಬಗ್ಗೆ. ಅನಿರೀಕ್ಷಿತವಾಗಿ ಬರುವಂತಹ ಖರ್ಚುಗಳಲ್ಲಿನ ಬಗ್ಗೆ ನಾನು ನಿನ್ನೆ ಕೂಡ ಭಾಷಣ ಮಾಡಿದೆ. ಬರೀ ನೀರಾವರಿ ಬಗ್ಗೆ ಮಾತ್ರ ಭಾಷಣ ಮಾಡುತ್ತೀರಿ ಎಂದು ಮಾನ್ಯ ಕರಿಯಣ್ಣನವರು ಹೇಳಿದರು. ಈ ಪೂರಕ ಅಂದಾಜಿನಲ್ಲಿ ಯಾವುದಾದರೂ ಪ್ರಮುಖವಾಗಿ ನಿಂತು ಹೋಗಿದ್ದಂತಹ ನೀರಾವರಿ ಕೆಲಸಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಇವರು ಕೊಟ್ಟಿದ್ದಿದ್ದರೆ ನಾನು ಹೋಗಿ ಇವರಿಗೆ ಅಡ್ಡ ಸಲಾಮು ಹೊಡೆಯುತ್ತಿದ್ದೆ: ದೀರ್ಘದಂಡ ಸಲಾಮು ಹೊಡೆಯುತ್ತಿದ್ದೆ. ಏರೋಪ್ಲೇನಿನ ರನ್ವೇಗೆ, ಯಾರೋ ಹಾಲು ಉತ್ಪಾದಕರ ಸಂಘದಲ್ಲಿ ಆಗಿರತಕ್ಕ ಅವ್ಯವಹಾರದ ಖರ್ಚಿಗೆ, 25 ಕೋಟಿ ರೂಪಾಯಿಯನ್ನು ಬಡ್ಡಿ ಕಟ್ಟುವುದಕ್ಕೆ ಪೂರಕ ಅಂದಾಜನ್ನು ತಂದಿರುವ ಬದಲು ಯಾವುದಾದರೂ ಒಂದು ಯೋಜನೆ, ಅದು ಕಾರಂಜಾ ಇರಬಹುದು, ನಾರಾಯಣಪುರ ಇರಬಹುದು, ಕೃಷ್ಣ, ಕಾವೇರಿ ಇರಬಹುದು ಯಾವುದಕ್ಕಾದರೂ 100 ಕೋಟಿ ರೂಪಾಯಿಯನ್ನು ಈ ಅಂದಾಜಿನಲ್ಲಿ ಒದಗಿಸಿದ್ದಿದ್ದರೆ ಬಹುಶಃ ಈ ಸರ್ಕಾರವನ್ನು ನಾನು ಮೆಚ್ಚಿಕೊಳ್ಳುತ್ತಿದ್ದೆ. ಒಂದೇ ಒಂದು ನಾನು ಈ ಪೂರಕ ಅಂದಾಜಿನಲ್ಲಿ ಒಪ್ಪಿಕೊಳ್ಳತಕ್ಕ ಬೇಡಿಕೆ ಎಂದರೆ ಕೆಲಾಮಿಟೀಸ್. ಅನಿರೀಕ್ಷಿತ ಪ್ರವಾಸಕ್ಕೆ ಮಾಡಿದ ಖರ್ಚು ಇದೆಯಲ್ಲಾ, ಅದು ಒಂದೇ ಒಂದು ಈ ಪೂರಕ ಅಂದಾಜಿನಲ್ಲಿ ಇರಲಿಕ್ಕೆ ಎಲ್ಲಾ ಯೋಗ್ಯತೆಯನ್ನು ಪಡೆದಿರತಕ್ಕಂತಹದ್ದು. ಮತ್ತು ಎಲ್ಲಾ ಕೂಡಾ ಒಪ್ಪುವಂತಹದ್ದು. ಪ್ರವಾಹ ಬರುತ್ತದೆ ಎಂದು ನಾವು ನಿರೀಕ್ಷೆ ಮಾಡಿರಲಿಲ್ಲ. ಪ್ರವಾಹ ಬರುತ್ತದೆ ಎಂದು ನಾವು ಆಯವ್ಯಯದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. I fully agree with the Government, except that item, all other items, neither they are new items nor they are contemplated.

ಆದ್ದರಿಂದ, ಈ ಆಯವ್ಯಯದ ಪೂರಕ ಅಂದಾಜು ಇನ್ನು ತಂದಿದ್ದೀರೋ ಇದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ವಿರೋಧಮಾಡಿ ಎನ್ನು ಮುಂದಾದರೂ ಕೂಡ್ಡಾ

ಆರ್ಥಿಕ ಇಲಾಖೆ ಮೇಲೆ ಮುಂದೆ ಅಧಿಕಾರಕ್ಕೆ ಬಂದಂತಹವರು ಸ್ವಲ್ಪ ಹಿಡಿತವನ್ನು ಇಟ್ಟುಕೊಂಡು ಇಂತಹ ಒಂದು ಅವ್ಯವಸ್ಥೆ ಆಗದ ರೀತಿಯಲ್ಲಿ ರಾಜ್ಯದ ಜನರನ್ನು ಕಾಪಾಡಿಕೊಂಡು ಹೋಗಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನೂ ಎರಡು ತಿಂಗಳು ಇವರ ಸರ್ಕಾರದ ಆಡಳಿತದಲ್ಲಿ ನಾವು ಬದುಕಬೇಕಾಗಿದೆ. ಈಗಲಾದರೂ ಕೂಡ ಯಾವ ಅಧಿಕಾರಿಗಳು ಹಣವಿಲ್ಲವೆಂದು ಹೇಳುತ್ತಾರೋ, ಅವರು ಆ ರೀತಿ ಹೇಳದಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಕರೆದುಕೊಂಡು ಬರುತ್ತೇನೆಂದು ಹೇಳಿದ್ದೀರಿ.

ಶ್ರೀ ವೈ ಕೆ ರಾಮಯ್ಯ:- ಕರೆದುಕೊಂಡು ಬರುತ್ತೇನೆ. ಇನ್ನೇನು ಮಾಡಲಿ? ಈಗ ನೀವು ಉತ್ತರವನ್ನು ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಸಂವೃದ್ಧವಾಗಿದೆ, ನಾವು ದೀವಾಳಿ ಎದ್ದಿಲ್ಲ : ನಮ್ಮ ಉತ್ತರವನ್ನು ದುಡ್ಡಿಲ್ಲ ಎಂದು ನೀವು ಹೇಳಿದರೆ ನಾವು ಕೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಬೊಕ್ಕಸದಲ್ಲಿ ದುಡ್ಡು ತುಂಬಿತುಳುಕುತ್ತಿದೆ, ಕಾಮಧೇನು ಕಲ್ಪವೃಕ್ಷಗಳೆಲ್ಲಾ ಇಳಿದುಬರುತ್ತಿವೆ, ಇದು ರಾಮರಾಜ್ಯ, ನಾವು ಯಾವುದಕ್ಕೂ ಹಣದ ಕೊರತೆ ಮಾಡಿಲ್ಲವೆಂದು ಈಗ ಉತ್ತರ ಕೊಟ್ಟರೆ, ನಾಳೇನೆ ನಾನು ಕ್ಷೇತ್ರಕ್ಕೆ ಹೋಗಿ ಅಲ್ಲಿ ಯಾರಾದರೂ ಅಧಿಕಾರಿಗಳು ಹಣ ಇಲ್ಲ ಎಂದರೆ ಕರೆದುಕೊಂಡು ಬಂದು ನಿಮ್ಮ ಮುಂದೆ ನಿಲ್ಲಿಸುತ್ತೇನೆ. ಇದನ್ನು ಪತ್ರಿಕೆಯವರು ಬರೆಯಬೇಕಾಗುತ್ತದೆ. ಸ್ವಾಮಿ, ಈ ಸರ್ಕಾರದಲ್ಲಿ ಏನೂ ದುಡ್ಡಿಗೆ ಬರ ಇಲ್ಲವಂತೆ ಎಂದು. ಬರೆಯುತ್ತಾರೆ ಇವತ್ತು. ಏಕೆಂದರೆ , ನಿನ್ನೆ ನೀವು ವೀರಾವೇಶದ ಭಾಷಣವನ್ನು ಸಹಾ ಅವರು ನೋಡಿದ್ದಾರೆ. ಈ ಸರ್ಕಾರಕ್ಕೆ ದುಡ್ಡಿನ ಕೊರತೆ ಇಲ್ಲ, ಹಣದ ಕೊರತೆ ಇಲ್ಲ, ಖಜಾನೆ ತುಂಬಿಕೊಳ್ಳುತ್ತಿದೆ ಎಂದು ಅವರು ಬರೆಯಲಿ. ನಾಳೆ ಆ ಅಧಿಕಾರಿ ಏನಾದರೂ ಹಣ ಇಲ್ಲ ಎಂದರೆ ಅವನನ್ನು ಕರೆದುಕೊಂಡು ಬರುತ್ತೇನೆ. ಆದ್ದರಿಂದ ಈ ಪರಿಸ್ಥಿತಿಯನ್ನು ನೀಗಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಇಲ್ಲಿ ವಿಷಯ ಸಮಿತಿಗಳನ್ನು ರಚನೆ ಮಾಡಿ ಅನೇಕ ಸಲಹೆಗಳನ್ನು ಅವುಗಳ ಮುಖಾಂತರ ಕೊರಲಾಗಿದೆ. ನಮ್ಮ ನಮ್ಮ ಸಮಿತಿಗಳಿಗೆ ಸಂಬಂಧಪಟ್ಟ ಇಲಾಖೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಹೇಳಿ ಅನೇಕ ವಿಚಾರಗಳ ಬಗ್ಗೆ ನಾವು ನಮ್ಮ ಸಮಿತಿಗಳ ಮೂಲಕ ಸಲಹೆಗಳನ್ನು ಕೊಟ್ಟಿದ್ದೇವೆ. ಈ ಪೂರಕ ಅಂದಾಜಿನಲ್ಲಿ ಆ ಇಲಾಖೆಗಳಿಗೆ ಹೆಚ್ಚಿನ ಹಣ ಒದಗಿಸಬಹುದೆಂದು ನಾವು ತಿಳಿದುಕೊಂಡಿದ್ದೆವು. ಆ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪುತ್ತದೆಂದು ನಾವು ತಿಳಿದುಕೊಂಡಿದ್ದೆವು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಪೂರಕ ಅಂದಾಜುಗಳು ಎಂದರೆ ಈಗಾಗಲೇ ಮಾಡಿದ ಖರ್ಚಿನ ವ್ಯಯಕ್ಕೆ ಸಭೆಯ ಒಪ್ಪಿಗೆಯನ್ನು ತೆಗೆದುಕೊಳ್ಳುವುದು. ಮುಂದೆ ಆಗುವುದಕ್ಕೆ ಅಲ್ಲ. ಈಗ ಏನಿದ್ದರೂ ಇದಕ್ಕೆ ಏಕೆ ಖರ್ಚು ಮಾಡಿದಿರಿ, ಇದು ಏತಕ್ಕೆ ಜಾಸ್ತಿಯಾಯಿತು ಎಂದು ಕೇಳಬಹುದೇ ವಿನಃ ಮುಂದೆ ಮಾಡುವುದಕ್ಕೆ ಅದು ಬರುವುದಿಲ್ಲ. ಕಳೆದ ವರ್ಷದಲ್ಲಿ ಅಥವಾ

ಈ ವರ್ಷದ ಭಾಗದಲ್ಲಿ ಆಯವ್ಯಯಕ್ಕಿಂತ ಹೆಚ್ಚು ಖರ್ಚು ಮಾಡಿದ್ದನ್ನು ಏಕೆ ಖರ್ಚು ಮಾಡಿದ್ದೀರಿ ಎಂದು ಕೇಳಬಹುದು.

ಶ್ರೀ ವಾಟಾಳ್ ನಾಗರಾಜ್ :- ನಾನು ಕೇಳಿದ ಕಾರಣ ನಾವು ಏನು ಸಲಹೆಗಳನ್ನು ಕೊಟ್ಟಿದ್ದೆವು ಅವನ್ನು ಸೇರಿಸಬಹುದಾಗಿತ್ತು ಎಂದು ಸೇರಿಸಬಾರದು ಎಂದು ಏನಾದರೂ ಇದೆಯಾ? ನಾವು ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ...

ಚೇರ್ಮನ್:- ನಾಗರಾಜ್‌ರವರೇ ಒಂದು ವಿಷಯ ಪೂರಕ ಅಂದಾಜು ಎಂದರೆ ಹಿಂದೆ ಏನು ಮಂಜೂರು ಮಾಡಿದ್ದೇವೆ, ಅದಕ್ಕಿಂತ ಹೆಚ್ಚಿಗೆ ಖರ್ಚುಮಾಡಿರುವುದನ್ನು ಒಪ್ಪಿಕೊಳ್ಳತಕ್ಕದ್ದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ವಿಷಯ ಸಮಿತಿಯ ತೀರ್ಮಾನ ಏನಿದೆ, ಅದು ಆಚರಣೆಗೆ ಬರಬೇಕಾದರೆ ಮೂರು ತಿಂಗಳ ಕಾಲಾವಕಾಶವನ್ನು ತಾವೆ ಕೊಟ್ಟಿದ್ದೀರಿ. ಅದು ಆದನಂತರ ಏಕೆ ಆಚರಣೆಗೆ ಬಂದಿಲ್ಲ ಎಂದು ಕೇಳುವುದಕ್ಕೆ ಅವಕಾಶ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಿಜ. ಈ ಪರಿಮಿತಿಯಲ್ಲೇ ಹೋಗುವುದಕ್ಕಿಂತ ಹೆಚ್ಚಾಗಿ ಕೆಲವು ಸಲಹೆಗಳನ್ನು ತಮ್ಮ ಮೂಲಕ ನಾನು ಕೊಡಬೇಕಾಗಿದೆ. ನನ್ನ ಉದ್ದೇಶ ಏನು ಎಂದು ಹೇಳಿದರೆ ಆರುವಾರ, ಎಂಟುವಾರಗಳ ಕಾಲ ಕುಳಿತು ನಾವು ಒಂದು ವರದಿಯನ್ನು ಕೊಟ್ಟಿದ್ದೇವೆ. ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದಕ್ಕೆ ಮೂರು ತಿಂಗಳ ಅವಕಾಶ ನಮಗೆ ಕೊಟ್ಟಿದ್ದೀರಿ ಎಂದು ಹೇಳಿದರೆ, ಮೂರು ತಿಂಗಳಾದ ಮೇಲೆ ಬೇರೆ ವಿಧಾನಸಭೆ ಬರುತ್ತದೆ, ಬೇರೆ ಸರ್ಕಾರ ಬರುತ್ತದೆ. ಅದು ಮುಂದೆ ಏನಾಗುತ್ತದೆ ಎನ್ನತಕ್ಕಂಥಾದ್ದು ಬೇರೆ. ನೀವು ಈಗ ತಕ್ಷಣಕ್ಕೆ ಏನು ಮಾಡಿದ್ದೀರಿ ಎನ್ನುವುದಕ್ಕೆ ಒಂದು ವ್ಯವಸ್ಥೆಯಾಗಬೇಕಲ್ಲಾ? ಯಾಕೆ ಆಗುವುದಿಲ್ಲ?

ಚೇರ್ಮನ್:- ತಾವು ಈಗ ಪೂರಕ ಬೇಡಿಕೆಗಳ ಬಗ್ಗೆ ಮಾತನಾಡಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಪೂರಕ ಅಂದಾಜು ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:- ನೀವು ಏನು ಮಾಡಿದ್ದೀರಿ ಎಂದು ಹೇಳುವುದೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಮೊನ್ನೆಯಷ್ಟೇ ವರದಿಯನ್ನು ಕೊಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಮೊನ್ನೆ ಆದರೇನು, ಮಾಡುವುದಕ್ಕೆ ಆಗುವುದಿಲ್ಲವೇ? ವರದಿ ನಾವು ಕೊಟ್ಟು ಎಷ್ಟು ದಿವಸ ಆಯಿತು?..

ಶ್ರೀ ಕಾಗೋಡು ತಿಮ್ಮಪ್ಪ:- ವರದಿ ಕೊಟ್ಟಮೇಲೆ ಅದು ಸರ್ಕಾರಕ್ಕೆ ಬರುತ್ತದೆ, ಅದನ್ನು ನೋಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇದು ಒಂಭತ್ತನೇ ವಿಧಾನಸಭೆಯ 13ನೇ ಅಧಿವೇಶನ. ಈ ಅಧಿವೇಶನದ ಕೊನೆಯ ದಿನ. ಇಷ್ಟು ದಿವಸ ಇಲ್ಲಿ ಭಾಗವಹಿಸಿ ಚರ್ಚೆ ನಡೆಸಿದ್ದಕ್ಕೆ ತಮ್ಮ ಪೀಠಕ್ಕೂ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಈ ಸಂದರ್ಭದಲ್ಲಿ ವಿಧಾನಸಭೆಗೆ ಬಹಳ ಘನತೆ ಮತ್ತು ಗಾಂಭೀರ್ಯ ಇಗೆ ಎಂದು ನಾವೆಲ್ಲರೂ ಈ ಸದನದಲ್ಲಿ ಒಪ್ಪಿಕೊಂಡಿದ್ದೇವೆ.

ಆದರೂ ಸಹ ಈ ಸದನದ ಹಿರಿಯ ಸದಸ್ಯರಾದ ಶ್ರೀ ರಾಮಕೃಷ್ಣ ಹೆಗಡೆಯವರು ಈ ಸದನವನ್ನು ವಾಚಾಮಗೋಚರವಾಗಿ ಬಯ್ದಿದ್ದಾರೆ. ಇದು ನೋಡಿ ಪತ್ರಿಕೆಯಲ್ಲಿ ಬಂದಿದೆ.

''ವಿಧಾನಸಭೆಯ ಘನತೆ, ಗೌರವ ಕುಸಿದು ಬಿದ್ದುಹೋಗಿದೆ. ಇದಕ್ಕೆ ಏನೂ ಗೌರವವೇ ಇಲ್ಲ. ಇಲ್ಲಿರತಕ್ಕಂಥವರನ್ನು ನಾನು ಸರ್ಕಸ್ ಪ್ರಾಣಿಗಳಿಗೂ ಹೋಲಿಸಲಾರೆ....''

ಈ ತರಹ ಆ ಪ್ರೆಸ್ ಕ್ಲಬ್‌ನಲ್ಲಿ ಕುಳಿತುಕೊಂಡು ಒಬ್ಬ ಹಿರಿಯ ಸದಸ್ಯರು ಮಾತನಾಡಿದ್ದಾರೆ ಎಂದು ಹೇಳಿದರೆ, ನನಗೆ....

ಚೇರ್ಮನ್:- ಪೂರಕ ಬೇಡಿಕೆ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:- ರಾಜ್ಯ ವಿಧಾನಸಭೆ.. ರಾಜ್ಯ ವಿಧಾನಮಂಡಲ ಬರುವುದಿಲ್ಲವೇನು?

ಶ್ರೀ ಸಿ.ಬೈರೇಗೌಡ:- ಹೆಚ್ಚಾಗಿ ಆಗಿರುವ ಖರ್ಚಿನ ಬಗ್ಗೆ ಇವರು ಮಾತನಾಡಲಿ. ಅವರು ಮಾತನಾಡಿರುವುದಕ್ಕೇನಾದರೂ ಖರ್ಚು ಆಯಿತಾ? ಇವರಿಗೇನಾದರೂ ಖರ್ಚಾಯಿತೇ? ವಿಧಾನ ಸಭೆಗೆ ಏನಾದರೂ ಖರ್ಚಾಯಿತೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಒಬ್ಬ ಜವಾಬ್ದಾರಿಯುತವಾದಂಥ ಮಾಜಿ ಮುಖ್ಯಮಂತ್ರಿಗಳಾಗಿದ್ದವರು, ಈ ಸದನದ ಸದಸ್ಯರಾಗಿರುವವರು.....

ಚೇರ್ಮನ್:- ಪೂರಕ ಬೇಡಿಕೆಗಳ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನು ಒಬ್ಬ 67 ರಿಂದ ಈ ಸದನದ ಒಬ್ಬ ಸದಸ್ಯನಾಗಿದ್ದೇನೆ.

ಪ್ರೊ: ಎಂ.ಡಿ.ನಂಜುಂಡಸ್ವಾಮಿ:- ಈಗ ಬಹಳ ಮುಖ್ಯವಾದ ವಿಷಯ ಮಾನ್ಯ ವಾಟಾಳ್‌ರವರು ಎತ್ತಿರುವುದು. ಅಂತಹ ಅಧಿಕ ಪ್ರಸಂಗಿತನವನ್ನು ನಾವು ಸುಮ್ಮನೆ ಬಿಡಬಾರದು. ಅವರು ಯಾರೇ ಇರಬಹುದು. ಅವರು ಅಧಿಕ ಪ್ರಸಂಗಿ ಎನ್ನುವುದನ್ನು ಅವರೇ ಸಾಬೀತು ಮಾಡಿಕೊಂಡಿದ್ದಾರೆ. ಅ ಅಧಿಕಪ್ರಸಂಗಿತನ, ಈ ಸದನಕ್ಕೆ ಅಗೌರವ ತರುವಂಥ ಮಾತನ್ನು ಆಡುವುದಕ್ಕೆ ಬಿಡಬಾರದು ತಾವು. ಇದನ್ನು ನಾವು ಸರ್ವಾನುಮತದಿಂದ ಖಂಡಿಸಬೇಕು ಎನ್ನುವುದು ನನ್ನ ಸಲಹೆ.

ಶ್ರೀ. ಸಿ. ಬೈರೇಗೌಡ :- ಇದಕ್ಕೆ ಒಂದು ವಿಶೇಷವಾದಂಥ ಪ್ರಸ್ತಾವವನ್ನು ಇವರು ತರಲಿ. ಆಗು ಚರ್ಚೆಯಾಗಲಿ. ಆದ್ದರಿಂದ ದಯವಿಟ್ಟು ತಾವು, ಅದು ಸರಿಯೋ ತಪ್ಪೋ ಎನ್ನುವುದು ಅವರವರ ಭಾವನೆಗಳ ಮೇಲೆ ಹೋಗುತ್ತದೆ. ಅವರು ಯಾವರೀತಿಯಲ್ಲಿ ಆಲೋಚನೆ

ಮಾಡುತ್ತಾರೆ ಎನ್ನುವುದರ ಮೇಲೆ ಹೋಗುತ್ತದೆ. ಅವರಿಗೆ ಉತ್ತರವನ್ನು ಕೊಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಆದ್ದರಿಂದ ಅವರ ಗೈರುಹಾಜರಿಯಲ್ಲಿ ಅವರ ಬಗ್ಗೆ...

ಚೇರ್ಮನ್:-ಈಗ ಹಾಗೆಲ್ಲಾ ಮಾತನಾಡುವುದಕ್ಕೆ ಆಗುವುದಿಲ್ಲ. ಬೇರೆ ನೋಟಿಸ್ ಕೊಟ್ಟು ಅದರ ಬಗ್ಗೆ ಮಾತನಾಡಲಿ. ನಾಗರಾಜ್‌ರವರೇ, ತಾವು ಮಾತನಾಡುತ್ತೀರೋ ಇಲ್ಲವೋ?

ಶ್ರೀ ಬಿ.ಎಚ್.ಬನ್ನಿಕೋಡ್:-ಅಧ್ಯಕ್ಷರೇ, ಈಗಾಗಲೇ ಈ ವಿಷಯವನ್ನು ಪ್ರಸ್ತಾಪಿಸಿರುವುದರಿಂದ ಮತ್ತು ನಮ್ಮ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆ ಅವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡಿರುವುದರಿಂದ.....

ಚೇರ್ಮನ್:- ಆಬಗ್ಗೆ ಮಾತನಾಡಲಿಕ್ಕೆ ಅವಕಾಶವಿಲ್ಲ.

ಶ್ರೀ ಬಿ.ಚ್.ಬನ್ನಿಕೋಡ್:-ಅವರು ಆಪಾದನೆಯನ್ನು ಮಾಡಿದ್ದಾರೆ. ಆ ಸದಸ್ಯರು ಇಲ್ಲಿ ಇಲ್ಲ. ನಾವು ಅದನ್ನು ಈ ಸದನದಲ್ಲಿ ಹೇಳಬೇಕಾಗುತ್ತದೆ. ಈ ಸದನ ಬಹಳ ಗೌರವಯುತವಾಗಿರುವಂಥಾದ್ದು. ಇಲ್ಲಿಯ ಸದಸ್ಯರು ಗೌರವಾನ್ವಿತ ಸದಸ್ಯರು. ಇಲ್ಲಿ ಇರತಕ್ಕಂಥ ಬಹುತೇಕ ಸಂದರ್ಭಗಳನ್ನು ನೋಡಿದರೆ, ಆಡಳಿತ ಪಕ್ಷದ ಸದಸ್ಯರೇ ತಮ್ಮ ಸರ್ಕಾರದ ವಿರುದ್ಧ, ತಮ್ಮ ಮುಖ್ಯಮಂತ್ರಿಗಳ ವಿರುದ್ಧ ಮಾಡಿದಂಥ ಘೇರಾವೋ, ಮತ್ತೆ ಈ ಸದನದಲ್ಲಿ ವಿರೋಧ ಪಕ್ಷದವರು ಮಾತನಾಡುವಾಗ, ಆಡಳಿತ ಪಕ್ಷದ ಸದಸ್ಯರು ಮಾತನಾಡದಂತೆ ತೊಂದರೆ ಮಾಡಿರುವುದು ಕಡತ ತೆಗೆದುನೋಡಿದರೆ ಗೊತ್ತಾಗುತ್ತದೆ...

ಚೇರ್ಮನ್:-ಅವರು ನೋಟೀಸ್ ಕೊಟ್ಟು ಬೇಕಾದರೆ ಪ್ರಸ್ತಾಪ ಮಾಡಲಿ. ಈಗ ಮಾತನಾಡುವುದಕ್ಕೆ ಅವಕಾಶ ಇಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಚ್.ಬನ್ನಿಕೋಡ್:- ನಾವು ಈ ಸದನದ ಗೌರವವನ್ನು ಎತ್ತಿಹಿಡಿಯಬೇಕೇ ವಿನ: ನಾವು ಮಾಡಿದ ತಪ್ಪುಸರಿ ಎಂದು ವಾದಿಸುವುದು ಸರಿಯಲ್ಲ. ಎಲ್ಲರೂ ನಮ್ಮ ನಮ್ಮ ಹಕ್ಕುಗಳನ್ನು ಚಲಾಯಿಸುವಾಗ ಇನ್ನೊಬ್ಬರ ಹಕ್ಕಿಗೂ ಗೌರವ ಕೊಟ್ಟು ಈ ಸದನದ ಗೌರವವನ್ನು ಎತ್ತಿಹಿಡಿಯಬೇಕು.

ಚೇರ್ಮನ್:-ಈಗ ಆ ವಿಷಯ ಪ್ರಸ್ತಾಪಕ್ಕೆ ಬರುವುದಿಲ್ಲ. ನೋಟೀಸ್ ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತೇನೆ. ಆ ಬಗ್ಗೆ ಮಾತನಾಡುವುದು ಬೇಡ. ಆದನ್ನು ಬಿಟ್ಟು ಬೇರೆ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:-ಅಲ್ಲ, ಐದು ವರ್ಷಗಳಲ್ಲಿ ಬರೀ 27 ದಿವಸ ಮಾತ್ರ ಅವರು ಸಭೆಗೆ ಬಂದಿದ್ದಾರಂತೆ. ಪ್ರಜಾಪ್ರಭುತ್ವದ ದೇವಾಲಯ ವಿಧಾನಸೌಧ.

(ಗೊಂದಲ)

ಚೇರ್ಮನ್:-ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ವಿಷಯದ ಬಗ್ಗೆ ತಾವು ಮಾತನಾಡಬೇಕಾದರೆ ನೋಟೀಸ್ ಕೊಡಬೇಕು. ಆದರ ಬಗ್ಗೆ ದಯವಿಟ್ಟು ಚರ್ಚೆ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ:-ತಾವು ಅವರನ್ನು ಕರೆದು ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಅವರು ಈ ಸಭೆಗೆ ಅವಮಾನ ಮಾಡಿದ್ದಾರೆ.

ಶ್ರೀ ಸಿ.ಬೈರೇಗೌಡ:-ಇದನ್ನು ತಾವು ಕಡತದಿಂದ ತೆಗೆಯಬೇಕು.

(ಗೊಂದಲ)

ಶ್ರೀ ಸಿ.ಬೈರೇಗೌಡ:- ಆ ಪದಗಳನ್ನುತಾವು ಕಡತದಿಂದ ತೆಗೆಯಬೇಕು. ಈ ಪದಗಳನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ. ಎನ್ನುವ ಪದವನ್ನು ಬಳಸಿದ್ದಾರೆ.

(ಗೊಂದಲ)

ಚೇರ್ಮನ್:-ನಾನು ನಿಂತುಕೊಂಡಿರುವಾಗ ನೀವು ಕುಳಿತುಕೊಳ್ಳಬೇಕು.ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಅಧ್ಯಕ್ಷ ಪೀಠಕ್ಕಾದರೂ ತಾವು ಗೌರವ ಕೊಡಬೇಕು. ನೋಡಿ, ಆ ವಿಷಯವನ್ನು ಪ್ರಸ್ತಾಪ ಮಾಡಬೇಕಾದರೆ ಮೊದಲು ನೋಟೀಸ್ ಕೊಡ ಬೇಕು. ಈಗ ನಾನು ಆ ಪ್ರಸ್ತಾಪಕ್ಕೆ ಅವಕಾಶ ಕೊಡುವುದಿಲ್ಲ. ವಾಟಾಳ್ ನಾಗರಾಜ್‌ರವರೇ, ತಾವು ಪೂರಕ ಬೇಡಿಕೆಗಳ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಸಿ.ಬೈರೇಗೌಡ:- ಇವತ್ತು ಇಲ್ಲಿ ನಿಯಮಾವಳಿಗಳು ಇವೆ. ಅಧ್ಯಕ್ಷರ ಅಪ್ಪಣೆ ಪಡೆದುಕೊಂಡೇ ಯಾರಾದರೂ ಮಾತನಾಡಬೇಕು. ನಿಮ್ಮ ಅಪ್ಪಣೆ ಇಲ್ಲದೆ ಏನಾದರೂ ಕೂಡ ಮಾತನಾಡಿದರೆ ಅದನ್ನು ಕಡತದಿಂದ ತೆಗೆದುಹಾಕಬೇಕು. ಆದ್ದರಿಂದ ಈ ವಿಚಾರದಲ್ಲಿ ಏನೇನು ಪ್ರಸ್ತಾಪವಾಯಿತೋ, ಅದನ್ನು ತಾವು ಕಡತದಿಂದ ತೆಗೆಯಬೇಕು ಎಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ.

ಚೇರ್ಮನ್:-ಆಯಿತು.

ಶ್ರೀ ಸಿ.ಬೈರೇಗೌಡ:- ತೆಗೆಯುತ್ತೀರಾ?

ಚೇರ್ಮನ್:- ತೆಗೆಯುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:-ನಾನು...

ಚೇರ್ಮನ್:- ಪೂರಕ ಬೇಡಿಕೆಗಳ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:- ಸ್ವಲ್ಪ ಶಾಂತವಾಗಿರಿ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ, ಇದನ್ನು ನಾನು ಈ ಸದನದಲ್ಲಿ ಪ್ರಸ್ತಾಪಮಾಡುವುದಕ್ಕಿಂತ ಹೆಚ್ಚಾಗಿ ಇದನ್ನು ತಾವೇ ಗಮನಿಸಬೇಕಾಗಿತ್ತು. ಅಧ್ಯಕ್ಷರ ಪೀಠದ ಮೇಲೂ ಇಲ್ಲಿ ಒಂದು ಪದ ಬಂದಿದೆ.

ಚೇರ್ಮನ್:-ಅದರ ಬಗ್ಗೆ ಮಾತನಾಡಬೇಕಾದರೆ ತಾವು ನೋಟಿಸ್ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:-ಅಧ್ಯಕ್ಷರು ದುರ್ಬಲರಾಗಿದ್ದಾರೆ......

ಚೇರ್ಮನ್:-ಅದುಬೇಡ, ಮುಂದೆಹೋಗಿ....

ಶ್ರೀ ವಾಟಾಳ್ ನಾಗರಾಜ್:-ಅಂದರೆ, ನಿಮ್ಮನ್ನು ಯಾರುಬೇಕಾದರೂ ಬಯ್ಯಬಹುದೋ?

ಚೇರ್ಮನ್:-ಸ್ವಾಮಿ, ಅದರ ಬಗ್ಗೆ ಮಾತನಾಡಬೇಕಾದರೆ ತಾವು ನೋಟೀಸ್ ಕೊಡಿ.

(ಗೊಂದಲ)

ಚೇರ್ಮನ್:-ಈ ವಿಷಯವನ್ನು ತಾವು ಪ್ರಸ್ತಾಪ ಮಾಡಬೇಕಾದರೆ ಅಧ್ಯಕ್ಷರಿಗೆ ಮೊದಲು ನೋಟೀಸ್‌ನ್ನು ಬರವಣಿಗೆ ಮೂಲಕ ಕಳಿಸಿ. ಸುಮ್ಮನೆ ಎದ್ದುನಿಂತು ಹೀಗೆ ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:-ನೋಟಿಸ್ ಕಳುಹಿಸಿ ಎಂದು ತಾವು ಹೇಳುತ್ತಿದ್ದೀರಿ. ತೆಗೆದುಕೊಳ್ಳಿ, ನಾನು ಹಕ್ಕುಚ್ಯುತಿಯನ್ನೇ ಕಳುಹಿಸುತ್ತಿದ್ದೇನೆ; ನೇರವಾಗಿ ಈ ಸದನಕ್ಕೆ.

ಚೇರ್ಮನ್:-ಕಳುಹಿಸಿ; ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಾನು ಹಕ್ಕುಚ್ಯುತಿಯನ್ನೇ ಕಳುಹಿಸುತ್ತಿದ್ದೇನೆ. ಏನು ಮಾಡುತ್ತೀರೊ ನೋಡಿಯೇಬಿಡೋಣ.

ಚೇರ್ಮನ್:-ನಾನು ಅದನ್ನು ಪರಿಶೀಲನೆ ಮಾಡಿ ಆಮೇಲೆ ನಿಮಗೆ ಹೇಳುತ್ತೇನೆ. ಈಗ ಪೂರಕ ಬೇಡಿಕೆ ಬಗ್ಗೆ ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:-ಶ್ರೀ ವಾಟಾಳ್ ನಾಗರಾಜ್‌ರವರು ಕೊಡುತ್ತಿರುವ ಹಕ್ಕುಚ್ಯುತಿ ಸೂಚನೆಗೆ ನಾನೂ ಕೂಡ ಬೆಂಬಲ ವ್ಯಕ್ತಪಡಿಸಿ ಸಹಿಮಾಡಿ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:-ಯಾರ ಬಗ್ಗೆಯೂ ವೈಯಕ್ತಿಕವಾಗಿ ಆರೋಪಣೆ ಮಾಡತಕ್ಕಂಥಾದ್ದು ನನ್ನ ಜೀವನದಲ್ಲಿ ಬಂದಿಲ್ಲ. ತಾವು ಕಡತತೆಗೆದು ನೋಡಿ. ನೇರವಾಗಿ ಯಾರನ್ನೂ ಕೂಡ ಮನನೋಯಿಸಿ ಮಾತನಾಡಿದವನಲ್ಲ. ನಾನು ಎಲ್ಲರ ಮೇಲೆ ನಿಮ್ಮ ಮೇಲೆ ಗೌರವ ಇದೆಯೆಂದು ಹೇಳಿ ನನ್ನ ಭಾಷಣವನ್ನು ಪ್ರಾರಂಭ ಮಾಡಿದ್ದೇನೆ. ನಾನು ಈ ಸಂದರ್ಭದಲ್ಲಿ, ಇದರಿಂದ ಸಭೆಗೆ ಅವಮಾನ, ಸದಸ್ಯರಿಗೆ ಅವಮಾನ, ಮತ್ತೆ ಈ ಸದನದ ಸದಸ್ಯರನ್ನು ಸರ್ಕಸ್ಸಿನ....

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

(ಗೊಂದಲ)

ಅಧ್ಯಕ್ಷರು:-ತಾವೇನು ಪೂರಕ ಅಂದಾಜುಗಳ ಬಗ್ಗೆ ಮಾತನಾಡುತ್ತಿದ್ದೀರೋ ಹೇಗೆ?

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ಶುರು ಮಾಡಿದಾಗ...

ಅಧ್ಯಕ್ಷರು:- ಚರ್ಚೆಯನ್ನು ಇದಕ್ಕೆ ಸೀಮಿತಗೊಳಿಸಬೇಕು. ತಾವು ನೋಟೀಸ್ ಏನು ಕಳುಹಿಸಿದ್ದೀರಿ ಅದನ್ನು ನಾನು ಪಸಿಶೀಲನೆ ಮಾಡುತ್ತೇನೆ. ಈಗ ಚರ್ಚೆ ಏನಿದೆ, ಅದಕ್ಕೆ ಸೀಮಿತವಾಗಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:-ಅದರಲ್ಲಿ ರಾಜ್ಯ ವಿಧಾನಮಂಡಲ ಎಂದು ಬಂದಾಗ, ಈ ವಿಧಾನಮಂಡಲದ ಘನತೆ ಮತ್ತು ಗೌರವಕ್ಕೆ ಚ್ಯುತಿಯನ್ನು ಈ ಸದನದ ಸದಸ್ಯರೇ ಹೊರಗಡೆ ಕುಳಿತು ಮಾತನಾಡಿದ್ದಾರೆ. ಅವರೂ ಈ ಸದನದ ಸದಸ್ಯರು. ಅದ್ದರಿಂದ ನನಗೆ ಏನು ಆಗುತ್ತಿದೆ ಎಂದು ಹೇಳಿದರೆ, ಆರೀತಿ ಈ ಸದನವನ್ನು ಮತ್ತು ಸದಸ್ಯರನ್ನು 'ನಾನು ಸರ್ಕಸ್ಸಿನ ಪ್ರಾಣಿಗಳಿಗೆ ಹೋಲಿಸುವುದಿಲ್ಲ'....

ಅಧ್ಯಕ್ಷರು:- ನಾನು ಒಂದು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ. ತಾವು ಕಳುಹಿಸಿದ ನೋಟೀಸ್ ನನ್ನಹತ್ತಿರ ಇದೆ. ಪರಿಶೀಲನೆ ಮಾಡಿ ಅದನ್ನು ಕೈಗೆತ್ತಿಕೊಳ್ಳುತ್ತೇನೆ. ತಾವು ಈಗ ಚರ್ಚೆ ಮಾಡುವುದು ಪೂರಕ ಅಂದಾಜುಗಳ ಬಗ್ಗೆ. ತಾವು ಅದರ ಬಗ್ಗೆ ಮಾತ್ರ ತಮ್ಮ ಚರ್ಚೆಯನ್ನು ಸೀಮಿತಗೊಳಿಸಿ.

ಶ್ರೀ ವಾಟಾಳ್ ನಾಗರಾಜ್:- ಇವತ್ತು ಕೊನೆ. ಇದರಲ್ಲಿ ರಾಜ್ಯ ವಿಧಾನ ಮಂಡಲ ಎಂದು ಇದೆ...

ಅಧ್ಯಕ್ಷರು:- ಇಲ್ಲ, ಇಲ್ಲ, ನನಗೆ ಇದರ ಬಗ್ಗೆ ಚರ್ಚೆ ಮುಗಿಸಿ ಅದನ್ನು ಮತಕ್ಕೆ ಹಾಕಬೇಕು ಮತ್ತು ಮುಂದೆ ಕಾರ್ಯಕಲಾಪಗಳು ಬಹಳ ಇವೆ. ತಾವು ಏನು ನೋಟೀಸ್ ಕಳುಹಿಸಿದ್ದೀರಿ ಅದರ ಬಗ್ಗೆ ನಾನು ಪರಿಶೀಲನೆ ಮಾಡಿ ತಮಗೆ ನಾನು ಹೇಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್:- ತಾವು ಪರಿಶೀಲನೆ ಮಾಡಬೇಕು. ಅದು ತಮ್ಮ ಮೇಲೆ ಇದೆ.

ಅಧ್ಯಕ್ಷರು:- ಈಗ ಬೆಳಗ್ಗೆಯಿಂದ ನಾವು ಏನು ಕಾರ್ಯಕಲಾಪಗಳನ್ನು ಮಾಡಬೇಕು ಎಂದು ನಿಗಧಿಪಡಿಸಿ ಕಾರ್ಯಕಲಾಪಗಳನ್ನು ನಡೆಸಲು ಹೊರಟಿದ್ದೇವೆ ತಾವು ಈಗ ಬಂದು ಒಂದು ನೋಟೀಸ್ ಕೊಟ್ಟು ಇದನ್ನು ತೆಗೆದುಕೊಳ್ಳಬೇಕು ಅದನ್ನು ಕೇಳಬೇಕು ಅಂದರೆ ಹೇಗೆ? ಅದಕ್ಕೆ ನಾನು ಹೇಳುವುದು ಏನೆಂದರೆ, ತಮ್ಮ ಚರ್ಚೆಯನ್ನು ಅಷ್ಟಕ್ಕೇ ಸೀಮಿತಗೊಳಿಸಿ ತಾವು ನೋಟಿಸ್ ಏನು ಕಳುಹಿಸಿದ್ದೀರಿ ಅದರ ಬಗ್ಗೆ ಪರಿಶೀಲನೆ ಮಾಡಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ:-ಮಾನ್ಯ ಅಧ್ಯಕ್ಷರೇ ಅದರ ಬಗ್ಗೆಯೇ ನಾನು ಆಗಲೇ ಮಾತನಾಡಿದ್ದೇನೆ. ತಮ್ಮ ಪರವಾನಿಗೆ ಇಲ್ಲದೆ ಇಲ್ಲಿ ಏನಾದರೂ ಮಾತನಾಡಿದ್ದರೆ...

ಅಧ್ಯಕ್ಷರು:- ನಾನು ಅದಕ್ಕೆ ಅವಕಾಶಕೊಡುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಸಿ.ಬೈರೇಗೌಡ:- ಅವರು ಮಾತನಾಡಿದ್ದಾರೆ. ಅದನ್ನು ದಯವಿಟ್ಟು ಕಡತದಿಂದ ತೆಗೆಸಬೇಕು ಎನ್ನತಕ್ಕಂಥಾದ್ದು...

ಅಧ್ಯಕ್ಷರು:-ತೆಗೆಸೋಣ. ಏಕೆಂದರೆ ಈಗ ಏನಾಗಿದೆ, ಕೊನೆಯ ದಿವಸ ಎಂದು ತಿಳಿದುಕೊಂಡು ನನಗೆ ಬೆಳಗ್ಗೆಯಿಂದ ಸ್ವಲ್ಪ ಅನುಭವ ಆಗುತ್ತಿದೆ. ಎಲ್ಲರೂ ತಮಗೆ ಬೇಕಾದ್ದನ್ನು ಮಾತನಾಡುತ್ತಿದ್ದಾರೆ. ಅದು ಸರಿಯಲ್ಲ ಇದು ಕೊನೆಯ ದಿವಸ ತಾವು ಇಷ್ಟು ದಿವಸದಿಂದ ಕಾರ್ಯಕಲಾಪಗಳನ್ನು ನಡೆಸಿಕೊಟ್ಟಿದ್ದೀರಿ ಬಹಳ ಸಂತೋಷದಿಂದ ಬಹಳ ಆತ್ಮೀಯತೆಯಿಂದ ಇವತ್ತಿನ ದಿವಸ ಚರ್ಚೆ ಮುಗಿಸಿಕೊಂಡು ಹೋಗೋಣ ಎಂದು ಹೇಳಿ ನಾನು ಪುನಃ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಈ ರಾಜ್ಯದ ವಿಧಾನ ಮಂಡಲದ ಬಗ್ಗೆ ಇರುವುದರಿಂದ ಅದರ ಬಗ್ಗೆ ಚರ್ಚೆಮಾಡಿದೆ. ಮಾನ್ಯ ಹೆಗಡೆಯವರು ಈ ಸದನಕ್ಕೆ ದಯಮಾಡಿಸಿದ್ದಾರೆ. ಆ ರೀತಿ ಅವರು ಹೇಳಿದರೇ ಇಲ್ಲವೇ ಎನ್ನುವುದನ್ನು ಅವರೇ ಹೇಳಲಿ ನನ್ನ ಪ್ರಾಮಾಣಿಕವಾದ ಚಿಂತನೆ ತಮ್ಮಲ್ಲಿ ಏನೆಂದರೆ ಅವರು ಆ ರೀತಿ ಹೇಳಿದ್ದರೆ ಅವರು ಇದೇ ಸದನದ ಹಿರಿಯ ಸದಸ್ಯರಾಗಿದ್ದಾರೆ ಎಂದು ನಾನು ಪ್ರಾರಂಭಮಾಡಿದಾಗ ತಾವು ಅದಕ್ಕೆ ನೋಟೀಸ್ ಕಳುಹಿಸಿ ಎಂದು ಹೇಳಿದಿರಿ. ಅದಕ್ಕೆ ನಾನು ನೋಟೀಸ್ ಕಳುಹಿಸಿದ್ದೇನೆಯೇ ಹೊರತು ಇಲ್ಲದಿದ್ದರೆ ನಾನು ನೋಟೀಸ್ ಕಳುಹಿಸುತ್ತಿರಲಿಲ್ಲ.

ಅಧ್ಯಕ್ಷರು:- ಆ ಪ್ರಸ್ತಾವನೆಯನ್ನು ಅಲಿಗೇ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್:- ನಾನು ನೋಟೀಸ್ ಕಳುಹಿಸಿದ್ದೇನೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಅದರ ಬಗ್ಗೆ ತಾವು ಇವತ್ತೇ ಕೊನೆ ಗಳಿಗೆಯಲ್ಲಿತೀರ್ಪು ಕೊಡಬೇಡಿ. ಸಭೆ ಮುಗಿಯುವ ಹೊತ್ತಿನಲ್ಲಿ ತಾವು ತೀರ್ಪು ಕೊಟ್ಟರೆ ಹೇಗೆ? ನಾಳೆ ಪುನಃ ಸಭೆ ಸೇರುವುದಿಲ್ಲ. ಅದ್ದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಸದನದ ಗೌರವವನ್ನು ಎತ್ತಿ ಹಿಡಿಯುವುದರಲ್ಲಿ ಒಂದು ಶಕ್ತಿ ಮತ್ತು ಅಧಿಕಾರ ತಮಗೆ ಇದೆ. ತಾವು ಯಾವ ತರಹ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಯೋಚಿಸಿ ತೆಗೆದುಕೊಳ್ಳಿ ಎಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಇಲಾಖೆ ಬಗ್ಗೆ.

ಅಧ್ಯಕ್ಷರು:- ತಮಗೆ 5 ನಿಮಿಷ ಅವಕಾಶ ಕೊಟ್ಟಿದ್ದು ಸಮಯ ಮುಗಿಯುತ್ತಾ ಬಂದಿದೆ. ತಾವು ಮಾತನಾಡಿ..

ಶ್ರೀ ವಾಟಾಳ್‌ನಾಗರಾಜ್:- ಈಗ ಹೇಳುತ್ತಾರೆ, ಎಷ್ಟು ಬೇಕಾದರೂ ಮಾತನಾಡಿ ಎಂದು ಆಗಲೇ ಏನೋ ಎದ್ದೆದ್ದು ಮಾತನಾಡಿದಾರು. ಅವರು ನಾನು ಸುಮಾರು 67ರಿಂದ ಸದಸ್ಯರಾಗಿದ್ದೇವೆ. ಅವರ ಮರ್ಯಾದೆ ಹೋಯಿತು.

ಶ್ರೀ ಸಿ.ಬೈರೆಗೌಡ:- ನಾನು ಮತ್ತು ನಾಗರಾಜ್‌ರವರು ಆತ್ಮೀಯ ಸ್ನೇಹಿತರು. ನನ್ನ ಮರ್ಯಾದೆ ಹೋದರೆ ಚಿಂತೆ ಇಲ್ಲ ಆದರೆ ಅವರಿಗೂ ಕೂಡ ಇಲ್ಲ.

ಶ್ರೀ ವಾಟಾಳ್‌ನಾಗರಾಜ್:-ಹೆಗಡೆಯವರು ಈ ಸಭೆಗೆ ಮರ್ಯಾದೆ ಇಲ್ಲ ಎಂದು ಹೇಳಿಬಿಟ್ಟಿದ್ದಾರೆ.

ಅಧ್ಯಕ್ಷರು:- ತಾವು ಪುನ: ಪುನ: ಅದನ್ನು ಹೇಳುವುದುಬೇಡ. ನಾನು ಇದರ ಮೇಲೆ ಚರ್ಚೆ ಮುಗಿಯಿತು ಎಂದು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:-ನಮ್ಮ ಮೇಲೆ ಏಕೆ ಸ್ವಾಮಿ ಇಷ್ಟು ಕೋಪ ನಾವೆಲ್ಲ ಮತ್ತೆ ಈ ಸದನಕ್ಕೆ ಗೆದ್ದು ಬರುವಂಥವರು. ತಾವೂ ಬರುವಂತಹವರು. ಮಾನ್ಯ ಅಧ್ಯಕ್ಷರೇ, ಕುಟುಂಬ ಕಲ್ಯಾಣ ಮತ್ತು ಆರೋಗ್ಯ ಇಲಾಖೆಯ ವಿಚಾರ ಬಂದಾಗ ಇದೇ ಸಂದರ್ಭದಲ್ಲಿ ಈ ಸಂಜಯಗಾಂಧಿ ಆಸ್ಪತ್ರೆಯ ಬಗ್ಗೆ ಸಮಗ್ರ ಅವ್ಯವಹಾರಗಳ ಬಗ್ಗೆ ಒಂದು ತನಿಖೆ ಆಗಬೇಕು. ಈ ತನಿಖೆ ಬಹಳ ದೊಡ್ಡ ಮಟ್ಟದ ತನಿಖೆ ಆಗಬೇಕು. ಸಂಜಯಗಾಂಧಿ ಆಸ್ಪತ್ರೆಯಲ್ಲಿ ಭಾರಿ ದೊಡ್ಡ ಅವ್ಯವಹಾರ ನಡೆದಿದೆ. ಅಲ್ಲಿ ಬಡವರು ಯಾರೂ ಹೋಗುವಂತಿಲ್ಲ ನಾನು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಂಜಯಗಾಂಧಿ ಆಸ್ಪತ್ರೆಯಲ್ಲಿ ಅವ್ಯವಹಾರ ಬಹಳ ತೀವ್ರವಾಗಿ ನಡೆದಿದೆ. ಹುದ್ದೆಗಳಿಂದ ಹಿಡಿದು ರೋಗಿಗಳನ್ನು ನೋಡಿಕೊಳ್ಳುವವರೆಗೂ ಸಮಗ್ರವಾಗಿ ಅನ್ಯಾಯ ನಡೆದಿದೆ, ಈ ಅನ್ಯಾಯದ ಬಗ್ಗೆ ಒಬ್ಬ ಹೈಕೋರ್ಟಿನ ನ್ಯಾಯಾಧೀಶರನ್ನು ನೇಮಕ ಮಾಡಿ ತನಿಖೆಯನ್ನು ನಡೆಸಬೇಕಾಗುತ್ತದೆ. ಅದಕ್ಕಿಂತ ಮುಂಚೆ ತಾವು ಇಂದೋ ಅಥವಾ ನಾಳೆಯೋ ಆ ಸಂಜಯಗಾಂಧಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ನಡೆದಿರತಕ್ಕಂಥ ಅನ್ಯಾಯಗಳ ಬಗ್ಗೆ ಮಾನ್ಯಮಂತ್ರಿಗಳು ಪರೀಕ್ಷಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಮ್ಮ ಬಗ್ಗೆ ನನಗೆ ಅಪಾರವಾದಂಥ ವಿಶ್ವಾಸ ಇದೆ. ತಾವು ಇದನ್ನು ನೋಡಿ ಈ ವಿಚಾರವನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಕ್ರಮ ತೆಗೆದುಕೊಳ್ಳುತೀರಿ ಎನ್ನತಕ್ಕಂಥ ನಂಬಿಕೆ ನನಗೆ ಬಹಳ ಇದೆ. ತಾವು ಈ ಕೆಲಸವನ್ನು ಕೂಡಲೇ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಆಸ್ಪತ್ರೆ ಬಹಳ ಹದಗೆಟ್ಟಿದೆ. ಯಾವ ಉದ್ದೇಶದಿಂದ ಯಾವ ಪ್ರಾಮಾಣಿಕ ಚಿಂತನೆಯಿಂದ ಸಂಜಯಗಾಂಧಿಯವರ ಹೆಸರಿನಲ್ಲಿ ಪ್ರಾರಂಭ ಆಯಿತೋ ಆ ಹೆಸರಿಗೆ ಮಸಿ ಬಳಿದಿದ್ದಾರೆ. ಆ ಆಸ್ಪತ್ರೆ ಸಂಪೂರ್ಣವಾಗಿ ಕೆಟ್ಟಿದೆ ಅಲ್ಲಿರತಕ್ಕಂಥ ಡಾಕ್ಟರ್ಸ್ ರಾಜಕೀಯದಿಂದ ಸಂಪೂರ್ಣವಾಗಿ ಕೆಟ್ಟಿದ್ದಾರೆ. ಅಲ್ಲಿ ಹುದ್ದೆಗಳನ್ನು ಸೃಷ್ಟಿಮಾಡುವುದರಲ್ಲಿ ಸಂಪೂರ್ಣವಾಗಿ ಹದಗೆಟ್ಟಿದೆ. ಈ ಎಲ್ಲಾ ಪರಿಸ್ಥಿತಿಯನ್ನು ತಾವು ಚರ್ಚೆ ಮಾಡಿ ನೋಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಡಾ॥ ಎ.ಬಿ.ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣಸಚಿವರು):- ಮಾನ್ಯ ಸದಸ್ಯರು ಸಂಜಯಗಾಂಧಿ ಅಸ್ಪತ್ರೆ ಬಗ್ಗೆ ಹೇಳಿದ್ದಾರೆ. ನಾನು ಸಮಗ್ರವಾಗಿ ವಿಚಾರಣೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈ ಒಂದು ಅಸ್ಪತ್ರೆ ಬಗ್ಗೆ ಸರ್ಕಾರಕ್ಕೂ ಈಗಾಗಲೇ ಮನವಿಗಳು ಬಂದಿದೆ. ಸರ್ಕಾರಕ್ಕೆ ಬಂದಿರತಕ್ಕಂಥ ಮನವಿಗಳನ್ನು ಸಹ ತಾವು ಪರಿಶೀಲನೆ ಮಾಡಿ ಅಲ್ಲಿ ನಡೆದಿರತಕ್ಕಂಥ ಹಗರಣ ಅಲ್ಲಿ ನಡೆದಿರತಕ್ಕಂಥ ಭಷ್ಟಾಚಾರ ಅಲ್ಲಿ ನಡೆದಿರತಕ್ಕಂಥ ಅನ್ಯಾಯ ಸ್ವಜನಪಕ್ಷಪಾತ ಬಹಳ: ಯಾವ ಅಸ್ಪತ್ರೆಯಲ್ಲಿಯೂ ನಡೆದಿಲ್ಲವೇನೋ ಎಂಬ ರೀತಿ ಅಲ್ಲಿ ನಡೆದಿದೆ, ಅದನ್ನು ಸರಿಪಡಿಸತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ. ಇಲ್ಲಿ ರಾಜ್ಯ ವಿಧಾನ ಮಂಡಳದ ಬಗ್ಗೆ ಬಂದಾಗ, ನಮ್ಮ ಶಾಸಕರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳ ಬೇಕಾಗುತ್ತದೆ. ವ್ಯವಸ್ಥೆ ಶಾಸಕರಿಗೆ ಯಾವ ರೀತಿ ಅವರವರ ತಾಲ್ಲೂಕಿನಲ್ಲಿ ಗೌರವ ಸಿಗಬೇಕು ಮತ್ತು ಮನ್ನಣೆ ಸಿಗಬೇಕು ಎನ್ನುವ ಬಗ್ಗೆ ಕೂಡ ನಾವು ಸ್ವಲ್ಪ ಗಮನಿಸಬೇಕಾಗುತ್ತದೆ. ಇದೇ ಸದನದಲ್ಲಿ ನಾನು ಸುಮಾರು ಒಂದು ವಾರದ ಹಿಂದೆ ಶಾಸಕರನ್ನು ಬಿಟ್ಟು ಸರ್ಕಾರಿ ಸಮಾರಂಭಗಳನ್ನು ಮಾಡಬಾರದು ಎಂದು ಹೇಳಿ ಮುಖ್ಯಮಂತ್ರಿಗಳ ಮೇಲೆ ಒತ್ತಾಯ ತಂದಾಗ ಎಲ್ಲಾ ಪಕ್ಷದವರು ಎರಡೂ ಪಕ್ಷದವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಈ ರೀತಿಯ ಅನ್ಯಾಯಗಳು ನಡೆದಿವೆ. ತಾವೇ ತಮ್ಮ ಇಚ್ಛೆ ಬಂದ ಹಾಗೆ ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ, ಮಂತ್ರಿಗಳು ಶಾಸಕರನ್ನು ಕಡೆಗಾಣಿಸಿದ್ದಾರೆಂದು ಮುಖ್ಯಮಂತ್ರಿಗಳಿಗೆ ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲೇ ಒಂದು ನೇರವಾದ ಉತ್ತರವನ್ನು ಕೊಟ್ಟರು. ಯಾವ ಶಾಸಕರನ್ನು ಬಿಟ್ಟು ಯಾವ ಶಾಸಕರನ್ನು ಕರೆಯದೇ ಶಾಸಕರನ್ನು ಕಡೆಗಾಣಿಸಿ ಸರ್ಕಾರದ ಸಮಾರಂಭಗಳನ್ನು ಮಾಡಬಾರದು, ಇದು ಸರ್ಕಾರಿ ಆದೇಶ ಎಂದು ಹೇಳಿದರು. ಇತ್ತೀಚೆಗೆ ನಮ್ಮ ನಂಜನಗೂಡು ಶಾಸಕರಾದ ಮಹದೆವರವರನ್ನು ಕಡೆಗಾಣಿಸಿ ಶಿಕ್ಷಕರ ದಿನಾಚರಣೆಯನ್ನು ನಡೆಸಿ ಅವರನ್ನು ಅವಹೇಳನ ಮಾಡಿದ್ದಾರೆ. ಇದು ಒಂದೇ ಅಲ್ಲ, ಇಂತಹ ನೂರೆಂಟು ಅವಹೇಳನ ಅವರ ಕ್ಷೇತ್ರದಲ್ಲಿ ನಡೆಯುತ್ತಿದೆ. ಇದಕ್ಕೆ ಅವರೇ ನಿದರ್ಶನ, ಅವರು ಮೂಖಪ್ರೇಕ್ಷಕರಾಗಿ ಅಲ್ಲಿ ಕುಳಿತಿದ್ದಾರೆ.

ಅಧ್ಯಕ್ಷರು:- ನಾಗರಾಜರವರೇ, ಮಹದೇವರವರಿಗೇ ಅದನ್ನು ಹೇಳುವ ಸಾಮರ್ಥ್ಯ ಇದೆ. ಅವರು ಹೇಳುತ್ತಾರೆ.

ಶ್ರೀ ಎಂ.ಮಹದೇವ್:- ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದು ಸತ್ಯಾಂಶ. ಕಳೆದ ಮೂರು ದಿವಸಗಳಿಂದ ಸದನ ನಡೆಯುತ್ತಿರುವಾಗಲೇ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ತೀರ್ಮಾನ ತೆಗೆದುಕೊಂಡಿದ್ದನ್ನು ಒಬ್ಬ ತಹಶೀಲ್ದಾರರು ಕಡೆಗಣಿಸಿ ಶಿಕ್ಷಕರ ದಿನಾಚರಣೆಗೆ ಇನವಿಟೇಷನ್ ಪ್ರಿಂಟ್ ಮಾಡಿಸದೇ ನನ್ನನ್ನು ಆ ಸಮಾರಂಭಕ್ಕೆ ಕರೆಯದೇ ಬೇರೆಯವರನ್ನು ಆ ಸಮಾರಂಭಕ್ಕೆ ಕರೆದು ಅವರು ಅಲ್ಲಿ ಬಂದು ಪ್ರಿಸೈಡ್ ಮಾಡುತ್ತಾರೆ. ಅಲ್ಲಿ ಸರ್ಕಾರಿ ಸಮಾರಂಭ ನಡೆಸಿದರೆ ಸರ್ಕಾರಿ ಮೆಷನರಿ ಎಷ್ಟರ ಮಟ್ಟಿಗೆ ಸರ್ಕಾರಕ್ಕೆ ಗೌರವ ಕೊಡುತ್ತಿದೆ ಸರ್ಕಾರಿ

ಆದೇಶವನ್ನು ಎಷ್ಟರ ಮಟ್ಟಿಗೆ ಪಾಲನೆ ಮಾಡುತ್ತಿದೆ ಎನ್ನುವುದು ಅರ್ಥವಾಗುವುದಿಲ್ಲವೇ? ಇಂತಹವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ? ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ್ದನ್ನು ನಾನು ಸಮರ್ಥನೆ ಮಾಡುತ್ತೇನೆ. ಇದು ಶಾಸಕರಿಗೆ ಮಾಡುವ ಅವಹೇಳನ. ಚುನಾಯಿತ ಪ್ರತಿನಿಧಿಗಳ ಬಗ್ಗೆ ಈ ರೀತಿ ಅವಹೇಳನ ಮಾಡುವ ಅಧಿಕಾರಿಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಮಾನ್ಯ ಹರ್ಷಕುಮಾರ ಗೌಡರನ್ನು ಹೆದರಿಸಿ ಕೊಲೆ ಮೊಕದ್ದಮೆ ಹೂಡುತ್ತೇನೆಂದು ಒಬ್ಬ ಅಧಿಕಾರಿ ಹೇಳುತ್ತಾನೆ. ಸರ್ಕಾರಿ ಅಧಿಕಾರಿಗಳು ರಾಜಕೀಯ ಪ್ರೇರಣೆಯಿಂದ ಕೆಲಸ ಮಾಡುವಂತಹ ಸ್ಥಿತಿಯಲ್ಲಿ ಇದ್ದರೆ ಈ ರಾಜ್ಯದಲ್ಲಿ ನಾವು ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ? ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರಿ ಮೆಷಿನರಿ ತಪ್ಪು ಮಾಡಿದಾಗ ರೂಲಿಂಗ್ ಪಾರ್ಟಿಯಾಗಲೀ ವಿರೋಧ ಪಕ್ಷವಾಗಲೀ ಅದರ ಮೇಲೆ ಹಿಡಿತ ತಪ್ಪಿದರೆ ರಾಜ್ಯದ ಜನತೆಗೆ ಅನ್ಯಾಯ ಆಗುತ್ತದೆ. ತಾವು ಅವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ನಮ್ಮ ಕರ್ತವ್ಯ ಲೋಪ ಮಾಡಿದಂತೆ ಆಗುತ್ತದೆ. ತಾವು ಆ ಅಧಿಕಾರಿಯನ್ನು ಸಸ್‌ಪೆಂಡ್‌ಮಾಡಬೇಕು. ಮತ್ತು ಆ ಅಧಿಕಾರಿಯ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕೆ. ಹರ್ಷಕುಮಾರ ಗೌಡ:- ಈವತ್ತು ಪತ್ರ ಕೊಟ್ಟಿದ್ದೇನೆ. ನನ್ನನ್ನು ಕೊಲೆ ಮಾಡುತ್ತೇನೆಂದು ಬೆದರಿಕೆಯನ್ನು ಕರ್ಪೊರೇಷನ್ ಕಮಿಷನರ್ ಹಾಕುತ್ತಿದ್ದಾರೆ. ತಾವು ನಮಗೆ ರಕ್ಷಕರು. ನನಗೆ ರಕ್ಷಣೆ ಕೊಡಿ.

ಅಧ್ಯಕ್ಷರು :- ತಾವು ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಮಹಾದೇವ್:- ನಮ್ಮ ಕಷ್ಟ ಹೇಳಿಕೊಂಡರೆ ಕಡತಕ್ಕೆ ಹೋಗುವುದಿಲ್ಲ ಎಂದರೆ ಇನ್ನೇನು ವಿಚಾರ ಹೇಳಲಿಕ್ಕಾಗುತ್ತದೆ? ಶಾಸಕರ ರಕ್ಷಣೆಯ ಬಗ್ಗೆ ಪ್ರಸ್ತಾಪ ಮಾಡಿದರೆ ನೀವು ಅಲ್ಲಿ ಕಡತದಲ್ಲಿ ಹೋಗುವುದಿಲ್ಲ ಎಂದರೆ ನಾವೇನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಆಗುತ್ತದೆ?

ಅಧ್ಯಕ್ಷರು:- ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ, ತಾವು ಮಾತನಾಡಿ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಸದಸ್ಯರು ಮಾತನಾಡುವಾಗ ಒಂದು ಮಾತು ಹೇಳಿದರು, ಏನೆಂದರೆ ತಮ್ಮ ಜೀವಕ್ಕೂ ಕಮೀಷನರ್‌ರವರಿಂದ ಅಪಾಯವಿದೆ ಎಂದು ಅವರು ಹೇಳಿದ್ದಾರೆ. ಹಾಗಾಗಿ ಅವರಿಗೆ ಅವಕಾಶ ಮಾಡಿಕೊಡಿ. ಒಬ್ಬ ಕಮೀಷನರ್ ಒಬ್ಬ ಎಂಎಲ್‌ಎ ಜೀವಕ್ಕೆ ಥ್ರೆಟ್ ಕೊಟ್ಟಿದ್ದಾನೆಂಬುದರ ಬಗ್ಗೆ ಹೇಳಲು ತಾವು ಅನಂತರ ಅವಕಾಶ ಮಾಡಿಕೊಡಿ, ಏನು ಅನಾಹುತ ನಡೆಯುತ್ತಿದೆ ಎಂಬುದು ಗೊತ್ತಾಗಲಿ.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಶಾಶಕರ ಕರ್ತವ್ಯಗಳು, ಹಕ್ಕು, ನಾವು ನಮ್ಮ ಕ್ಷೇತ್ರಗಳಲ್ಲಿ...

ಪ್ರೊ : ಎಂ.ಡಿ.ನಂಜುಂಡಸ್ವಾಮಿ:- ನಾನು ತಮ್ಮ ಮೂಲಕ ವಾಟಾಳರಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ, ಏನು ಹರ್ಷಕುಮಾರಗೌಡರು ಈಗ ಹೇಳಿದರು, ಆ ಮಾತು ಕೇಳಿದ

ಮೇಲೆ ತಾವು ಪೂರಕ ಅಂದಾಜಿನ ಮೇಲೆ ಮಾತನಾಡುವುದನ್ನು ಬೇಕಾದಕೆ ನಿಲ್ಲಿಸಿ. ಯಾವನೋ ಒಬ್ಬ ಕಾರ್ಪೊರೇಷನ್ ಕಮೀಷನರ್ ಒಬ್ಬ ಶಾಸಕನಿಗೆ ಕೊಲೆ ಮಾಡುತ್ತೇನೆಂದು ಹೇಳುತ್ತಿದ್ದಾನೆಂದು ಅವರು ಹೇಳುವಾಗ ಪೂರಕ ಅಂದಾಜು ತೆಗೆದುಕೊಂಡು ಏನು ಮಾಡುತ್ತೀರಿ? ಇದರ ಬಗ್ಗೆ ಅಧ್ಯಕ್ಷರು ಗಮನಹರಿಸಿ ಅದರ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ಶಾಸಕರ ಸಂಬಳ, ಮಂತ್ರಿಗಳ ಸಂಬಳದ ಬಗ್ಗೆ ಹೇಳಿದ್ದೀರಿ, ನಮಗೆಲ್ಲಾ ಯಾತಕ್ಕೆ ಸಂಬಳ ಕೊಡುತ್ತಿರುವುದು ನೀವು? ಇಲ್ಲಿ ನಾವ್ಯಾಕೆ ಬಂದಿದ್ದೇವೆ? ನಮ್ಮ ಹಕ್ಕು ವ್ಯವಸ್ಥೆಗಳೇನು? ನಮಗೆ ರಕ್ಷಣೆ ಏನು, ಇವೆಲ್ಲಾ ಇದರಲ್ಲಿ, ಬರುತ್ತದೆ. ಅದ್ದರಿಂದ ನಾನು ಮಾತನಾಡುವಾಗ ಮಾನ್ಯ ಹರ್ಷಕುಮಾರಗೌಡರು ಒಂದು ಪ್ರಮುಖ ಪ್ರಶ್ನೆ ಎತ್ತಿ ತಮ್ಮ ಗಮನಕ್ಕೆ ತಂದಿದ್ದಾರೆ. ಒಬ್ಬ ಅಧಿಕಾರಿ...

ಅಧ್ಯಕ್ಷರು:- ತಾವು ಪೂರಕ ಅಂದಾಜಿನ ಮೇಲೆ ಮಾತನಾಡಿ. ಹರ್ಷಕುಮಾರಗೌಡರು ನನಗೊಂದು ಪತ್ರ ಬರೆದಿದ್ದಾರೆ; ಅದನ್ನು ನೋಡುತ್ತೇನೆ, ಅವರ ಪರವಾಗಿ ನೀವು ಹೇಳುವ ಅವಶ್ಯಕತೆಯಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದು ನನ್ನದೇ ಪ್ರಶ್ನೆ; ಎಲ್ಲ ಶಾಸಕರ ಪರವಾಗಿ ಶಾಸನಸಭೆಯಲ್ಲಿ ಮಾತನಾಡುತ್ತಿದ್ದೇನೆ, ಶಾಸಕರ ಕರ್ತವ್ಯಗಳೇನು, ಹಕ್ಕುಗಳೇನು, ನಮ್ಮ ಹಕ್ಕನ್ನು ಯಾವುದೇ ನಿರ್ಬಂಚನೆಯಿಲ್ಲದೆ ಯಾವರೀತಿ ನಾವು ಚಲಾಯಿಸಬೇಕು?

ನಾವು ಕೆಲಸ ಮಾಡುವಾಗ ಬರುವಂತಹ ಇಂತಹ ಅಡ್ಡಿ ಆತಂಕಗಳು, ಉದಾಹರಣೆಗೆ ಬಹಳ ಗಂಭೀರವಾದ ವಿಷಯವೆಂದರೆ ಮೈಸೂರಿನ ಶಾಸಕರ ಮೇಲೆ ತೀವ್ರವಾದ ಒಂದು ಕೊಲೆ ಬೆದರಿಕೆಯನ್ನು ಒಬ್ಬ ಅಧಿಕಾರಿ ಹಾಕುತ್ತಾರೆ ಎಂದು ಒಂದು ಕಡೆ. ನಂಜನಗೂಡಿನ ಶಾಸಕರನ್ನು ಸಮಾರಂಭಕ್ಕೆ ಕರೆಯದಿರುವುದು ಒಂದು ಕಡೆ, ಚಾಮರಾಜನಗರಕ್ಕೆ ಎಲ್ಲಾ ಮಂತ್ರಿಗಳು ಹೋಗಿ ಅಲ್ಲಿಯ ಶಾಸಕರನು ಬಿಡುತ್ತೇವೆನ್ನುವುದು ಸರಿಯಲ್ಲವೆಂದು ಸಂಸದೀಯ ಸಚಿವರಾಗಿ ಎಷ್ಟು ಸಾರಿ ಹೇಳಿದ್ದೀರಿ, ಈ ಸದನದಲ್ಲಿ ತಾವು ಹಿರಿಯ ಸಚಿವರಾಗಿದ್ದೀರಿ ಶಾಸಕರು ಯಾವುದೆ ಪಕ್ಷದವರಾಗಿರಲಿ, ಆ ಕ್ಷೇತ್ರದಲ್ಲಿ ಆ ಶಾಸಕರಿಗೆ ಎಷ್ಟು ಗೌರವ ಸಿಗಬೇಕೆಂಬುದನ್ನು ತಾವು ನೋಡಬೇಕು. ಒಂದು ನನಗನ್ನಿಸುತ್ತದೆ, ಇಂತಹ ಮಹತ್ವದ ಪ್ರಶ್ನೆ ಇವತ್ತು ಉದ್ಭವವಾದಾಗ ಈ ಪೂರಕ ಅಂದಾಜುಗಳ ಪ್ರಶ್ನೆಗಿಂತ ಹೆಚ್ಚಾಗಿ ಕೊಲೆಯ ಬೆದರಿಕೆ ಬಗ್ಗೆ ಚರ್ಚೆಯಾಗ ಬೇಕೇ ಹೊರತು ಪೂರಕ ಅಂದಾಜುಗಳ ಚರ್ಚೆಯನ್ನು ಬೇಕಾದರೆ ಬದಿಗೋತ್ತೋಣ. ಬೇಕಾದರೆ ಇದನ್ನು ಮತಕ್ಕೆ ಹಾಕಿ; ನಾವು ನಿಮಗೆ ಮತ ಕೊಡುತ್ತೇವೆ. ಆದರೆ ಒಬ್ಬ ಶಾಸಕರಿಗೆ ನೀಡಿರುವ ಬೆದರಿಕೆ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಯಾರೋ ರಸ್ತೆಯಲ್ಲಿ ಹೋಗುವವರು ಹೇಳಿದ್ದಲ್ಲ, ಈ ಸದನದ ಶಾಸಕರು ಗಂಭೀರವಾಗಿ ಏನು ತಮ್ಮ ಪ್ರಾಣಕ್ಕೆ ರಕ್ಷಣೆ ಇಲ್ಲವೆಂದು ಹೇಳಿದ್ದಾರೆ, ಇದನ್ನು ಲಘುವಾಗಿ ತೆಗೆದುಕೊಳ್ಳುವಂತಿಲ್ಲ. ಅಧ್ಯಕ್ಷರು ಅವರಿಗೆ ರಕ್ಷಣೆ ಕೊಡಬೇಕು, ಆ ಜವಾಬ್ದಾರಿ ಆ ಶಕ್ತಿ ತಮಗಿದೆ. ಇದರ ಬಗ್ಗೆ ತಾವು ಇವತ್ತೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು

ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೊನೆಯದಾಗಿ ಅಧ್ಯಕ್ಷರೇ, ಇಲ್ಲಿ ಯಾವು ಯಾವುದೋ ಬೇಡಿಕೆಗಳಿಗೆ ತಮಗೆಷ್ಟು ಹಣಬೇಕೆಂದು ಕೇಳಿದ್ದೀರಿ, ನಾನು ತಿಳಿದಿರುವಮಟ್ಟಿಗೆ ಇದು ಕಡೇ ದಿವಸದ ಶಾಸನಸಭೆ ಇರುವುದರಿಂದ ಮೂರು ದಿನದಿಂದ ನಿರಂತರವಾಗಿ ಗಂಧದ ಕಳ್ಳಸಾಗಾಣಿಕೆದಾರ ವೀರಪ್ಪನ್ ಶರಣಾಗತನಾಗುತ್ತಿದ್ದೇನೆ ಎಂದು ಹೇಳುತ್ತಿರುವುದು ಒಂದೇ ಸಮನೆ ಪತ್ರಿಕೆಯಲ್ಲಿ ಬರುತ್ತಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯ ಬಹಳ ಪ್ರಾಮುಖ್ಯ ಇರಬಹುದು. ಆದರೆ ಇಲ್ಲಿ ಚರ್ಚೆಯಾಗಬೇಕಾದುದ್ದು ಪೂರಕ ಅಂದಾಜುಗಳ ಮೇಲೆ.

ಶ್ರೀ ವಾಟಾಳ್ ನಾಗರಾಜ್ :- ಅಲ್ಲ ಸ್ವಾಮಿ ನಾಳೆ ಇದರ ಬಗ್ಗೆ ಮಾತನಾಡಲು ಅವಕಾಶ ಇಲ್ಲ ತಮಗೆ ಗೊತ್ತಿರುವ ಹಾಗೆ ಈ ಪತ್ರಿಕೆಗಳಲ್ಲಿ.

ಅಧ್ಯಕ್ಷರು:- ನಾನು ಇಲ್ಲಿಗೆ ಚರ್ಚೆ ಮುಕ್ತಾಯವಾಯಿತೆಂದು ಹೇಳಬೇಕಾಗುತ್ತದೆ. ಏಕೆಂದರೆ ನೀವು ಪೂರಕ ಅಂದಾಜುಗಳ ಮೇಲೆ ಚರ್ಚೆ ಮಾಡುವುದನ್ನು ಬಿಟ್ಟು, ವೀರಪ್ಪನ್ ಬಗ್ಗೆ ಹೇಳುತ್ತಿದ್ದೀರಿ. ವೀರಪ್ಪನ್ ಬಗ್ಗೆ ತಾವು ಮಾತಾಡಿದ್ದೆಲ್ಲಾ ರೆಕಾರ್ಡಿನಲ್ಲಿದೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮನ್ನು ನೋಯಿಸಬೇಕೆಂದು ನಾನು ಹೇಳುತ್ತಿಲ್ಲ. ಇನ್ನು ಯಾರ ಮುಂದೆ ಹೇಳಿಕೊಳ್ಳೋಣ ನಾಳೆ? ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ ಆಗುತ್ತದೆ. ಈ ಸಭೆ ಇರುವುದರಿಂದ ಸ್ವಲ್ಪ ಧ್ವನಿಯೆತ್ತುವುದಕ್ಕೆ ಅವಕಾಶವಾಗಿದೆ, ಈ ಸಭೆ ಸೇರುವುದು ವರ್ಷದಲ್ಲಿ ಎರಡು ಸಲ, ಮೂರು ಸಲ ಆಗಿಹೋಗಿದೆ, ಈ ಸಭೆಯ ಶಕ್ತಿಯು ಸಂಪೂರ್ಣ ಕಳೆದುಹೋಗಿದೆ. ಆದ್ದರಿಂದ ಮಾನ್ಯ ಸಂಸದೀಯ ಸಚಿವರು ಇಲ್ಲಿದ್ದಾರೆ, ಇದಕ್ಕೆ ಎಷ್ಟು ಕೋಟಿ ಖರ್ಚುಮಾಡಿದ್ದೀರಿ, ಆ ಗಡಿಭದ್ರತಾ ಪಡೆ ಎಲ್ಲಿ ಹೋಯಿತು, ಅವನು ಶರಣಾಗುತ್ತಾನೆಂಬ ಬಗ್ಗೆ ಸರ್ಕಾರದ ನೀತಿಯೇನು? ಸರ್ಕಾರಕ್ಕೆ ಅವನಿಂದ ಪತ್ರ ಬಂದಿದೆಯೇ? ಈ ಬಗ್ಗೆ ಸರ್ಕಾರದ ನಿರ್ಧಾರವೇನು ಎಂಬ ಬಗ್ಗೆ ಸರ್ಕಾರವೇ ನೇರವಾಗಿ ಒಂದು ಹೇಳಿಕೆ ಕೊಡಬೇಕಾಗಿತ್ತು. ಮತ್ತು ಅಲ್ಲಿನ ಟಾಸ್ಕ್‌ಫೋರ್ಸ್ ಸಮಿತಿಯ ಅಧಿಕಾರಿ ಇದನ್ನೆಲ್ಲಾ ಒಪ್ಪಿಕೊಂಡಿದ್ದಾರೆ. ವೀರಪ್ಪನ್ ಈಗ ಶರಣಾಗುತ್ತೇನೆಂದು ನಮಗೆಲ್ಲಾ ನಂಬಿಕೆ ಇದೆ ಹಾಗೆಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಈ ಟಾಸ್ಕ್‌ಫೋರ್ಸ್ ಅಧಿಕಾರಿ ಯಾರು ಸ್ವಾಮಿ? ಸರ್ಕಾರದ ಅಧಿಕಾರಿ ಆತ ಹೇಳಿದ ಮೇಲೆ ಸರ್ಕಾರಕ್ಕೆ ಮಾಹಿತಿ ಬಂದಿರಬೇಕು. ಅದನ್ನು ಸದನದಲ್ಲಿರುವಾಗ ಅವರು ಹೇಳಬೇಕಾಗಿದೆ. ಆದ್ದರಿಂದ ಈ ಮಾತನ್ನು ಅವರಿಗೆ ಹೇಳುತ್ತಾ, ಇದರ ಬಗ್ಗೆ ನಡೆದಿರುವುದು ಏನು ಖರ್ಚಾಗಿರುವುದೆಷ್ಟು, ಗಡಿ ಭದ್ರತಾಪಡೆಯವರು ಎಷ್ಟು ಜನ ಹೊರಟುಹೋದರು, ಈಗ ಎಷ್ಟಿದ್ದಾರೆ, ಅವರಿಗೆ ಖರ್ಚಾದ ಹಣವೆಷ್ಟು ಇವುಗಳ ಬಗ್ಗೆ ಎಲ್ಲ ವಿವರಗಳಿಂದ ಕೂಡಿದ ಉತ್ತರವನ್ನು ಸದನದಲ್ಲಿ ಕೊಡಬೇಕೆಂದು ಹೇಳಿ ಮಾತನ್ನು ಮುಗಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು:- ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜಿನ ಮೇಲೆ ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ

ಭಾಗವಹಿಸಿ ಅನೇಕ ಪ್ರಮುಖ ವಿಷಯಗಳನ್ನು ಪ್ರಸ್ತಾಪನೆ ಮಾಡಿದ್ದಾರೆ. ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಪೂರಕ ಅಂದಾಜು ಮಂಡಿಸತಕ್ಕದ್ದು ಈ ವರ್ಷಕ್ಕೆ ಮಾತ್ರ ವಿಶೇಷವಾಗಿ ಬಂದುದಲ್ಲ. ಪ್ರತಿ ವರ್ಷ ಕೂಡ ಪೂರಕ ಅಂದಾಜುಗಳನ್ನು ಮಂಡಿಸಿ ಸಭೆಯ ಒಪ್ಪಿಗೆ ಪಡೆಯಲಾಗುತ್ತದೆ. ಪೂರಕ ಅಂದಾಜಿನ ಬಗ್ಗೆ ಹೇಳವುದಾದರೆ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ಏನು ಹಣ ನಿಗದಿಯಾಗಿತ್ತು ಅದಕ್ಕಿಂತ ಹೆಚ್ಚು ಹಣ ಖರ್ಚು ಮಾಡಿರುವುದರಿದ ಸಭೆಯ ಒಪ್ಪಿಗೆ ಪಡೆಯಬೇಕಾಗುತ್ತದೆ. 191 ಕೋಟಿ ಚಿಲ್ಲರೆ ಹಣವನ್ನು ಈ 6 ತಿಂಗಳಲ್ಲಿ ಅಯವ್ಯಯದಲ್ಲಿ ನಿಗದಿಯಾದುದಕ್ಕಿಂತ ಹೆಚ್ಚಾಗಿ ಖರ್ಚು ಮಾಡಿದೆ. ಮತ್ತು 93-94 ರಲ್ಲಿ ಏನು ಹೆಚ್ಚು ಖರ್ಚಾಗಿದೆ ಅದಕ್ಕೆ ಸಭೆಯ ಒಪ್ಪಿಗೆ ಕೇಳುತ್ತಿದ್ದೇವೆ. ಒಂದು ಕಡೆ 191 ಚಿಲ್ಲರೆ ಕೋಟಿ ಹಣವನ್ನು ವಿಶೇಷವಾಗಿ ಹೆಚ್ಚುವರಿ ಸರಕಾರ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಖರ್ಚು ಮಾಡಿದೆ. ಮಾನ್ಯ ಸದಸ್ಯರು ಇದರಿಂದ ಸರಕಾರದ ದಿವಾಳಿ ತೋರಿಸುತ್ತದೆಂಬ ಮಾತನ್ನು ಅಡಿದರೆ ಅದು ಪರಸ್ಪರ ವಿರೋಧಾಭಾಸವಾಗುತ್ತದೆನ್ನುವುದನ್ನು ನೆನಪಿಗೆ ತರುತ್ತೇನೆ. ಅಭಿವೃದ್ಧಿ ಶೀಲ ಸರಕಾರ ಯಾವುದೇ ಇದ್ದರೂ ಕೂಡ ಹೆಚ್ಚುವರಿ ಖರ್ಚನ್ನು ಆಯಾ ಇಲಾಖೆಯ ಅವಶ್ಯಕತೆ ಅರಿತು ಜನರ ಅವಶ್ಯಕತೆ ಅರಿತು ಖರ್ಚು ಮಾಡಬೇಕಾಗುತ್ತದೆ. ಆ ರೀತಿ ಇದು ಖರ್ಚಾಗಿದೆ. ಆದ್ದರಿಂದ ಇದರಲ್ಲಿ ಯಾವುದೇ ವಿಧವಾದಂತಹ ದಾರಿ ತಪ್ಪಿದ ಕೆಲಸವಾಗಿಲ್ಲ. ಅಭಿವೃದ್ಧಿಯ ಬೆಳವಣಿಗೆಗೋಸ್ಕರವಾಗಿ ಖರ್ಚಾಗಿದೆ. ಅಶ್ರಯ ಯೋಜನೆಯಲ್ಲಿ 12 ಕೋಟಿಗಿಂತ ಹೆಚ್ಚು ಖರ್ಚಾಗಿದೆ. ಇದು ಸ್ವಾಗತ ಮಾಡಬೇಕಾದ ವಿಷಯವೇ ಹೊರತು ಟೀಕೆ ಮಾಡಬೇಕಾದ ವಿಷಯವಲ್ಲ. ಕಳೆದ ವರ್ಷದಲ್ಲಿ ಅಂದರೆ 92-93 ರಲ್ಲಿ 630 ಮನೆಗಳಾಗಿದ್ದರೆ ಈ ವರ್ಷ ಅಂದರೆ ಒಂದೂವರೆ ವರ್ಷದಲ್ಲಿ 1 ಲಕ್ಷ ಮನೆಗಳ ಕೆಲಸ ಮುಗಿಸಿ ಫಲಾನುಭವಿಗಳಿಗೆ ಕೊಡಲಾಗಿದೆ. ಇದರ ವಿವರಗಳನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳು ಬೇಡಿಕೆಗಳ ಮೇಲೆ ಬಂದಂತಹ ಚರ್ಚೆಯಲ್ಲಿ ವಿವರವಾದ ಉತ್ತರವನ್ನು ಸುಮಾರು 2 ಗಂಟೆಗಳ ಕಾಲ ಕೊಟ್ಟಿದ್ದಾರೆ. ಅದನ್ನೇ ನಾನು ಮತ್ತೆ ಹೇಳಬಯಸುವುದಿಲ್ಲ. ಅದೇ ಉತ್ತರ ಇದಕ್ಕೂ ಎಂದು ತಾವು ಭಾವನೆ ಮಾಡಬಹುದು. ಮಾನ್ಯ ದೇಶಪಾಂಡೆಯವರು ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯಲ್ಲಿರತಕ್ಕಂತಹ ಪಟೇಲರು ವಂಶಾನುಗುಣವಾಗಿ ನೇಮಕವಾದವರಲ್ಲ, ಅವರಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಿ ಎಂದು ಹೇಳಿದ್ದಾರೆ. ಅದನ್ನು ಸರಕಾರ ಪರಿಶೀಲನೆ ಮಾಡುತ್ತದೆ. ಮತ್ತು ಆದಾಯದ ಅಧಾರದ ಮೇಲೆ ಈ ಪೆನ್‌ಷನ್ ನಿಗದಿ ಮಾಡಿದ್ದಾರೆ, ಈ ನಿಗದಿಯ ಮಿತಿಯನ್ನು ತೆಗೆಯಬೇಕೆಂದು ಏನು ಹೇಳಿದ್ದಾರೆ, ಅದನ್ನೂ ಸರಕಾರ ಪರಿಶೀಲನೆ ಮಾಡುತ್ತದೆ. ಪಾರ್ಲಿಮೆಂಟ್ ಸದಸ್ಯರಿಗೋಸ್ಕರವಾಗಿ ಕೇಂದ್ರ ಸರಕಾರ ಒಂದೊಂದು ಕೋಟಿ ರೂಪಾಯಿಯನ್ನು ಒಂದೊಂದು ಪಾರ್ಲಿಮೆಂಟ್ ಕ್ಷೇತ್ರಕ್ಕೆ ಕೊಟ್ಟಿದೆ ಎಂದು ತಿಳಿಸಿದರು. ಇದು ಸ್ವಾಗತ ಮಾಡಬೇಕಾದ ವಿಚಾರ. ನಮ್ಮ ರಾಜ್ಯ ಸರಕಾರ ಮಾಡಿದಂತಹ ಖರ್ಚಿಗೆ ಹೆಚ್ಚಿಗೆ ಖರ್ಚನ್ನು ಅಭಿವೃದ್ಧಿ ಕಾರ್ಯಗಳಿಗೋಸ್ಕರ ಪಾರ್ಲಿಮೆಂಟ್ ಸದಸ್ಯರ ಮೂಲಕ ಅವರು ಕೊಡಬಯಸಿದ್ದಾರೆ. ನಮ್ಮ ರಾಜ್ಯ ಸರಕಾರದವರೂ ಕೂಡ ನಮ್ಮ ಶಾಶನ ಸಭಾ ಸದಸ್ಯರ ಮುಖಾಂತರ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಹಣ ಕೊಡುತ್ತಿದ್ದಾರೆ. ಆದ್ದರಿಂದ ಇದು

ಪಾರ್ಲಿಮೆಂಟ್ ಸದಸ್ಯರಿಗೆ ಕೊಟ್ಟಿರುವ ಹಣ ಅಲ್ಲ. ಅವರು ಅಯಾಯ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡಿದ್ದರೆ ಅಲ್ಲಿಂದ ಹಣ ಬರುವುದು ತಡವಾದಾಗ ರಾಜ್ಯ ಸರಕಾರದವರು ಮುಂಗಡ ಕೊಟ್ಟು ಕೇಂದ್ರ ಸರಕಾರದಿಂದ ವಸೂಲು ಮಾಡುತ್ತಾರೆ.....

ಶ್ರೀ ಜಿ.ಸಿ.ಮಧುಸ್ವಾಮಿ:- ಜಿಲ್ಲೆಗೆ ಬರುತ್ತಿರುವ ಹಣದಲ್ಲಿ 1 ಕೋಟಿಯನ್ನು ಅವರು ಹೇಳಿದ ಕೆಲಸಗಳಿಗೆ ಖರ್ಚು ಮಾಡಿ ಎಂದು ಹೇಳಿದ್ದಾರೆ. ಅಡಿಷನಲ್ ಅಗಿ ಗ್ರ್ಯಾಂಟ್ ನೀಡಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಈ ಯೋಜನೆಗೆ ರಾಜ್ಯ ಸರಕಾರ ಕೊಟ್ಟಿರುವುದು ಮುಂಗಡ ಹಣ. ಕೇಂದ್ರ ಸರಕಾರದಿಂದ ಬಂದಾಗ ಅಡ್ಜಸ್ಟ್ ಮಾಡಿಕೊಳ್ಳಬೇಕಾಗುತ್ತದೆ. ಮಾನ್ಯ ಈಶ್ವರಪ್ಪನವರು ಮುಖ್ಯವಾದ ಅಂಶವನ್ನು ಹೇಳಿದರು. ಶಾಲೆಗಳ ಕಟ್ಟಡಗಳ ರಿಪೇರಿ ಕೆಲಸದ ಬಗ್ಗೆ ಏನು ಹೇಳಿದರು, ಇದು ಮುಖ್ಯವಾಗಿ ಆಗಬೇಕಾದದ್ದು. ಜಿಲ್ಲಾ ಗ್ರಾಮಾಂತರ ಶಾಲೆಗಳಿಗೆ ಜಿಲ್ಲಾಪರಿಷತ್ತಿನವರು ಪಟ್ಟಣಗಳಲ್ಲಿರತಕ್ಕಂತಹ ಶಾಲೆಗಳಿಗೆ ಅಯಾ ಪುರಸಭಾ ಮತ್ತು ನಗರಸಭೆ ಮೂಲಕ ರಿಪೇರಿ ಮಾಡತಕ್ಕ ಜವಾಬ್ದಾರಿ ವಹಿಸಬೇಕೆಂದು ಈಗಾಗಲೇ ಸುತ್ತೋಲೆ ಹೋಗಿದೆ. ಇದಕ್ಕೆ ಬೇಕಾದಂತಹ ಹಣ ಬಿಡುಗಡೆ ಮಾಡುವುದಕ್ಕೆ ಸರಕಾರ ಈಗಾಗಲೇ ವ್ಯವಸ್ಥೆ ಮಾಡಿದೆ. ಇನ್ನೂ ಕೂಡ ಹೆಚ್ಚಾಗಿ ಈ ಶಾಲೆಗಳ ರಿಪೇರಿಗೆ ಅದ್ಯತೆ ಕೊಟ್ಟು ಈ ಕೆಲಸ ಮಾಡಿಸುವುದಕ್ಕೆ ಸರಕಾರ ತಯಾರು ಇದೆ.

ಶ್ರೀ ಕೆ.ಎಸ್ .ಈಶ್ವರಪ್ಪ:- ಈ ಸುತ್ತೋಲೆ ಯಾವಾಗ ಹೋಗಿದೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ನಾನು ಇಲಾಖೆಯ ಮುಖಾಂತರ ಈ ವಿಷಯ ತಿಳಿದುಕೊಂಡು ನಾನು ಹೇಳುತ್ತಿದ್ದೇನೆ. ಈಗಾಗಲೇ ಇರತಕ್ಕ ಯೋಜನೆಗಳಲ್ಲೇ ಈ ಶಾಲೆಯ ಕಟ್ಟಡವನ್ನು ಹೊಸದಾಗಿ ಕಟ್ಟುವುದು ಮತ್ತು ರಿಪೇರಿಗೆ ಹಣವನ್ನು ಬಜೆಟ್‌ನಲ್ಲಿ ಒದಗಿಸಲಾಗಿದೆ. ಅದು ಸಾಲದೇ ಇದೆ ಎನ್ನುವ ಭಾವನೆ ತಮ್ಮ ಭಾವನೆಯಿಂದ ವ್ಯಕ್ತವಾಯಿತು. ಅದಕ್ಕೆ ಸರ್ಕಾರ ಪರಿಶೀಲನೆ ಮಾಡಿ ಹೆಚ್ಚಿಗೆ ಹಣ ಬೇಕಾದರೆ ಅದನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತದೆ. ಮತ್ತೆ ರಾಜಕೀಯವಾಗಿ ಹೆಚ್ಚಿಗೆ ಮಂತ್ರಿಗಳಿಗೋಸ್ಕರ ಖರ್ಚು ಮಾಡಿದ್ದೀರಿ ಎಂದು ಹೇಳಿದ್ದಾರೆ. ಅದಕ್ಕೇನು ಉತ್ತರ ಅವಶ್ಯಕತೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಬೈರೇಗೌಡರು ಮಾತನಾಡುತ್ತಾ ಸುಮಾರು 20 ಕೋಟಿ ರೂಪಾಯಿ ದುರ್ವ್ಯಯ ಅಗಿದೆ ಎನ್ನುವುದನ್ನು ಹೇಳಿದರು. ಅವರು ತಮ್ಮಲ್ಲಿರತಕ್ಕಂಥ ಕಾಗದಪತ್ರಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಅದರ ಬಗ್ಗೆ ಪರಿಶೀಲಿಸುತ್ತೇವೆ.

ಶ್ರೀ ಸಿ.ಬೈರೇಗೌಡ:- ಸರ್ಕಾರದ ಕಡತದಲ್ಲಿ ಏನು ಇದೆ ಎಂದು ಹೇಳುವುದನ್ನು ಒಂದೇ ಒಂದು ಪ್ಯಾರಾದಲ್ಲಿ ನಾನು ಓದುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಈಗಾಗಲೇ ಮಾನ್ಯ ಸದಸ್ಯರುಗಳು ಸಾಕಷ್ಟು ಹೇಳಿದ್ದಾರೆ. ಅವರಲ್ಲಿರುವುದನ್ನು ಕಳುಹಿಸಿಕೊಡಲಿ.

ಶ್ರೀ ಸಿ.ಬೈರೇಗೌಡ:- ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ತಾವು ಕಳುಹಿಸಿಕೊಡದ್ದಿರೂ ಅದು ಏನು ಇದೆ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಿಮ್ಮ ಗಮನಕ್ಕೆ ತರುತ್ತೇನೆ. ''ಪೌರಾಡಳಿತ ನಿರ್ದೇಶಕರಾದ ಶ್ರೀ ಎಂ.ಜಿ.ಹಾಲಪ್ಪನವರು, ಅಖಿಲಭಾರತ ಸೇವೆ, ಶ್ರೀ ರಾಮುಸ್ವಾಮಿ, ಉಪನಿರ್ದೇಶಕರು, ಅಕಾಂಟ್ಸ್ ಮತ್ತು ಅಡಿಟ್, ಪಾರಾಡಳಿತದ ನಿರ್ದೇಶನಾಲಯ, ಹಾಲಿ ರಜೆಯ ಮೇಲೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೌರಾಡಳಿತ ನಿರ್ದೇಶನಾಲಯದ ಇತರೇ ಸಿಬ್ಬಂದಿ ವರ್ಗ ಮತ್ತು ಸಂಬಂಧಪಟ್ಟ ಪುರಸಭೆಗಳ ಮುಖ್ಯಾಧಿಕಾರಿಗಳು(ಚೀಫ್ ಆಫೀಸರ್ಸ್) ಮತ್ತು ತಾಂತ್ರಿಕ ಸಿಬ್ಬಂದಿಯ ಮೇಲೆ ಲಗತ್ತಿಸಲಾದ ಟಿಪ್ಪಣಿಯಲ್ಲಿ ಹೇಳಿರುವಂಥ ವಿಷಯಗಳನ್ನು ವಿಶೇಷವಾಗಿ ಕಂಡಿಕೆ 36 ಮತ್ತು 44 ರಿಂದ 48ರ ಅಧಾರದ ಮೇಲೆ ಶಿಸ್ತಿನ ಕ್ರಮ ಜರುಗಿಸುವುದು ಎಂದು ಇದೆ. ಇದು ಅವರ ಕಡತದಲ್ಲೇ ಇದೆ. ಮುಖ್ಯಮಂತ್ರಿಗಳಿಗೆ ಕಾಗದವನ್ನು ಕಳುಹಿಸಿದ್ದಾರೆ. ಆದರೂ ಸಹ ನಾನು ಇದರ ಪ್ರತಿಯನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದೇನೆ. ಅವರು ಸೂಚನೆ ಮಾಡಿರುವ ರೀತಿ ಕ್ರಮ ಏತಕ್ಕೆ ತೆಗೆದುಕೊಳ್ಳಲ್ಲ, ಎನ್ನತಕ್ಕಂಥದ್ದೇ ನನ್ನ ಆರೋಪ. ಅದಕ್ಕೆ ಉತ್ತರಕೊಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವ ವಿಷಯ ಬಹಳ ಗಂಭೀರವಾದುದು ಹಾಗೂ ಮುಖ್ಯವಾದುದು ಎಂದು ಭಾವನೆ ಮಾಡೋಣ. ಆದರೆ ಪೂರಕ ಅಂದಾಜಿನ ಚರ್ಚೆಯಲ್ಲಿ ಅದು ಬರುವುದಿಲ್ಲ. ಪ್ರತ್ಯೇಕವಾಗಿ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರತ್ಯೇಕವಾಗಿ ಚರ್ಚೆ ಮಾಡೋಣ ಎಂದರೆ ಇವತ್ತು ಸಭೆ ಮುಗಿಯುತ್ತಿದೆ. ಪ್ರತ್ಯೇಕವಾಗಿ ಎಂದರೆ ಯಾವಾಗ? ಸಂಜೆ ಒಳಗಾಗಿ ಇದರ ಬಗ್ಗೆ ಪ್ರತ್ಯೇಕವಾದಂಥ ಹೇಳಿಕೆಯನ್ನು ಮಾಡುವುದಕ್ಕೆ ತಾವು ದಯವಿಟ್ಟು ಅವರಿಗೆ ಅವಕಾಶ ಕೊಡಿ. ಏಕೆಂದರೆ ಇದನ್ನು ಇವತ್ತು ಇಷ್ಟು ಸುಲಭವಾಗಿ ಲಕ್ಷ. ಎರಡು ಲಕ್ಷ ರೂಪಾಯಿಯಾಗಿದ್ದರೆ ಏನೊ ಆಯಿತು ಎಂದು ಹೋಗಬಹುದು. ಆಡಳಿತ ನಡೆಸುವಾಗ ಹೆಚ್ಚು ಕಡಿಮೆ ಆಗುತ್ತಿರುತ್ತದೆ. ಇಲ್ಲಿ ಕೋಟ್ಯಾಂತರ ರೂಪಾಯಿ ದುರ್ವ್ಯವಹಾರ ಆಗಿದೆ ಎನ್ನುವುದರ ಬಗ್ಗೆ ಇವತ್ತು ಅಧಿಕೃತವಾದ ಧಾಖಲೆಯನ್ನು ನಾನು ಕೊಡುತ್ತಿದ್ದೇನೆ. ಈಗಾಗಲೇ ಪ್ರತಿಯನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿದ್ದೇನೆ. ಇದು ಅವರ ಕಡತದಲ್ಲಿರುವಂಥದ್ದು. ಇದು ಮುಖ್ಯಮಂತ್ರಿಗಳ ಕಛೇರಿಯಲ್ಲಿದೆ. ಅವರಿಗೆ ನೇರವಾಗಿ ಕಳುಹಿಸಿದ್ದಾರೆ. ಆದ್ದರಿಂದ ಇದರ ಮೇಲೆ ಕ್ರಮ ತೆಗೆದುಕೊಂಡಿರುವುದರ ಬಗ್ಗೆ ತಾವು ಈಗ ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲದಿದ್ದರೆ ಸಂಜೆಯೊಳಗಾದರೂ ಇದರ ಬಗ್ಗೆ ಉತ್ತರವನ್ನು ಕೊಡಿಸುವುದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಆದು ಪೂರಕ ಅಂದಾಜಿನಲ್ಲಿ ಈ ವಿಷಯ ಬರದೇ ಇರುವುದರಿಂದ ಆ ವಿಷಯಕ್ಕೆ ನಾನು ಉತ್ತರ ಕೊಡುವುದಕ್ಕೆ ನಾನು ಸಿದ್ಧವಾಗಿಲ್ಲ.

ಅಧ್ಯಕ್ಷರು:- ಅದರ ಬಗ್ಗೆ ಸರ್ಕಾರ ನೋಡಿ ಕ್ರಮ ತೆಗೆದುಕೊಳ್ಳುತ್ತದೆ. ಸಂಬಂಧಪಟ್ಟ

ಕಾಗದಪತ್ರಗಳನ್ನು ತಾವು ಕಳುಹಿಸಿದ್ದೀರಿ. ಅದನ್ನು ಪರಿಶೀಲನೆ ಮಾಡಬೇರು. ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಸಿ.ಬೈರೇಗೌಡ:- ಪರಿಶೀಲನೆ ಮಾಡಬೇಕಾದಂಥ ಅವಶ್ಯಕತೆಯೇ ಇಲ್ಲ.

ಅಧ್ಯಕ್ಷರು:- ಪರಿಶೀಲನೆ ಮಾಡಬೇಕಾದಂಥ ಅವಶ್ಯಕತೆ ಇಲ್ಲ ಎಂದು ನೀವು ಹೇಳುತ್ತೀರಿ.

ಶ್ರೀ ಸಿ.ಬೈರೇಗೌಡ:- ಕ್ರಮ ತೆಗೆದುಕೊಳ್ಳುವುದು ಅಷ್ಟೆ.

ಅಧ್ಯಕ್ಷರು:- ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಸಿ.ಬೈರೇಗೌಡ:- ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನಾದರೂ ಹೇಳಲಿ.

ಅಧ್ಯಕ್ಷರು:- ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಸರ್ಕಾರದವರು ಪರಿಶೀಲನೆ ಮಾಡಿ ಯಾವ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ಈಗಲೇ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ.ಬೈರೇಗೌಡ:- ನಾನು ಆ ರೀತಿ ಹೇಳಲಿಲ್ಲ. ನಿಮ್ಮ ಕಡತದಲ್ಲಿದೆ.

ಅಧ್ಯಕ್ಷರು:- ಆಯಿತು. ಅವರು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಮಾರ್ಚಿ ತಿಂಗಳಲ್ಲಿ ಅಯವ್ಯಯ ಮಂಡನೆಯಾಗಿದೆ. ಅದ್ದರಿಂದ ಈಗ ಸಪ್ಟೆಂಬರ್ ತಿಂಗಳಲ್ಲಿ ಈ ಪೂರಕ ಅಂದಾಜು ಬರುತ್ತಿದೆ. ಆದ್ದರಿಂದ ತಕ್ಷಣ ಎರಡು ದಿವಸಗಳೊಳಗಾಗಿ ಮಂಡನೆ ಮಾಡಿದ್ದಾರೆ ಎಂದು ಹೇಳುವಂಥ ವಾದ ಸರಿಯಲ್ಲ. ಶ್ರೀಮಾನ್ ವೈ.ಕೆ.ರಾಮಯ್ಯನವರು ಬೇರೆ ವ್ಯವಸಾಯೋತ್ಪನ್ನ ವಸ್ತುಗಳಲ್ಲೂ ಇದೇ ರೀತಿಯಾದರೆ ಆಲೂಗಡ್ಡೆಗೆ ಕೊಟ್ಟಂತೆ ಪರಿಹಾರವನ್ನು ಕೊಡುತ್ತೀರಾ ಎನ್ನುವ ಮಾತನ್ನು ಹೇಳಿದ್ದಾರೆ. ಆ ಪ್ರತಿಯೊಂದರಲ್ಲೂ ಆಯಾ ವಿಷಯಗಳಿಗೆ ಸಂಬಂಧಪಟ್ಟಂತೆ ವಿಚಾರ ಮಾಡಲಾಗುತ್ತದೆ. ಈಗಾಗಲೇ ಕಳೆದ ವರ್ಷ ಗುಲ್ಬರ್ಗದಲ್ಲಿ ತೊಗರಿ ಬೆಳೆಗೆ ನಷ್ಟವಾಯಿತು. ಆಗ ಸರ್ಕಾರದವರು ಮುಂದೆ ಪರಿಶೀಲನೆ ಮಾಡಿ ಅವರಿಗೆ ಪರಿಹಾರವನ್ನು ಕೊಟ್ಟರು. ಹಾಗೆಯೇ ಕೋಲಾರದವರಿಗೂ ಕೊಟ್ಟರು. ಇಂಥ ವಿಷಯ ಬಂದಾಗ ಆಯಾ ವಿಷಯಗಳ ಪ್ರಾಮುಖ್ಯತೆಯನ್ನು ಪರಿಶೀಲಿಸಿ ಪ್ರತ್ಯೇಕವಾದ ತೀರ್ಮಾನಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಈ ಪೂರಕ ಬೇಡಿಕೆ ವಿಚಾರ ಏನೂ ಹೇಳಲಿಲ್ಲ. ಆದರೆ ಶಾಸನಸಭಾ ಸದಸ್ಯರ....

ಶ್ರೀ ವೈ.ಕೆ.ರಾಮಯ್ಯ:- ನಾನು ಕೇಳಿದ್ದು ಬಹಳ ಪ್ರಾಮುಖ್ಯವಾದುದು. ಸಂವಿಧಾನದ 205ನೇ ಕಲಂ ಪ್ರಕಾರ ಯಾವುದನ್ನು ನೀವು ಪೂರಕ ಅಂದಾಜಿನಲ್ಲಿ ತರಬಹುದು? ಹೊಸ ಸೇವೆಗಳು ಮತ್ತು ಅನಿರೀಕ್ಷಿತವಾದಂಥ ಖರ್ಚು. ಹೌದಾ? ಅಷ್ಟರಮಟ್ಟಿಗೆ ನೀವು ಒಪ್ಪುತ್ತೀರಿ ಎಂದು ಕಾಣುತ್ತದೆ. ಹೊಸ ಸೇವೆಗಳಿಗಾಗಿ ಬೇಕಾದಂಥ ಖರ್ಚು ಮತ್ತೆ ಅನಿರೀಕ್ಷಿತವಾಗಿ ಬಂದಂಥ ಖರ್ಚು. ಬಹ ಪರಿಹಾರ ಅಥವಾ ಪ್ರವಾಹ ಪೀಡಿತ....

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ತಾವು ಹೇಳಿದ್ದನ್ನೆಲ್ಲಾ ಕೇಳಿ ಅರ್ಥ ಮಾಡಿ ಕೊಂಡಿದ್ದೇವೆ.

ಶ್ರೀ ವೈ.ಕೆ.ರಾಮಯ್ಯ:- ಅದಕ್ಕೆ ಉತ್ತರ ಕೊಡಿ ಎಂದು ಕೇಳಿದೆವು. ಆದರೇ ತಾವು ಮುಂದಕ್ಕೆ ಹೋಗುತ್ತಿದ್ದೀರಲ್ಲಾ. ಪ್ರವಾಹದ ಪರಿಹಾರ ಬಿಟ್ಟು ಉಳಿದಂತೆ ನೀವು ಪೂರಕ ಅಂದಾಜಿನಲ್ಲಿ ತಂದಿರುವುವಂಥದ್ದು ಯಾವುದು ಹೊಸ ಸೇವೆಯಲ್ಲಿ ಬರುತ್ತದೆ, ಯಾವುದು ಅನಿರೀಕ್ಷಿತವಾದಂಥ ಖರ್ಚು, ಅದಕ್ಕೆ ನನಗೆ ಉತ್ತರ ಕೊಡಿ ಸ್ವಾಮಿ. ನನಗೆ ಬೇರೆ ಯಾವುದೂ ಬೇಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ರಾಮಯ್ಯನವರೂ ವಕೀಲರು. ನಾನು ಸಹ ಸಂವಿಧಾನವನ್ನು ಎಂಟು ವರ್ಷಪಾಠ ಮಾಡಿದ್ದೇನೆ. ಅದರ ವಿಶ್ಲೇಷಣೆ ಮಾಡುವ ಅಗತ್ಯವಿಲ್ಲ.

SRI Y.K.RAMAIAH:- That is why I feel that you are competent to answer and that is why I am asking this question.

SRI HARNNALLY RAMASWAMY:- Don't think you are the expert on the subject.

SRI Y.K.RAMAIAH:- I never claimed it. That is why I posed the question.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಪೂರಕ ಅಂದಾಜುಗಳಲ್ಲಿ ಹೊಸ ಸೇವೆಗಳೂ ಬರುತ್ತವೆ. ಇದ್ದ ಸೇವೆಗಳಲ್ಲೇ ಖರ್ಚು ಹೆಚ್ಚು ಮಾಡಿದ್ದೂ ಕೂಡ ಬರುತ್ತದೆ. ಅಧ್ಯಕ್ಷರಾಗಿರತಕ್ಕಂಥವರು, ಸರ್ಕಾರದಲ್ಲಿ ಇದ್ದವರು ತಾವೆಲ್ಲಾ ಇದ್ದೀರಿ. ತಮಗೆ ಗೊತ್ತಾಗುತ್ತದೆ. ಪ್ರತಿ ವರ್ಷ ಉದಾಹರಣೆಗಾಗಿ ಹೇಳುವುದಾದರೆ 80-81 ರಲ್ಲಿ 390 ಕೋಟಿ ಪೂರಕ ಅಂದಾಜಿನಲ್ಲಿ ಬಂದಿದೆ; 83-84ರಲ್ಲಿ 551 ಕೋಟಿ ರೂಪಾಯಿ ಬಂದಿದೆ; ಈಚೆಗೆ 93-94 ರಲ್ಲಿ 1472 ಕೋಟಿ ರೂಪಾಯಿ ಪೂರಕ ಅಂದಾಜಿನಲ್ಲಿ ಒಪ್ಪಿಗೆಯಾಗಿದೆ. ಈ ವರ್ಷ 191 ಕೋಟಿ 67 ಕೊಡ ಪೂರಕ ಆಂದಾಜಿನಲ್ಲಿ ಬಂದಿದೆ. ಅದರಿಂದ ಇದು ಹೊಸ ವಿಷಯವಲ್ಲ. ಈ ಸಭೆಗೆ ಅಧಿಕಾರ ಇರತಕ್ಕಂಥದ್ದು. ಸಂವಾಧಾನಾತ್ಮಕವಾದುದು. ಅದ್ದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ತಿಳಿದುಕೊಳ್ಳಬೇಕು.

ಶ್ರೀ ವೈ.ಕೆ.ರಾಮಯ್ಯ:-ಕೇಳಿದ ಪ್ರಶ್ನೆಗೆ ಉತ್ತರ ಕೊಡುವುದನ್ನು ಬಿಟ್ಟು ಯಾವುದ್ಯಾವುದೋ ಉತ್ತರ ಕೊಡುತ್ತೀರಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:-ನಮ್ಮ ಉತ್ತರ ಕೇಳಿ ನಿಮಗೆ ಸಮಾಧಾನವಾಗದಿದ್ದರೆ ಅದು ನಿಮಗೆ ಬಿಟ್ಟಂಥ ವಿಷಯ.

ಶ್ರೀ ವೈ.ಕೆ.ರಾಮಯ್ಯ:- ನನಗೆ ಬೇಕಾಗಿಲ್ಲ. ಇದು ರಾಜ್ಯದ ಜನತೆಗೆ ಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ನಾವು ರಾಜ್ಯದ ಜನತೆಗೆ ಸಮಾಧಾನ ಮಾಡುತ್ತೇವೆ. ತಾವು ಬೇರೆ ವಿಷಯಗಳೆಲ್ಲಾ ಹೇಳಿದ್ದೀರಿ. ಜನತೆ ಒಪ್ಪಬೇಕು ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಮೂರು ತಿಂಗಳ ಕಾಲ ಕಾಯಿರಿ. ಜನಗಳು ನಾವು ಮಾಡಿದ್ದು ಸರಿಯೋ ನೀವು ಹೇಳುತ್ತಿರುವುದು ಸರಿಯೋ ಎನ್ನುವ ತೀರ್ಮಾನವನ್ನು ಕೊಡುತ್ತಾರೆ. ನೀವು ಜನಗಳು ಒಪ್ಪಬೇಕು, ಪ್ರಧಾನಮಂತ್ರಿಗಳು ಒಪ್ಪುವುದಿಲ, ಪ್ಲಾನಿಂಗ್ ಕಮೀಷನ್ ಒಪ್ಪುವುದಿಲ್ಲ. ಅಭಿವೃದ್ಧಿ ಬಗ್ಗೆ ಏನು ಸಾಧನೆಯಾಗಿದೆ ಎನ್ನುವ ಬಗ್ಗೆ ಪ್ರಧಾನಮಂತ್ರಿಯಾಗಲಿ, ಪ್ಲಾನಿಂಗ್ ಕಮಿಷನ್ ಆಗಲಿ ಬೇಕಿಲ್ಲ ಎಂದು ಹೇಳಿದಿರಿ. ಜನಗಳೂ ಕೂಡ ಅವರ ಜೊತೆಯಲ್ಲಿ ಇನ್ನು ಮೂರು ತಿಂಗಳಿನಲ್ಲಿ ಉತ್ತರವನ್ನು ಕೊಡುತ್ತಾರೆ. ಕಾದು ನೋಡಿ.

ಶ್ರೀ ವೈ.ಕೆ.ರಾಮಯ್ಯ:- ನೀವು ಯಾವತ್ತೂ ಜನಗಳ ಮುಂದೆ ಹೋಗಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:-ಮತ್ತೆ ಹಾಲು ಉತ್ಪಾದನೆಗೆ ಸಂಬಂಧಪಟ್ಟಂತೆ ಮೂರು ಕೋಟಿ.

ಶ್ರೀ ವಾಟಾಳ್ ನಾಗರಾಜ್:-ನನ್ನ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಹೊರಟಿರಿ. ಆದರೆ ಮರೆತುಬಿಟ್ಟಿರಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:-ನಿಮ್ಮ ಪ್ರಶ್ನೆಗೆ ಬರುತ್ತೇನೆ. ಕೇಂದ್ರದ ಡೈರಿ ಡೆವಲಪ್ ಮೆಂಟ್ ಕಾರ್ಪೊರೇಷನ್‌ಗೆ ಕೊಡಬೇಕಾದಂಥ ಹಣ ಹಾಲಿನ ಸಂಘಗಳು ಸುಮಾರು ಎರಡು ನೂರು ಲಕ್ಷ ಅದಕ್ಕೆ ಮೊದಲು ನಾವು ಆಯವ್ಯಯದಲ್ಲಿ ಕೊಡಮಾಡಿರಲಿಲ್ಲ. ಒದಗಿಸಿರಲಿಲ್ಲ ಅದನ್ನು ಕೊಡುವುದಕ್ಕೋಸ್ಕರವಾಗಿ ಈ ಎರಡು ಕೋಟಿ ರೂಪಾಯಿಗಳನ್ನು ಈ ಪೂರಕ ಅಂದಾಜಿನಲ್ಲಿ ನಮೂದಿಸಲಾಗಿದೆ. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಶಾಸನಸಭಾ ಸದಸ್ಯರ ಕುಂದುಕೊರತೆಗಳ ಬಗ್ಗೆ ಹೇಳಿದರು. ಈ ಬಗ್ಗೆ ಇದೇ ಸಭೆಯಲ್ಲಿ ಮೂರು ನಾಲ್ಕು ದಿವಸದ ಹಿಂದೆ ವಿಷಯ ಚರ್ಚೆಯಾಗಿ ದೀರ್ಘವಾದ ಉತ್ತರವನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅದರಲ್ಲಿ ಪ್ರೊಟೋಕಾಲ್ ಇದೆ. ಒಂದು ಕಾರ್ಯಪದ್ಧತಿ ಇದೆ. ಪ್ರತಿಯೊಂದು ಶಾಸನಸಭಾ ಕ್ಷೇತ್ರದಲ್ಲೂ ಆಯಾ ಶಾಸನಸಭಾ ಸದಸ್ಯರಿಗೆ ಕೊಡಬೇಕಾದಂಥ ಗೌರವವನ್ನು ಕೊಟ್ಟೇತೀರಬೇಕು ಎನ್ನುವುದನ್ನು ಕೂಡ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಅಧಿಕಾರಿ ವರ್ಗದವರಲ್ಲಿ ಯಾರಾದರು ಆ ರೀತಿ ಮಾಡದೇ ಹೋಗಿದ್ದರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆ ರೀತಿಯಾದಂಥ ಯಾವುದಾದರೂ ವಿಷಯಗಳನ್ನು ನಮ್ಮ ಮಹದೇವ್‌ರವರಾಗಲಿ, ಹರ್ಷಕುಮಾರಗೌಡರಾಗಲೀ ತಕ್ಷಣ ಬರೆದು ನಮ್ಮ ಮುಖ್ಯಮಂತ್ರಿಗಳಿಗೆ ತಿಳಿಸಿದರೆ ಅವರು ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ವಿಚಾರಣೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಇದ್ರಲ್ಲಿ ಯಾವುದೆ ರೀತಿಯಾದ ಸಂಶಯ ಬೇಡ.

ಶ್ರೀ ಆರ್.ವಿ.ದೇಶಪಾಂಡೆ:-ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರೇ, ಕ್ರಮ ತೆಗೆದುಕೊಳ್ಳುವುದಲ್ಲ. ಮೇಲ್ಮನೆಯಲ್ಲಿ ಈಗಾಗಲೇ ನಗರಾಭಿವೃದ್ಧಿ ಸಚಿವರು ಕ್ರಿಮಿನಲ್ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ಅದನ್ನು ಜಾರಿಗೊಳಿಸುತ್ತೇವೆಂದು ಹೇಳಿ, ಸಾಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ವಿಚಾರ ತಿಳಿದುಕೊಳ್ಳಬೇಕು. ಯಾವುದೇ ವಿಷಯದಲ್ಲಾಗಲಿ ಹೀಗೆಯೇ ಮಾಡುತ್ತೇವೆಂದು ಖಚಿತವಾಗಿ ಇಲ್ಲಿ ಹೇಳುವುದಕ್ಕಿಂತ ಮುಂಚಿತವಾಗಿ ಅದಕ್ಕೆ ಸಂಬಂಧಪಟ್ಟ ಕಡತವನ್ನು ನೋಡಿ ವಿಚಾರಣೆಯಾಗಿದ್ದರೆ ಅದನ್ನು ಪರಿಶೀಲಿಸಿ ತೀರ್ಮಾನಿಸಬೇಕಾಗುತ್ತದೆ. ತಾವು ಹೇಳಿರುವುದು ಮುಖ್ಯವಾದುದೇ. ಆದರೆ, ಯಾವುದೇ ಕಾರ್ಯ ಮಾಡಬೇಕಾದರೂ ಕೂಡ ಒಂದು ವಿಧಿ, ನಿಯಮ, ಕ್ರಮಗಳಿವೆ. ಅವು ಈ ಸದನದಲ್ಲಿ ನಮ್ಮನ್ನು ಬಂಧಿಸುತ್ತವೆ. ತಾವು ಇದನ್ನು ಮುಖ್ಯಮಂತ್ರಿಗಳ ಗಮನಕ್ಕೂ ತನ್ನಿ.

ಶ್ರೀ ಕೆ.ಹರ್ಷಕುಮಾರ ಗೌಡ:- ಸನ್ಮಾನ್ಯ ಮಂತ್ರಿಗಳೇ, ನಮ್ಮನ್ನು ಕೊಲೆ ಮಾಡುತ್ತೇವೆಂದು ಹೇಳಿದ ಅವರಿಗೆ ರಕ್ಷಣೆ ಕೊಡುತ್ತೇವೆಂದರೆ ಹೇಗೆ? ಕೊಲೆ ಮಾಡುತ್ತೇವೆಂದರೆ ಅದಕ್ಕೆ ತಾವು ಪತ್ರ ಬರೀರಿ ಎಂದರೆ ಪತ್ರ ಬರೆಯುವ ತನಕ ನಾವು ಇರಬೇಕಲ್ಲವೇ? ನಾನು ಇಲ್ಲಿ ಕುಳಿತುಕೊಂಡು ಪೋಸ್ಟ್ ಮಾಸ್ಟರ್‌ಗೆ ಪತ್ರ ಬರೆಯಲೇ?

ಶ್ರೀ ಎಂ.ಮಹದೇವ್:-ಇದರ ಬಗ್ಗೆ ಲಿಖಿತ ದೂರನ್ನು ನಾವು ಮುಖ್ಯಮಂತ್ರಿಗಳಿಗೆ ನೀಡಿದ್ದೇವೆ ಮತ್ತು ಕಂದಾಯ ಮಂತ್ರಿಗಳಿಗೂ ಸಹ ಕೊಟ್ಟಿದ್ದೇವೆ. ದೂರಿನ ಆಧಾರದ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ? ತಹಶೀಲ್ದಾರ್ ಮೇಲೆ ಕಂದಾಯ ಸಚಿವರು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇದುವರೆವಿಗೂ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಮ್ಮ ಮೂಲಕ ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಕೆ.ಹರ್ಷಕುಮಾಕ ಗೌಡ:- ಅವರನ್ನು ಬಂಧಿಸುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಿ?

ಶ್ರೀ ಧರ್ಮಸಿಂಗ್ (ಕಂದಾಯಸಚಿವರು) :- ಮೊನ್ನೆ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಲು ತಮ್ಮನ್ನು ತಹಶೀಲ್ದಾರ್‌ರವರು ಕರೆಸಿಲ್ಲವೆಂದು ವಿಷಯವನ್ನು ನಿನ್ನೆ ದೂರವಾಣಿ ಕರೆ ಮುಖಾಂತರ ಮಾನ್ಯಸದಸ್ಯರು ಪ್ರಸಾಪಿಸಿದ್ದಾರೆ ಮತ್ತು ನನಗೆ ಒಂದು ಪತ್ರ ಕೂಡ ಕೊಟ್ಟಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಪ್ರತಿಯೊಂದು ಕ್ಷೇತ್ರದಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಅಯಾ ಕ್ಷೇತ್ರದ ಶಾಸಕರುಗಳೇ ಅಧ್ಯಕ್ಷತೆ ವಹಿಸಬೇಕೆಂದು ಹೇಳಿದ್ದಾರೆ. ಈ ವಿಷಯವನ್ನು ಮೊನ್ನೆ ವಿರೋಧ ಪಕ್ಷದನಾಯಕರು, ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಇನ್ನಿತರ ಸದಸ್ಯರೂಸಹ ಹೇಳಿದ್ದಾರೆ. ನನಗೂ ನಿನ್ನೆ ದೂರವಾಣಿ ಮುಖಾಂತರ ತಿಳಿಸಿದ್ದಾರೆ. ಶಾಸಕರುಗಳು ಜನ ಪ್ರತಿನಿಧಿಗಳಾಗಿದ್ದು, ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನೆರವೇರಿಸಬೇಕು; ಆದರೆ ಅಲ್ಲಿನ ತಹಶೀಲ್ದಾರರು ಆ ರೀತಿ ಮಾಡಿಲ್ಲವೆಂದು ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತೇವೆ.

ಶ್ರೀ ಕೆ.ಹರ್ಷಕುಮಾರ ಗೌಡ :- ನಮ್ಮನ್ನೆ ಕೊಲೆ ಮಾಡುತ್ತೇವೆಂದು ಹೇಳುತ್ತಿದ್ದಾರೆ, ಪತ್ರ ಬರೀರಿ ಎಂದು ಹೇಳುತ್ತಿದ್ದೀರಲ್ಲಾ. ಇದು ಈ ಸದನದ ಒಬ್ಬ ಶಾಸಕರಿಗೆ ಕೊಡುವ ಉತ್ತರವೇ? ಯಾವ ಒಬ್ಬ ಅಧಿಕಾರಿಯನ್ನು ಬಂಧಿಸುತ್ತೇವೆಂದು ಹೇಳಿದ್ದರೋ, ಅವರನ್ನು

ಒಂದು ವಾರವಾಯಿತು ಇನ್ನೂ ಬಂಧಿಸಿಲ್ಲ. ಮೇಲ್ಮನೆಯಲ್ಲಿ ಮಂತ್ರಿಗಳು ಹೇಳಿಕೆ ಕೊಟ್ಟರೆ ಅದರ ಫಲ ನಾವು ಅನುಭವಿಸಬೇಕೆ? ಇವೊತ್ತಿನ ದಿವಸ ಆತ ಮೈಸೂರು ನಗರದ ಜನತೆಯ ಹೆಸರನ್ನು ಹರಾಜು ಹಾಕುತ್ತಿದ್ದಾನೆ. ನನ್ನನ್ನು ಕೇಳುವುದಕ್ಕೆ ಪ್ರಧಾನಮಂತ್ರಿಗಳು, ಮುಖ್ಯಮಂತ್ರಿಗಳುಯಾರು ಎಂದು ಹೇಳಿಕೆ ಕೊಟ್ಟಿದ್ದಾನೆ. ಮತ್ತು ಯಾವ ಆಧಾರದ ಮೇಲೆ ಈ ರೀತಿ ಹೇಳಿಕೆ ಕೊಟ್ಟಿದ್ದೀರೆಂದು ಪ್ರಧಾನ ಮಂತ್ರಿಗಳ ಕಛೇರಿಯಿಂದ ಪತ್ರ ಬಂದಿದೆ. ಇವೊತ್ತು ನಾನು ಸದಸದಲ್ಲಿ ಕೇಳುತ್ತಿರುವುದೇನೆಂದರೆ, ಇಂತಹ ಭ್ರಷ್ಟ ಅಧಿಕಾರಿ ವಿರುದ್ಧ ನನಗೆ ಸೂಕ್ತ ರಕ್ಷಣೆ ಕೊಡುತ್ತೀರೋ ಇಲ್ಲವೋ ಒಂದು ಪತ್ರ ಬರೆಯಿರಿ ಎಂದರೆ ಹೇಗೆ ? ಈ ಪ್ರಶ್ನೆಗೆ ಉತ್ತರವನ್ನು ಸಭಾಧ್ಯಕ್ಷರ ಮೂಲಕ ಸಂಬಂಧಪಟ್ಟ ಮಂತ್ರಿಗಳಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ :- ಮತ್ತೊಂದು ವಿಷಯವನ್ನು ವಿರೋಧ ಪಕ್ಷದ ಸದಸ್ಯರಾದ ವೈ.ಕೆ.ರಾಮಯ್ಯನವರು ಪ್ರಸ್ತಾಪಿಸಿ, 25 ಕೋಟಿ ರೂಪಾಯಿಗಳನ್ನು ಬಡ್ಡಿಗೋಸ್ಕರ ನಿಗದಿಪಡಿಸಿದ್ದೀರಿ, ಏಕೆ? ಇದು ಮೊದಲೇ ಗೊತ್ತಿರಲಿಲ್ಲವೇ ಎಂದು ಕೇಳಿದ್ದಾರೆ. ಇದಕ್ಕೆ ಉತ್ತರ ರೂಪವಾಗಿ ನಾವು ಹೇಳುವುದೇನೆಂದರೆ, ಮಾರ್ಚಿ ತಿಂಗಳಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಸರ್ಕಾರದ ಹತ್ತಿರ 140 ಕೋಟಿ ರೂಪಾಯಿಗಳನ್ನು ಡಿಪಾಸಿಟ್ ಮಾಡಿದರು ಇದು ಮೊದಲು ಗೊತ್ತಿರಲಿಲ್ಲ. ಬಜೆಟ್ ತಯಾರಿಸುವಾಗ ಆ ಡಿಪಾಸಿಟ್ ಮಾಡಿದ್ದರ ಮೇಲೆ ಬಡ್ಡಿ ಕಟ್ಟುವುದಕ್ಕೋಸ್ಕರ 25 ಕೋಟಿ ರೂಪಾಯಿಗಳನ್ನು ಪ್ರಾವಿಷನ್ ಮಾಡಿಕೊಂಡಿದ್ದೇವೆ. ಆದುದರಿಂದ, ಈಗಾಗಲೇ ಮಾನ್ಯ ಸದಸ್ಯರುಗಳು ಕೇಳಿರತಕ್ಕಂಥ ಎಲ್ಲಾ ವಿಷಯಗಳಿಗೂ ಬಹುತೇಕ ಸರ್ಕಾದ ಅಭಿಪ್ರಾಯಗಳನ್ನು ತಿಳಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸದಸ್ಯರಾದ ಹರ್ಷಕುಮಾರ ಗೌಡರು ತಮ್ಮ ಮೇಲೆ ಕೊಲೆ ಬೆದರಿಕೆಯೊಡ್ಡಲಾಗಿದೆಯೆಂದು ಹೇಳಿರುವುದಕ್ಕೆ ತಾವು ಉತ್ತರ ಕೊಡಲಿಲ್ಲ. ಸದನದಲ್ಲಿ ಗೃಹಮಂತ್ರಿಗಳು ಗಂಭೀರವಾಗಿ ಕುಳಿತಿದ್ದಾರೆ. ತಮ್ಮ ಮೇಲೆ ಕೊಲೆ ಬೆದರಿಕೆ ಹಾಕಿದ್ದಾರೆಂದು ಒಬ್ಬ ಸದಸ್ಯರು ಸಂಬಂಧಪಟ್ಟವರ ಮೇಲೆ ಆರೋಪಿಸುತ್ತಿದ್ದರೂ ತಾವು ಮೂಕಪ್ರೇಕ್ಷಕರಾಗಿ ಕುಳಿತಿದ್ದು, ಇದಕ್ಕೆ ಉತ್ತರ ಕೊಡುವವರು ಮಾತನಾಡುತ್ತಿಲ್ಲ. ನಮಗೆ ರಕ್ಷಣೆ ಕೊಡತಕ್ಕಂಥ ಅಧ್ಯಕ್ಷರು ಇದನ್ನು ಗಮನಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿ ಕೊಳುತ್ತಿದ್ದೇನೆ. ತಾವು ನೇರವಾಗಿ ಸರ್ಕಾರಕ್ಕೆ ಹೇಳಬೇಕು.

ಶ್ರೀ ಜೆ.ಸಿ. ಮಧುಸ್ವಾಮಿ :- ನಾನು ವೈರ್‌ಲೆಸ್ ಸೆಟ್ ಅನ್ನು ಬೆಂಗಳೂರಿನಲ್ಲಿದಾಗಲೂ ಉಪಯೋಗಿಸುತ್ತಿದ್ದೆ, ಈಗ ಮೈಸೂರಿನಲ್ಲೂ ಉಪಯೋಗಿಸುತ್ತೇನೆ, ಅದನ್ನು ಕೇಳಲು ಇವರಿಗೇನು ಅಧಿಕಾರವಿದೆ? ನಾನು ಮುನಿಸಿಪಲ್ ಕೌನ್ಸಿಲ್ ಮುಂದೆ ಹೋಗುತ್ತೇನೆಂದು ಒಬ್ಬ ನಗರಸಭೆಯ ಆಯಕ್ತರು ಸರ್ಕಾರದ ಬಗ್ಗೆ ಮಾತನಾಡುತ್ತಿದ್ದು, ಇದನ್ನು ಕೇಳಿದಂಥ ಹರ್ಷಕುಮಾರ್ ಗೌಡರನ್ನು ಹೊಡೆಸುತ್ತೇವೆ. ಎನ್ನುವುದು. ಮತ್ತು 150 ರೂಪಾಯಿಗಳಿಗೆ ಬಸ್ ನಿಲ್ದಾಣವನ್ನು ಬಾಡಿಗೆಗಾಗಿ ಮಾರುವುದು, ಸರ್ಕಾರಿ ಕಟ್ಟಡಗಳಲ್ಲಿ ಬೇಕಾದ ಕಡೆ ಬೇಕಾದವರಿಗೆ ಸಂಘ - ಸಂಸ್ಥೆಗಳನ್ನು ಆರಂಭಿಸಿಕೊಡುವುದು. ಇಂತಹ ಆಯುಕ್ತರ ಮೇಲೆ ಕ್ರಮ ತೆಗೆದು ಕೊಳ್ಳಿ ಎಂದು ಸರ್ಕಾರವನ್ನು ಬೇಡಬೇಕೇ?

ಶ್ರೀ ಎಂ. ಮಹದೇವ :- ಶಾಸಕರನ್ನು ಕೊಲೆ ಮಾಡುತ್ತೇವೆಂದು ಬೆದರಿಕೆ ಬಂದಾಗ ಅದು ಸದನದಲ್ಲಿ ಪ್ರಸ್ತಾಪವಾದರೂ ವಿಷಯವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಶಾಸಕರು ಹೇಗೆ ಮುಕ್ತವಾಗಿ ಕೆಲಸ ಮಾಡುವುದಕ್ಕಾಗುತ್ತದೆ? ಕೊಲೆ ಬೆದರಿಕೆ ಒಬ್ಬ ಶಾಸಕರಿಗೆ ಬಂದಿದೆಯೆಂದರೆ ಇದು ಎಲ್ಲಾ ಶಾಸಕರಿಗೂ ಅನ್ವಯಿಸುತ್ತದೆ. ಈ ರೀತಿಯಾದರೆ ನಮ್ಮನಮ್ಮ ಕ್ಷೇತ್ರದಲ್ಲಿ ಕೆಲಸವನ್ನು ಮಾಡಲು ಹೇಗೆ ಸಾಧ್ಯವಾಗುತ್ತದೆ? ಮಾನ್ಯ ಹರ್ಷಕುಮಾರ್ ಗೌಡರ ಕ್ಷೇತ್ರ ಮೈಸೂರು, ಅವರ ಕ್ಷೇತ್ರದಲ್ಲಿರತಕ್ಕ ಅಧಿಕಾರಿಯೇ ಅವರ ಮೇಲೆ ಬೆದರಿಕೆ ಹಾಕಿದಾಗ, ಅವರು ಯಾವ ರೀತಿಯಲ್ಲಿ ಕೆಲಸ ಮಾಡುವುದಕ್ಕಾಗುತ್ತದೆ? ಅವರು ಈ ಸದನದಲ್ಲಿ ಅವರ ಕಷ್ಟವನ್ನು ಹೇಳಿಕೊಂಡರೆ ತಪ್ಪೇನು? ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ಮಾನ್ಯ ಹಾರನಳ್ಳಿ ರಾಮಸ್ವಾಮಿಯವರಿಗೆ ಪರಿಸ್ಥಿತಿ ಇನ್ನೂ ಅರ್ಥವಾಗಿಲ್ಲವೆಂದು ಕಾಣಿಸುತ್ತದೆ. ಏಕೆಂದರೆ ಅವರು ಜನರಿಂದನೇರವಾಗಿ ಆಯ್ಕೆಯಾಗಿ ಬಂದಿದ್ದಾರೆ. ಗೊತ್ತಾಗುತ್ತಿತ್ತು. ಅವರು ನೇರವಾಗಿ ವಿಧಾನ ಪರಿಷತ್‌ನಿಂದ ಆಯ್ಕೆಯಾಗಿ ಬಂದಿದ್ದರೆ. ಅವರಿಗೆ ಜನಸಾಮಾನ್ಯರ ಕಷ್ಟ ಗೊತ್ತಾಗುವುದಿಲ್ಲ. ಅಧಿಕಾರಿಗಳು ಯಾವ ರೀತಿ ವರ್ತಿಸುತ್ತಾರೆ, ಶಾಸಕರ ಮೇಲೆ ಯಾವ ರೀತಿ ದಬ್ಬಾಳಿಕೆ ಮಾಡುತ್ತಾರೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಬಹುಶ: ತಮಗೆ ಪೂರಕ ಬೇಡಿಕೆಗಳು ಮುಖ್ಯವಾಗಿರಬಹುದು, ಆದರೆ ಅದಕ್ಕಿಂತ ಮುಖ್ಯವಾದುದು, ಮಹತ್ವವಾದುದು ಇವರ ಸಮಸ್ಯೆ. ಅವರು ರಕ್ಷಣೆಗೆ ಅಧ್ಯಕ್ಷರ ಮೊರೆ ಹೋದಾಗ ಅದನ್ನು ಗಹನವಾಗಿ ತೆಗೆದು ಕೊಳ್ಳದಿದ್ದರೆ ಹೇಗೆ? ಗೃಹ ಮಂತ್ರಿಗಳಿದ್ದಾರೆ; ಅವರು ಮೌನವಾಗಿದ್ದಾರೆ. ಅವರೇಕೆ ಇದರ ಬಗ್ಗೆ ಮೌನವಾಗಿ ಕುಳಿತುಕೊಂಡಿದ್ದಾರೆ? ಶಾಸಕರಾದ ನಮ್ಮನ್ನೇ ರಕ್ಷಣೆ ಮಾಡದಿದ್ದರೆ ನೀವು ರಾಜ್ಯದ ಜನರನ್ನು ರಕ್ಷಣೆ ಮಾಡುತ್ತೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :- ನೀವು ಮೊದಲು ಅವರಿಗೆ ರಕ್ಷಣೆಯನ್ನು ಕೊಡಿ. ಅವರು ಸತ್ತ ಮೇಲೆ ಏನು ರಕ್ಷಣೆ ಕೊಡುತ್ತೀರಿ? ಅದರಿಂದೇನು ಪ್ರಯೋಜನ?

ಶ್ರೀ ಹಾರನಳ್ಳಿ ರಾಮಸ್ವಾಮಿ:- ಶಾಸಕರಿಗೆ ರಕ್ಷಣೆಯನ್ನು ಕೊಡತಕ್ಕ ಜವಾಬಾದ್ದಾರಿ ಸರ್ಕಾರಕ್ಕಿದೆ. ಶಾಸಕರಿಗೆ ಯಾರಾದರು ತೊಂದರೆ ಕೊಟ್ಟರೆ. ಇಲ್ಲವೇ ಮಾನ್ಯ ಹರ್ಷಕುಮಾರ್ ಗೌಡರಿಗೆ ಮಾಡಿರತಕ್ಕ ಭಯೋತ್ಪಾದನೆಗೆ ಸಂಬಂಧಪಟ್ಟವರ ಮೇಲೆ ಸರ್ಕಾರ ಕ್ರಮವನ್ನು ತೆಗೆದುಕೊಂಡೇ ತೆಗೆದುಕೊಳ್ಳುತ್ತದೆ. ಆದರೆ ಅದನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಹರ್ಷಕುಮಾರ್ ಗೌಡರು ಮತ್ತು ಗೃಹ ಮಂತ್ರಿಗಳು ಕುಳಿತುಕೊಂಡು ಮಾತನಾಡಿ ಮುಂದಿನ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ 191 ಕೋಟಿ 67 ಲಕ್ಷದ 55 ಸಾವಿರದ ಪೂರಕ ಅಂದಾಜನ್ನು ಸಭೆಯು ಒಪ್ಪಿಕೊಳ್ಳಬೇಕೆಂದು ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ನಾನು ಪ್ರಸಾತವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾಪವೇನೆಂದರೆ:-

31-3-1995ರಂದು ಕೊನೆಗೊಳ್ಳಲಿರುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ್ 1,3,4,5,7,9,10,13,15,16,21,26,28,29,32,33,36 37,41,42,43,47,51,54,55,58,60,6 ಮತ್ತು 62ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸಾರ್ಕಾರಕ್ಕೆ ರಾಜ್ಯಸ್ವಖಾತೆಯಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗಳನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳಿಗೆ ಮಂಜುರಾತಿ ನೀಡಲ್ಪಟ್ಟಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 1-ವ್ಯವಸಾಯ(ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವ್ಯವಸಾಯ (ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ಹೊರತು)' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸಾರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 225,91,38,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 13,95,51,000 ರೂ.ಗಳಿಗಿಂತ ಮೀರದಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನ ಕ್ರಮಾಂಕ : -3 - ಪಶುಸಂಗೋಪನಾ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಪಶುಸಂಗೋಪನೆಗೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 89,09,82,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:- 4 - ಮೀನುಗಾರಿಕೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮೀನುಗಾರಿಕೆಗೆ' ಸಂದಾಯ ಮಾಡುವಲ್ಲಿ ಬರತ್ತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 18,53,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 230,20,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:- 5 - ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು(ಜವಳಿ ಸಕ್ಕರೆ ಮತ್ತ ರೇಷ್ಮೆ ವ್ಯವಸಾಯದ ಹೊರತು)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಉದ್ಯಮಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 33,95,33,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,91,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮಾತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ :- 7 - ಚಿಕ್ಕಪುಟ್ಟ ಉದ್ಯಮಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ '' ಚಿಕ್ಕಪುಟ್ಟ ಉದ್ಯಮಗಳಿಗೆ '' ಸಂದಾಯ ಮಾರುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 115,04,71,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ30,33,60,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು ''

ಅಭಿಯಾಚನೆ ಕ್ರಮಾಂಕ : -9 - ಜವಳಿ ಉದ್ಯಮಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಜವಳಿ ಉದ್ಯಮಗಳು ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 49,80,46,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,39,07,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ: -10 - ಸಕ್ಕರೆ ಕೈಗಾರಿಕೆಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ '' ಸಕ್ಕರೆ ಕೈಗಾರಿಕೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸಾರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 20,01,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:- 13 - ಉನ್ನತ ಶಿಕ್ಷಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಉನ್ನತ ಶಿಕ್ಷಣಕ್ಕೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 242,62,92,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ: -15- ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಕಲೆ, ಸಂಸ್ಕೃತಿ ಮತ್ತು ಕನ್ನಾಡಾಭಿವೃದ್ಧಿ''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 14,94,47,000ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ: -16-ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ'' ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವಖಾತೆಯಲ್ಲಿ 1336,01,02,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-21- ಸಣ್ಣ ಉಳಿತಾಯಗಳು ಮತ್ತು ರಾಜ್ಯ ಲಾಟರಿ, ವಿಮ ಮತ್ತು ರಾಜ್ಯ ಲೆಕ್ಕಪತ್ರ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಣ್ಣ ಉಳಿತಾಯಗಳು ರಾಜ್ಯ ಲಾಟರಿ, ವಿಮೆ ಮತ್ತು ರಾಜ್ಯ ಲೆಕ್ಕ ಪತ್ರ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 42,33,70,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 80,00,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನ ಕ್ರಮಾಂಕ: -26- ಸಾರಿಗೆ ಸೇವೆಗಳು

''ರಾಜ್ಯಪಾಲರಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ '' ಸಾರಿಗೆ ಸೇವೆ'' ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 38,70,71,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,38,00,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-28- ಬಂದೀ ಖಾನೆಗಳು, ಇಗ್ನಿ ಶಾಮಕ ಮತ್ತು ಸೈನಿಕರ ಕಲ್ಯಾಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಬಂದೀಖಾನೆಗಳು, ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 31,27,49,000ರೂ.ಗಳಿಗಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ :- 29-ವಾರ್ತಾ ಮತ್ತು ಪ್ರಚಾರ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಾರ್ತಾ ಮತ್ತು ಪ್ರಚಾರ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 9,88,71,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲೆ 20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲೆ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರೂ ಮಾಡುವುದು''

ಅಭಿಯಾಚನೆ ಕ್ರಮಾಂಕ :- 32- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 374,21,06,000 ರೂ.ಗಳಿಗಿಂತ ವೀರದ ಮೊತ್ತವನ್ನು (ಲೇಖನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ - 33, ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 62,49,79,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 66,29,40,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 66,29,40,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ - 36-ಭಾರಿ ಮತ್ತು ಮಧ್ಯಮ ನೀರಾವರಿ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 330,05,83,000 ರೂಪಾಯಿಗಳಿಗಿಂತ

ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1052,81,28,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ :- 37-ರಾಜ್ಯ ವಿಧಾನ ಮಂಡಲ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ರಾಜ್ಯ ವಿಧಾನಮಂಡಲ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 10,39,32,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-41-ಸಚಿವಾಲಯ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಚಿವಾಲಯಕ್ಕೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 31,68,75,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-42-ಜಿಲ್ಲಾಡಳಿತ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಅರ್ಥಿಕ ವರ್ಷದಲ್ಲಿ ''ಜಿಲ್ಲಾಡಳಿತಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 60,46,24,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನು ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-43-ಸಾಮಾನ್ಯ ಆಡಳಿತ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಾಮಾನ್ಯ ಆಡಳಿತ ಇತ್ಯಾದಿ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 73,14,45,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 16,10,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-47-ಕಟ್ಟಡಗಳು

''ರಾಜ್ಯಪಾಲಕ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಕ್ಟಡಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು

ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 12,50,55,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 111,13,60,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-51-ಭೂಕಂದಾಯ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಭೂಕಂದಾಯ ಇತ್ಯಾದಿ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 69,92,83,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,01,75,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-54-ವಕ್ಫ್

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಕ್ಫ್''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 355,50,000 ರೂ.ಗಳಿಗಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-55-ಸಹಕಾರ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಅರ್ಥಿಕ ವರ್ಷದಲ್ಲಿ ''ಸಹಕಾರ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 43,64,35,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,69,72,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-58-ಗ್ರಾಮೀಣ ಅಬಿವೃದ್ಧಿ ಮತ್ತು ಉದ್ಯೋಗ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವಖಾತೆಯಲ್ಲಿ 686,35,27,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ:-60 ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ.

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವಖಾತೆಯಲ್ಲಿ 230,29,74,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,56,00,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕು''

ಅಭಿಯಾಚನೆ ಕ್ರಮಾಂಕ:-61-ಮಹಿಳಾ ಮತ್ತು ಮಕ್ಕಳ ಕಲ್ಯಾಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಮಹಿಳಾ ಮತ್ತು ಮಕ್ಕಳ ಕಲ್ಯಾಣ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವಖಾತೆಯಲ್ಲಿ 224,18,70,000ರೂ.ಗಳಿಗಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 100,00,000ರೂ.ಗಳಿಗಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕು''

ಅಭಿಯಾಚನೆ ಕ್ರಮಾಂಕ:-62-ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1995ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ''ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜ್ಯಸ್ವಖಾತೆಯಲ್ಲಿ 42,14,50,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ)ಮಂಜೂರು ಮಾಡುವುದು''

ಶಾಸನ ರಚನಾ ಕಲಾಪಗಳು

1994ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :- ಮಾನ್ಯ ಅಧ್ಯಕ್ಷರೇ 1994ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.